ಬುಧವಾರ, ಜೂನ್ 4, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೌಶಲ ಪ್ರದರ್ಶನ...
ಪ್ರತಿಭಟನೆ ವೇಳೆ ಗುಂಪುಗಳನ್ನು ನಿಯಂತ್ರಿಸಲು ರಚಿಸಲಾದ ಮಹಿಳಾ ಕಾನ್‌ಸ್ಟೆಬಲ್‌ಗಳ ತಂಡವು ಹೈದರಾಬಾದ್‌ನ ಗೋಶಾಮಹಲ್‌ನ ಪೊಲೀಸ್ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಕೌಶಲ ಪ್ರದರ್ಶಿಸಿತು

TOYOTA

CREATING Awesome EXPERIENCES FOR OVER 25 YEARS

GREAT JOURNEYS DESERVE GREATER REWARDS

LOW ROI OF 5.99%* + SERVICE PACKAGE 5 FREE SERVICES* + EXTENDED WARRANTY OF 5 YEARS* + CORPORATE & EXCHANGE OFFERS*

URBAN CRUISER HYRYDER SELF-CHARGING HYBRID ELECTRIC SUV

STARTS AT ₹11.34 LAKHS ONLY*

SELF-CHARGING HYBRID ELECTRIC SUV

ADVANCED FEATURES
PANAROMIC SUNROOF,
VENTILATED SEATS

8 YEARS, SELF-CHARGING
HYBRID BATTERY WARRANTY

27.97 km/l**
BEST IN CLASS MILEAGE

THE COOL TOYOTA GLANZA

STARTS AT ₹6.90 LAKHS ONLY*

PETROL 22.94 km/l**

CNG 30.61 km/kg**

THE PREMIUM HATCHBACK

ADVANCED FEATURES
360° CAMERA,
HILL HOLD ASSIST,
CONNECTED CAR TECH

LOW COST OF OWNERSHIP
COMPLETE PEACE OF MIND

SPECIAL OFFERS FOR GOVERNMENT EMPLOYEES

*T&C apply. **Fuel efficiency as certified by test agency under rule 115 of CMVR, 1989 under standard test conditions. Actual mileage on road may vary. Creative visualisation: digitally created visual. Picture of the vehicle was not taken while driving.

Toyota i-CONNECT | Toyota Mobility Service Conversion | Fleet | Leasing | TOYOTA U TRUST Buy | Sell | Exchange - Used car | TOYOTA FINANCIAL SERVICES

Ravindu Toyota
Bangalore: [K R Puram, Magadi Rd, Marathahalli, Rajajinagar, Victoria Rd, Yeshwantpur]: 8058245555
Kolar: 9606090040
Tumkur: 9379189796

Viva Toyota
Bangalore: [Hebbal, Vidyaranyapura]: 9900027736
[Airport Rd, Kogilu]: 9900030617
Mysore Rd: 9900030620

Nandi Toyota
Bangalore: [Banashankari, Banaswadi, Bannerghatta, Bommanahalli, Whitefield]: 7022340713
Hosur Road: 9945255800
Kanakapura Rd: 9731369995
Queens Rd: 9741310066

Bharat Toyota
Bangalore: [Domlur]: 9741357683, 08047950000

Shodha Toyota
Bagalkot: 8147599463
Belgaum: Shahapur: 8147599461
Poona-Bangalore Road: 7899305505, 7760963774
Bijapur: 9606484983
Davangere: 9008952277
Hubli: 7204818810, 8123047553

Palace Toyota
Hunsur: 9663709743
Kodagu, Madikeri: 7022671919
Mandya: 9538874907
Mysore: Hootagalli: 9538874906
Krishnamurthy Puram: 9538874936

Shakti Toyota
Chikkamagaluru, Hassan, Kadur, Shivamogga: 9686652728
Sagara: 08183200402

United Toyota
Mangalore: [Bunt's Hostel, Padil]: 9686687581
Udupi: 9686687581

Karuna Toyota
Gulbarga: 7829990010
Raichur: 7829990021

BJS Toyota
Bellary: Hospet: 7829927943

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಶೋ

ಯಲಹಂಕ ಉಪನಗರದ ಸಿಇಎಸ್ ಫ್ಯಾಷನ್ ತಾಂತ್ರಿಕ ವಿದ್ಯಾಲಯದ ನಾಲ್ಕನೇ ವಾರ್ಷಿಕ ಫ್ಯಾಷನ್ ಶೋದಲ್ಲಿ ಪಾಲ್ಗೊಂಡಿದ್ದ ರೂಪದರ್ಶಿಯರು

ನೀವು

#CHOOSEBOLD

ಆಯ್ಕೆ ಮಾಡಿದಾಗ....

ಗೆಲುವು ಖಚಿತ.

ನೂರಾರು ವಿಕೆಟ್ಗಳನ್ನ ತೆಗೆದುಕೊಂಡಾಯಿತು.
ಸಾವಿರಾರು ರನ್ಗಳನ್ನ ಪಡೆದುಕೊಂಡಾಯಿತು.
ಅತ್ಯದ್ಭುತ ದಶಕಗಳು ದಾಖಲಾಯಿತು.
ಆಟವನ್ನೇ ಬದಲಾಯಿಸಿದ ಹ್ಯಾಟ್ರಿಕ್ ಸಿಕ್ಕಾಯಿತು.
ಅತ್ಯದ್ಭುತ ಕ್ಯಾಚ್ ಗಳನ್ನ ಹಿಡಿದಾಯಿತು..

ಕೆಲವು ಯುದ್ಧ ಸೋತೆವು.
ಅನೇಕ ಗೆಲುವನ್ನು ಪಡೆದೆವು...

ಲಕ್ಷಾಂತರ ಅಭಿಮಾನಿಗಳು ಜೊತೆಯಾದರು.

ಶತಕೋಟಿ ಪ್ರಾರ್ಥನೆ ಒಂದಾದವು.

ನಾಲ್ಕು ಫೈನಲ್ ಗಳನ್ನು ತಲುಪಿದೆವು.

18 ವರ್ಷಗಳ ಉತ್ಸಾಹ..

ಕೇವಲ ಒಂದು ಕನಸಿಗಾಗಿ...

ROYAL™
CHALLENGE
PACKAGED DRINKING WATER

OFFICIAL PARTNERS
RCB
ROYAL CHALLENGERS BENGALURU

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆನ್‌ಲೈನ್ ವಹಿವಾಟು: ಎಷ್ಟು ಜನರಿಗೆ ಗೊತ್ತು?

73 ಕೋಟಿ (ಜನಸಂಖ್ಯೆಯ ಶೇ 49ರಷ್ಟು) ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಲು ತಿಳಿದಿದೆ ಎಂದು ಹೇಳಿದವರ ಒಟ್ಟು ಸಂಖ್ಯೆ

80% ಯುಪಿಐ ಬಳಸಲು ತಿಳಿದವರು

0.6% ಇಂಟರ್‌ನೆಟ್ ಬ್ಯಾಂಕಿಂಗ್ ಬಲ್ಲವರು

18%: ಯುಪಿಐ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಬಲ್ಲವರು

ಸಮೀಕ್ಷೆ ಅವಧಿ: 2025ರ ಜನವರಿಯಿಂದ ಮಾರ್ಚ್‌ವರೆಗೆ

1.42 ಲಕ್ಷ: ಸಮೀಕ್ಷೆಯಲ್ಲಿ ಪಾಲ್ಗೊಂಡವರು (15ವರ್ಷದಿಂದ ಮೇಲ್ಪಟ್ಟವರು)

ಆಧಾರ: 'ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ: ಸಮಗ್ರ ದೂರಸಂಪರ್ಕ ಸಮೀಕ್ಷೆ' ವರದಿ

ಆಳ-ಅಗಲ ಪ್ಲಾಸ್ಟಿಕ್ ಎಂಬ ಭಸ್ಮಾಸುರ

ಅಸ್ಸಾಂ: ಪ್ರವಾಹ ಪರಿಸ್ಥಿತಿ ಉಲ್ಬಣ 5

₹3.35 ಲಕ್ಷ ಕೋಟಿ ಹೂಡಿಕೆಗೆ ಒಪ್ಪಿಗೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,737 ▼	24,542 ▼	₹1.01 ಲಕ್ಷ (ಬೆಂಗಳೂರು) ▲	₹1.06 ಲಕ್ಷ (ಬೆಂಗಳೂರು) ▲	85.61 ▼

ಅಯೋಧ್ಯೆ: 2ನೇ ಪ್ರಾಣ ಪ್ರತಿಷ್ಠಾಪನೆಗೆ ಚಾಲನೆ

ಲಖನೌ: ಅಯೋಧ್ಯೆಯ ರಾಮ ಮಂದಿರ ಸಂಕೀರ್ಣದಲ್ಲಿರುವ 8 ದೇಗುಲಗಳಲ್ಲಿನ ಎರಡನೇ ಪ್ರಾಣ ಪ್ರತಿಷ್ಠಾಪನೆ ಕಾರ್ಯವು ಗಣೇಶ ಪೂಜೆ ನೆರವೇರಿಸುವುದರೊಂದಿಗೆ ಮಂಗಳವಾರ ಆರಂಭವಾಯಿತು. 9

ವಿಶೇಷ ಅಧಿವೇಶನ: 16 ಪಕ್ಷಗಳ ಆಗ್ರಹ

ನವದೆಹಲಿ: ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ ಕುರಿತ ಚರ್ಚೆಗೆ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ 'ಇಂಡಿಯಾ' ಮೈತ್ರಿಕೂಟದ 16 ಪಕ್ಷಗಳ ನಾಯಕರು ಒತ್ತಾಯಿಸಿದ್ದಾರೆ. 5

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಈ ಸಲ ಕಪ್ ನಮ್ದು'

ಆರ್‌ಸಿಬಿ ಸಂಭ್ರಮ

ಅಹಮದಾಬಾದ್‌ನಲ್ಲಿ ಮಂಗಳವಾರ ಐಪಿಎಲ್ ಟ್ರೋಫಿಯೊಂದಿಗೆ ಸಂಭ್ರಮಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು -ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಲಕ್ಷಾಂತರ ಅಭಿಮಾನಿಗಳ 18 ವರ್ಷಗಳ ಕಾಯುವಿಕೆಗೆ ಮಂಗಳವಾರ ಸಿಹಿಫಲ ದೊರೆಯಿತು. ಈ ಸಲ ಕಪ್ ಆರ್‌ಸಿಬಿಗೇ ಒಲಿಯಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ರಜತ್ ಪಾಟೀದಾರ್ ನಾಯಕತ್ವದ ಆರ್‌ಸಿಬಿ ತಂಡವು 6 ರನ್ ಗಳಿಂದ ಪಂಜಾಬ್ ಕಿಂಗ್ಸ್ ಎದುರು ಜಯಿಸಿತು. ಐಪಿಎಲ್ ಮೊದಲ ಆವೃತ್ತಿಯಿಂದಲೂ ಆರ್‌ಸಿಬಿಯಲ್ಲಿಯೇ ಆಡುತ್ತಿರುವ ವಿರಾಟ್ ಕೊಹ್ಲಿ ಕೂಡ ಭಾವುಕರಾಗಿ ಆನಂದಬಾಷ್ಪ ಸುರಿಸಿದರು. ಬೆಂಗಳೂರು ಸೇರಿದಂತೆ ದೇಶದೆಲ್ಲೆಡೆ ಆರ್‌ಸಿಬಿಯ ಅಭಿಮಾನಿಗಳು ಸಂಭ್ರಮದಲ್ಲಿ ಮಿಂದೆದ್ದರು. 'ಈ ಸಲ ಕಪ್ ನಮ್ದೇ..' ಎಂಬ ವಿಜಯಘೋಷದೊಂದಿಗೆ ನಲಿದಾಡಿದರು.

ಇನ್ನಷ್ಟು ಸುದ್ದಿಗಳು 11

ಆರ್‌ಸಿಬಿ
9ಕ್ಕೆ 190
(20 ಓವರ್‌ಗಳಲ್ಲಿ)

ಪಂಜಾಬ್ ಕಿಂಗ್ಸ್
7ಕ್ಕೆ 184
(20 ಓವರ್‌ಗಳಲ್ಲಿ)

ಫಲಿತಾಂಶ: ಆರ್‌ಸಿಬಿಗೆ 6 ರನ್‌ಗಳ ಜಯ

ಕ್ಷಮೆ- ಕಮಲ್‌ಗೇಕೆ ಹಿಂಜರಿಕೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರನ್ನು ಕೆಣಕಿರುವ ನೀವೀಗ ಅವರ ಕ್ಷಮೆ ಕೇಳಲು ಯಾಕೆ ಹಿಂಜರಿಯುತ್ತಿದ್ದೀರಿ' ಎಂದು ನಟ ಕಮಲ್ ಹಾಸನ್ ಅವರನ್ನು ಹೈಕೋರ್ಟ್ ಪ್ರಶ್ನಿಸಿದೆ.

'ತಮಿಳಿನಿಂದ ಕನ್ನಡ ಹುಟ್ಟಿದೆ' ಎಂಬ ಕಮಲ್ ಹಾಸನ್ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಕಮಲ್ ಕ್ಷಮೆಯಾಚಿಸಬೇಕೆಂಬ ಒತ್ತಾಯವೂ ಬಲವಾಗಿತ್ತು. ಇದೇ 5ರಂದು ಬಿಡುಗಡೆಯಾಗಬೇಕಿರುವ 'ಥಗ್ ಲೈಫ್' ಸಿನಿಮಾ ಪ್ರದರ್ಶನಕ್ಕೆ ಕರ್ನಾಟಕದಲ್ಲಿ ಅವಕಾಶ ಕೊಡುವುದಿಲ್ಲ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹೇಳಿತ್ತು.

ಈ ಮಧ್ಯೆ, ಹೈಕೋರ್ಟ್ ಮೊರೆ ಹೋದ 'ರಾಜ್‌ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ. ನಾರಾಯಣನ್, 'ಸಿನಿಮಾ ಬಿಡುಗಡೆಗೆ ಅಗತ್ಯ ಬಂದೋಬಸ್ತ್ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದ್ದರು.

ಈ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಮಂಗಳವಾರ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕನ್ನಡ, ತಮಿಳಿನಿಂದ ಹುಟ್ಟಿದೆ ಎಂಬ ಹೇಳಿಕೆ ನೀಡಲು ನೀವೇನು ಇತಿಹಾಸಕಾರರೇ ಅಥವಾ ಭಾಷಾ ತಜ್ಞರೇ' ಎಂದೂ ಪ್ರಶ್ನಿಸಿತು.

10ನೇ ಪುಟ ನೋಡಿ

ಸಿನಿಮಾ, ನನಗೆ ಗೊತ್ತಿರುವ ಹಾಗೂ ನಾನು ಮಾತನಾಡುವ ಭಾಷೆ. ಸಿನಿಮಾ ಎನ್ನುವುದು ಒಂದು ಸಾರ್ವತ್ರಿಕ ಭಾಷೆ ಹಾಗೂ ಇದಕ್ಕೆ ಪ್ರೀತಿ ಮತ್ತು ಬಾಂಧವ್ಯ ವಷ್ಟೇ ತಿಳಿದಿದೆ. ನನ್ನ ಮಾತುಗಳು ನಮ್ಮೊಳಗೆ ಆ ಬಾಂಧವ್ಯ, ಐಕ್ಯತೆ ಸೃಷ್ಟಿಯಾಗಲಿ ಎನ್ನುವ ಕಾರಣಕ್ಕಾಗಿತ್ತು

ಕಮಲ್ ಹಾಸನ್, ನಟ

ಇದು ಭಾಷೆಯ ವಿಷಯ. ಪತ್ರದಲ್ಲೂ ಕ್ಷಮೆ ಕೇಳಿಲ್ಲ. ಕ್ಷಮೆ ಕೇಳದಿದ್ದರೆ ಇದು ಬಗೆಹರಿಯುವುದಿಲ್ಲ. ಭಾಷೆ ವಿಷಯ ಬಂದಾಗ ಯಾರೂ ಸುಮ್ಮನಿರುವುದಿಲ್ಲ. ಇದನ್ನು ಹಗುರವಾಗಿ ತೆಗೆದುಕೊಂಡರೆ ರಾಜ್ಯದ ಜನತೆಯೇ ಕ್ಷಮಿಸುವುದಿಲ್ಲ

ನರಸಿಂಹಲು ಎಂ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ.

ವನರಕ್ಷಕರಿಗೆ ಸುರಕ್ಷಾ ಕಿಟ್

ಮೈಸೂರಿನ ಮುಕ್ತ ವಿ.ವಿ. ಸಭಾಂಗಣದಲ್ಲಿ ಇಂದು ವಿತರಣೆಗೆ ಚಾಲನೆ

ಬೆಂಗಳೂರು: ಅರಣ್ಯ ರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ ರಾಜ್ಯದ 10 ಸಾವಿರ ಅರಣ್ಯ ರಕ್ಷಕರು, ವೀಕ್ಷಕರು, ಕಾವಾಡಿಗಳು, ಮಾವುತರು ಮತ್ತು ಚಾಲಕರಿಗೆ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತದ (ಕೆಎಸ್‌ಡಿಎಲ್) ವತಿಯಿಂದ ಬ್ಯಾಗ್, ಜರ್ಕಿನ್, ಶೂ ಮತ್ತು ನೀರಿನ ಬಾಟಲಿ ಇರುವ ಕಿಟ್ ವಿತರಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಮೈಸೂರಿನ ಮುಕ್ತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಬುಧವಾರ (ಜೂನ್ 4) ಮಧ್ಯಾಹ್ನ 2 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಅರಣ್ಯ ವೃತ್ತಗಳ 2,168 ಸಿಬ್ಬಂದಿಗೆ ಕಿಟ್ ವಿತರಿಸಲಾಗುವುದು. ಅರಣ್ಯ ಸಚಿವ ಈಶ್ವರ ಖಂಡ್ರೆ, ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ, ವನ್ಯಜೀವಿ ಮಂಡಳಿ ಸದಸ್ಯ ಧ್ರುವ ಪಾಟೀಲ ಭಾಗವಹಿಸುವರು. ಮುಂದೆ ರಾಜ್ಯದ ಉಳಿದೆಡೆಯ ಅರಣ್ಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೂ ಕಿಟ್ ವಿತರಿಸಲಾಗುವುದು ಎಂದರು.

ವನರಕ್ಷಕರಿಗೆ ನೀಡುವ ಸುರಕ್ಷಾ ಕಿಟ್

ಕೆ.ಎಸ್.ಎಲ್.ಡಿ.ಎಲ್ ಸಂಸ್ಥೆಯ 2024-25ನೇ ಸಾಲಿನ ಎರಡು ಕೋಟಿ ರೂಪಾಯಿ ಸಿಎಸ್‌ಆರ್ ನಿಧಿಯನ್ನು ಈ ಕಿಟ್ ಖರೀದಿಗೆ ಬಳಸಲಾಗಿದೆ. ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಗಂಧದ ಎಣ್ಣೆ ಮುಖ್ಯವಾಗಿದೆ. ಈ ಸಂಪತ್ತನ್ನು ಕಾಪಾಡುವವರೇ ವನರಕ್ಷಕರು. ಅಂಥವರನ್ನು ಕುರಿತ ಕಳಕಳಿ ಈ ಹೆಜ್ಜೆಯಾಗಿದೆ ಎಂದಿದ್ದಾರೆ. ಕಿಟ್ ಸ್ವೀಕರಿಸುವವರಲ್ಲಿ 5 ಸಾವಿರ ಮಂದಿ ಕಾಯಂ ಹಾಗೂ ಉಳಿದವರು ತಾತ್ಕಾಲಿಕ ಸಿಬ್ಬಂದಿ ಎಂದಿದ್ದಾರೆ.

ವನರಕ್ಷಕರು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಕಿವಿಯಾಗಿ ಈ ಯೋಜನೆ ರೂಪಿಸಲು ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ, ಸೊಸೈಟಿ ಫಾರ್ ಪ್ರೊಟೆಕ್ಷನ್ ಆಫ್ ಪ್ಲಾಂಟ್ಸ್ ಅಂಡ್ ಅನಿಮಲ್ಸ್ (ಎಸ್ ಪಿಪಿಎ) ಸಂಸ್ಥಾಪಕ ಧ್ರುವ ಪಾಟೀಲ ನೆರವಾಗಿದ್ದಾರೆ.

2025–26ನೇ ಸಾಲಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ವಿವಿಧ ಯೋಜನೆ

ಸಂತೆಯಲ್ಲಿ ಸಾಹಿತ್ಯ, ವ್ಯಾಪಾರಿಗಳೇ ಪ್ರೇಕ್ಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಾಮಾನ್ಯರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಲು ಕರ್ನಾಟಕ ಸಾಹಿತ್ಯ ಅಕಾಡೆಮಿ 'ಸಂತೆಯಲ್ಲಿ ಕನ್ನಡ ಸಾಹಿತ್ಯ' ಕಾರ್ಯಕ್ರಮ ರೂಪಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, 'ಸಾಹಿತ್ಯ ಗ್ರಾಮೀಣ ಪ್ರದೇಶದಲ್ಲಿನ ಜನಸಾಮಾನ್ಯರಿಗೂ ತಲುಪಬೇಕು. ನಮ್ಮ ಜನಪದರು ಕಲಿತದ್ದು ಸಂತೆ ಮತ್ತು ಜಾತ್ರೆಗಳಲ್ಲಿ. ಕನ್ನಡ ಸಾಹಿತ್ಯ ಕಟ್ಟಿಕೊಟ್ಟ ಸೌಹಾರ್ದ ಸಂಬಂಧಗಳನ್ನು, ಮಾನವೀಯ ಮೌಲ್ಯಗಳನ್ನು ಜನರಿಗೆ ತಲುಪಿಸಬೇಕಿದೆ. ಜನಸಾಮಾನ್ಯರಲ್ಲಿ ಸಾಹಿತ್ಯದ ಅಭಿರುಚಿ ಬೆಳೆಸಲು ಅವರಿರುವ ಸ್ಥಳಗಳಿಗೆ ಹೋಗಿ, ಪಂಪ, ಕುಮಾರವ್ಯಾಸ, ಕುವೆಂಪು, ಬೇಂದ್ರೆ ಮೊದಲಾದವರ ಬಗ್ಗೆ ವಿವರಿಸಿ ಹೇಳಬೇಕು. ಆದ್ದರಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ವ್ಯಾಪಾರಿಗಳು ಹಾಗೂ ಗ್ರಾಹಕರೇ ಇದರ ಪ್ರೇಕ್ಷಕರಾಗಿರುತ್ತಾರೆ' ಎಂದರು.

ಮುಕುಂದರಾಜ್

'ಸಂತೆಯಲ್ಲಿ ಕನ್ನಡ ಸಾಹಿತ್ಯ ಕಾರ್ಯಕ್ರಮ ಸರಣಿಯ ಪ್ರಥಮ ಕಾರ್ಯಕ್ರಮ ಇದೇ 13ರಂದು ತುಮಕೂರಿನ ಕುಣಿಗಲ್ ತಾಲ್ಲೂಕಿನ ಎಡೆಯೂರು ಗ್ರಾಮದಲ್ಲಿ ನಡೆಯಲಿದೆ. ಮುಂದಿನ ದಿನಗಳಲ್ಲಿ ವಿವಿಧ ಸಂತೆಗಳಲ್ಲಿ ಈ ಕಾರ್ಯಕ್ರಮ ನಡೆಸಿ, ಸಾಹಿತ್ಯಾಭಿರುಚಿ ಬೆಳೆಸಲಾಗುವುದು' ಎಂದು ವಿವರಿಸಿದರು.

150 ಪುಸ್ತಕಗಳು: 'ನಾಡಿನ ಶ್ರೇಷ್ಠ ಸಾಧಕರನ್ನು ಪರಿಚಯಿಸಲು 'ಕನ್ನಡ ಭಾರತಿ' ಶೀರ್ಷಿಕೆಯಡಿ 150 ಪುಸ್ತಕಗಳನ್ನು ಹೊರತರಲಾಗುತ್ತಿದೆ. ಸಾಹಿತ್ಯ, ಸಂಸ್ಕೃತಿ, ರಾಜಕೀಯ, ಆಡಳಿತ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳ 150 ಸಾಧಕರ ಬಗ್ಗೆ 150 ಲೇಖಕರಿಂದ ಬರೆಸಲಾಗುತ್ತದೆ. ಪ್ರತಿ ಪುಸ್ತಕ 60 ಪುಟ ಇರಲಿದ್ದು, ಈ ವರ್ಷ 100 ಪುಸ್ತಕಗಳನ್ನು ಪ್ರಕಟಿಸಲಾಗುವುದು' ಎಂದು ಮುಕುಂದರಾಜ್ ಹೇಳಿದರು.

'ರಾಮ ಮನೋಹರ ಲೋಹಿಯಾ ಮತ್ತಿತರ ಮಹನೀಯರ ಪುಸ್ತಕಗಳಲ್ಲಿನ ಸೌಹಾರ್ದದ ಅಂಶಗಳನ್ನು ಕ್ರೋಡೀಕರಿಸಿ, ಪುಸ್ತಕಗಳನ್ನು ಹೊರತರಲಾಗುವುದು. ಮತೀಯ ದ್ವೇಷ ಹೆಚ್ಚಾಗಿರುವ ಈ ಸಂದರ್ಭದಲ್ಲಿ ಇಂತಹ ಪುಸ್ತಕಗಳು ಅಗತ್ಯವಾಗಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಉಪನ್ಯಾಸ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು. 'ಮಹಿಳಾ ಮುನ್ನಡೆ' ಶೀರ್ಷಿಕೆಯಡಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 50 ಮಹಿಳಾ ಸಾಧಕರ ಬಗ್ಗೆ 50 ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ರೂಪಿಸಿದ್ದು, ಪುಸ್ತಕಗಳು ಮುದ್ರಣದ ಹಂತದಲ್ಲಿವೆ' ಎಂದು ತಿಳಿಸಿದರು.

ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಉಪಸ್ಥಿತರಿದ್ದರು.

ಕಾರಾಗೃಹ ಸಾಹಿತ್ಯ ಕಮ್ಮಟ ವಿಸ್ತರಣೆ

'ಮೈಸೂರಿನ ಕಾರಾಗೃಹದಲ್ಲಿ ಕೈದಿಗಳಿಗೆ ಸಾಹಿತ್ಯ ಕಮ್ಮಟ ನಡೆಸಲಾಗಿದ್ದು, ಅಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಾಹಿತ್ಯ ಸೃಷ್ಟಿಗೆ ಕೈದಿಗಳು ಆಸಕ್ತಿ ತೋರಿದ್ದಾರೆ. ಆದ್ದರಿಂದ ರಾಜ್ಯದಲ್ಲಿರುವ ಎಲ್ಲ ಕಾರಾಗೃಹಗಳಲ್ಲಿ ಸಾಹಿತ್ಯ ಕಮ್ಮಟ ನಡೆಸಲು ನಿರ್ಧರಿಸಲಾಗಿದೆ. ಕೈದಿಗಳಿಗೆ ಬಸವಾದಿ ಶರಣರು, ಸಾಹಿತ್ಯವನ್ನು ಪರಿಚಯಿಸುವುದರಿಂದ ಅವರಲ್ಲಿ ಸ್ವಲ್ಪವಾದರೂ ಬದಲಾವಣೆ ಸಾಧ್ಯವಾಗಲಿದೆ' ಎಂದು ಎಲ್.ಎನ್. ಮುಕುಂದರಾಜ್ ಹೇಳಿದರು.

'ಅಕಾಡೆಮಿ ವತಿಯಿಂದ ವಲಯವಾರು ಯುವ ಕವಿಗೋಷ್ಠಿಗಳನ್ನೂ ನಡೆಸಲಾಗುತ್ತಿದೆ. ಇದೇ 5ರಂದು ಹಾಸನದಲ್ಲಿ ಯುವ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ. ಹಳಗನ್ನಡ ಸಾಹಿತ್ಯ ಕೃತಿಗಳ ಮರುಮುದ್ರಣ ಸೇರಿ ವಿವಿಧ ಯೋಜನೆಗಳನ್ನು ಈ ಸಾಲಿನಲ್ಲಿ ರೂಪಿಸಲಾಗಿದೆ' ಎಂದರು.

'ಬೇಸಾಯದ ಬದುಕು'

'ಯುವಜನರನ್ನು ಕೃಷಿಯತ್ತ, ಕೃಷಿಕರನ್ನು ಸಾಹಿತ್ಯದ ಕಡೆಗೆ ಸೆಳೆಯಲು 'ಬೇಸಾಯದ ಬದುಕು' ಯೋಜನೆ ರೂಪಿಸಲಾಗಿದೆ. ಕೃಷಿ ಕ್ಷೇತ್ರದ 50 ಸಾಧಕರ ಬಗ್ಗೆ 50 ಪುಸ್ತಕ ಪ್ರಕಟಿಸಲಾಗುವುದು. ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು, ವಿವಿಧ ಸರ್ಕಾರೇತರ ಸಂಸ್ಥೆಗಳ ಸಹಯೋಗ ಪಡೆಯಲಾಗುವುದು. ಇದಕ್ಕೆ ₹30 ಲಕ್ಷ ವೆಚ್ಚವಾಗಲಿದೆ' ಎಂದು ಮುಕುಂದರಾಜ್ ಹೇಳಿದರು.

ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಂ.195/33, 'ಶ್ರೀ ಸುಧಾ ರಜತ ಭವನ', ಆರ್.ವಿ.ರಸ್ತೆ, ಜಯನಗರ, ಬೆಂಗಳೂರು–560004
ದೂರವಾಣಿ: 26565651, ಫ್ಯಾಕ್ಸ್: 26567189, ಮೊ.: 8867701055
ಇಮೇಲ್ : generalmanager@srisudhabank.com

ಸ್ಥಿರಾಸ್ತಿ ಸ್ವಾಧೀನ ಪ್ರಕಟಣೆ (ಕಾಯ್ದೆ ನಿಯಮ 8(1) ರಡಿ ಅನುಬಂಧ IV)

ಸಾಲಗಾರರ ಹೆಸರು

ಶ್ರೀ ಶೇಖರ್‌ರೆಡ್ಡಿ ಹೆಚ್.ಎಸ್.

ಶ್ರೀಮತಿ ಶೋಭಾ ಶೇಖರ್‌ರೆಡ್ಡಿ

ಆದಾಗಿ, ಕೆಳಸಹಿದಾರರು ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ನೋಟೀಸ್‌ನಲ್ಲಿ ತಿಳಿಸಿರುವಂತೆ ದಿನಾಂಕ: 31/03/2025 ರಂದು ಇದ್ದಂತೆ ರೂ.21,89,221/– (ಇಪ್ಪತ್ತೊಂದು ಲಕ್ಷ ಎಂಭತ್ತೊಂಬತ್ತು ಸಾವಿರದ ಎರಡು ನೂರ ಇಪ್ಪತ್ತೊಂದು ರೂಪಾಯಿಗಳು ಮಾತ್ರ) ಮೊತ್ತವನ್ನು ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸಾಲಗಾರರಾದ **ಶ್ರೀ ಶೇಖರ್‌ರೆಡ್ಡಿ ಬಿನ್ ಶ್ರೀನಿವಾಸ ರೆಡ್ಡಿ ಹಾಗೂ ಶ್ರೀಮತಿ ಶೋಭಾ ಶೇಖರ್ ರೆಡ್ಡಿ ಕೋಂ ಶೇಖರ್ ರೆಡ್ಡಿ.ಹೆಚ್.ಎಸ್** ನಂ.168/8, ಶ್ರೀನಿವಾಸ ರೆಡ್ಡಿ ಲೇಔಟ್, ಹೊಂಗಸಂದ್ರ, ಬೇಗೂರು ಮುಖ್ಯ ರಸ್ತೆ, ಬೆಂಗಳೂರು–560068 ಮತ್ತು ಜಾಮೀನುದಾರರಾದ **ಶ್ರೀಮತಿ ಸವಿತಾ ಲೋಕೇಶ್ ರೆಡ್ಡಿ ಕೋಂ ಶ್ರೀ.ಲೋಕೇಶ್ ರೆಡ್ಡಿ** ನಂ.307, 2ನೇ ಮುಖ್ಯರಸ್ತೆ, 7ನೇ ಅಡ್ಡ ರಸ್ತೆ, ದೊಮ್ಮಲೂರು ಬಡಾವಣೆ, ಬೆಂಗಳೂರು–560071. ಇವರಿಗೆ ಕರೆ ನೀಡಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ: 01/04/2025 ರಂದು ಡಿಮ್ಯಾಂಡ್ ನೋಟಿಸ್ ನೀಡಿದ್ದರೂ ಸಹ, ಸಾಲಗಾರರು ಸಾಲದ ಬಾಕಿಯನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13 ರ ಉಪಪ್ರಕರಣ (4) ರ ಅನ್ವಯ ಅವರಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ: 03/06/2025 ರಂದು ಕೆಳಸಹಿದಾರರು **ಸ್ವಾಧೀನಪಡಿಸಿಕೊಂಡಿದ್ದಾರೆ**. ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, ಯಾರೂ ಕೂಡ ಸದರಿ ಸ್ವತ್ತಿನ ಬಗ್ಗೆ ವ್ಯವಹರಿಸಬಾರದು. ಒಂದು ವೇಳೆ ಯಾರಾದರೂ, ಸದರಿ "ಸ್ವತ್ತಿನ ಸಂಬಂಧ ವ್ಯವಹರಿಸಿದ್ದೇ ಆದರೆ ಅದು "ಶ್ರೀ ಸುಧಾ ಕೋ–ಆಪರೇಟಿವ್ ಬ್ಯಾಂಕ್ ಲಿ, ಜಯನಗರ ಶಾಖೆ, ಬೆಂಗಳೂರು–560004". ಇದರ ಸಾಲದ ಖಾತೆ ಸಂಖ್ಯೆ ಐ.ಪಿ.ಬಿ–2018000000061ರ ಸಂಬಂಧ ದಿನಾಂಕ: 02/06/2025 ರಂದು ಇದ್ದಂತೆ ಅಸಲು, ಬಡ್ಡಿ ಮತ್ತಿತರೆ ಬಾಬ್ತು ಬರಬೇಕಾಗಿರುವ ರೂ. 22,48,042/– (ಇಪ್ಪತ್ತೆರಡು ಲಕ್ಷ ನಲವತ್ತೆಂಟು ಸಾವಿರದ ನಲವತ್ತೆರಡು ರೂಪಾಯಿಗಳು ಮಾತ್ರ) ಜೊತೆಗೆ ಖಾತೆ ಚುಕ್ತಾ ದಿನಾಂಕದವರೆಗಿನ ಬಡ್ಡಿ ಮತ್ತಿತರೆ ಖರ್ಚುಗಳ ಬಾಬ್ತು ಪಾವತಿಗೊಳಪಡುತ್ತದೆ. ಭದ್ರತಾ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಸಮಯದ ಸಂಬಂಧ ಕಾಯ್ದೆಯ ಪ್ರಕರಣ 13(8) ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ.

ಶ್ರೀ ಶೇಖರ್‌ರೆಡ್ಡಿ ಬಿನ್ ಶ್ರೀನಿವಾಸ ರೆಡ್ಡಿ ರವರಿಗೆ ಸೇರಿದ ಸ್ವತ್ತಿನ ವಿವರಗಳು: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹೊಂಗಸಂದ್ರ ಗ್ರಾಮದ ಸ್ವತ್ತಿನ ಸಂಖ್ಯೆ 3/2, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ಉಪವಲಯ 189ನೇ ವಾರ್ಡ್‌ಗೆ ಸೇರಿದ ಹೊಂಗಸಂದ್ರ, ಮುನ್ಸಿಪಲ್ ಖಾತಾ ಸಂಖ್ಯೆ 172/158/154/159/139 ರ ಸ್ಥಿರಾಸ್ತಿಗೆ **ಚಕ್ಕುಬಂದಿ: ಪೂರ್ವಕ್ಕೆ:** ಚಿನ್ನಪ್ಪರವರ ಜಮೀನು, **ಪಶ್ಚಿಮಕ್ಕೆ:** ಬೇಗೂರು ಮುಖ್ಯರಸ್ತೆ, **ಉತ್ತರಕ್ಕೆ:** ಜಯಪ್ಪರೆಡ್ಡಿರವರ ಸ್ವತ್ತು, **ದಕ್ಷಿಣಕ್ಕೆ:** ಗೋಪಾಲರೆಡ್ಡಿರವರ ಸ್ವತ್ತು. ಈ ಮಧ್ಯೆಯಿರುವ, **ಪೂರ್ವ ಪಶ್ಚಿಮ:** 143–00 ಅಡಿಗಳು ಮತ್ತು **ಉತ್ತರ ದಕ್ಷಿಣ:** 74.60 ಅಡಿಗಳು **ಒಟ್ಟು 10654–00 ಚದರ ಅಡಿಗಳನ್ನೊಳಗೊಂಡು** ಸದರಿ ನಿವೇಶನದಲ್ಲಿ ನಿರ್ಮಿಸಿರುವ ಪೂರ್ಣ ಕಟ್ಟಡವನ್ನೊಳಗೊಂಡ ಸ್ಥಿರಾಸ್ತಿ.

ಸ್ಥಳ: ಬೆಂಗಳೂರು
ದಿನಾಂಕ: 03/06/2025

ಸಹಿ/–
ಅಧಿಕೃತ ಅಧಿಕಾರಿ/ಪ್ರಧಾನ ವ್ಯವಸ್ಥಾಪಕರು
ಶ್ರೀ ಸುಧಾ ಕೋ–ಆಪ್ ಬ್ಯಾಂಕ್ ಲಿ., ಬೆಂಗಳೂರು – 560004

ಲುಲು ಮಾಲ್‌ಗೆ 'ಐಸಿಎಸ್‌ಸಿ ಗ್ಲೋಬಲ್ ಮ್ಯಾಕ್ಸಿ ಪ್ರಶಸ್ತಿ'

ಚೆನ್ನೈ: ಶಾಪಿಂಗ್ ಸೆಂಟರ್ ಉದ್ಯಮದಲ್ಲಿ ಹೆಸರಾಂತ ಲುಲು ಮಾಲ್‌ಗಳು, ಮಾರುಕಟ್ಟೆ ಶ್ರೇಷ್ಠತೆಗಾಗಿ ವಿಶ್ವದ ಅತ್ಯಂತ ಪ್ರತಿಷ್ಠಿತ ಪುರಸ್ಕಾರಗಳಲ್ಲಿ ಒಂದಾದ 'ICSC ಗ್ಲೋಬಲ್ MAXI ಅವಾರ್ಡ್'ಗಳನ್ನು ತನ್ನದಾಗಿಸಿಕೊಂಡಿದೆ.

2025ರ ಸಾಲಿನ ಈ ಮೂರು ಪ್ರಮುಖ ಪ್ರಶಸ್ತಿಗಳನ್ನು ಮತ್ತೊಮ್ಮೆ ಗೆಲ್ಲುವ ಮೂಲಕ ಲುಲು ಮಾಲ್ಸ್ ಜಾಗತಿಕ ಚಿಲ್ಲರೆ ಮಾರಾಟ ವೇದಿಕೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

ಲಾಸ್ ವೇಗಾಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಶಾಪಿಂಗ್ ಸೆಂಟರ್‌ಗಳ ಮಂಡಳಿ (ಐಸಿಎಸ್‌ಸಿ)ಯ ಜಾಗತಿಕ ಸಮ್ಮೇಳನದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. 15ಕ್ಕೂ ಹೆಚ್ಚು ದೇಶಗಳ ಪ್ರಮುಖ ಶಾಪಿಂಗ್ ಸೆಂಟರ್‌ಗಳ ನಡುವೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಲುಲು ಮಾಲ್ಸ್ 2 ಚಿನ್ನದ ಪ್ರಶಸ್ತಿ ಹಾಗೂ ಒಂದು ಬೆಳ್ಳಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

- **ಮೊದಲ ಸ್ವರ್ಣ ಪ್ರಶಸ್ತಿ:** ಕೊಚ್ಚಿನ್ ಲುಲು ಮಾಲ್ ಆಚರಿಸಿದ್ದ 'ಲುಲು ಹೂವಿನ ಹಬ್ಬ'ಕ್ಕಾಗಿ ಮೊದಲ ಸ್ವರ್ಣ ದೊರೆತಿದೆ. ಈ ದಿನಗಳಲ್ಲಿ ಮಾಡಿದ ವ್ಯಾಪಾರ, ಜನರ ಭೇಟಿ ಮತ್ತು ಅದ್ಭುತ ಹೂವಿನ ಪ್ರದರ್ಶನಕ್ಕಾಗಿ ಈ ಪುರಸ್ಕಾರ.
- **2ನೇ ಸ್ವರ್ಣ ಪ್ರಶಸ್ತಿ:** ಲುಲು ಮಾಲ್-ಲಕ್ನೋ ಆಯೋಜಿಸಿದ್ದ 'ಲುಲು ಲಿಟಲ್ ಗೇಮ್ಸ್'ಗಾಗಿ 2ನೇ ಸ್ವರ್ಣ. ಪುಟ್ಟ ಮಕ್ಕಳಿಗಾಗಿ ದೊಡ್ಡ ಮಟ್ಟದಲ್ಲಿ ನಡೆಸಿದ ಒಲಿಂಪಿಕ್ಸ್ ಹಾಗೂ ವಹಿವಾಟಿನ ಸಂಯೋಜನೆಯ ಪ್ರದರ್ಶನಕ್ಕಾಗಿ ಪ್ರಶಸ್ತಿ.

ಅಂತರರಾಷ್ಟ್ರೀಯ ಫ್ಯಾಷನ್ ಡಿಸೈನರ್ ನಿಕ್ ವೆರಿಯೊಸ್ ಅವರಿಂದ ಲುಲು ಗ್ರೂಪ್ ಇಂಡಿಯ ಶಾಪಿಂಗ್ ಮಾಲ್‌ಗಳ ನಿರ್ದೇಶಕಿ ಶಿಬು ಫಿಲಿಪ್ಸ್ 'ICSC ಗ್ಲೋಬಲ್ MAXI ಪ್ರಶಸ್ತಿ' ಸ್ವೀಕರಿಸಿದರು. ಮಾರುಕಟ್ಟೆ ಐಶ್ವರ್ಯ ಬಾಬು ಉಪಸ್ಥಿತರಿದ್ದರು.

- **ರಜತ ಪ್ರಶಸ್ತಿ:** ಲುಲು ಮಾಲ್ ತಿರುವನಂತಪುರಂನಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಕ್ಕಾಗಿ ರಜತ ಪ್ರಶಸ್ತಿ. 'ಸ್ವಾತಂತ್ರ್ಯ ದಿನಾಚರಣೆ ಅಭಿಯಾನ'ದ ಮೂಲಕ ಭಾರತೀಯ ಸೇನೆಗೆ ಸಲ್ಲಿಸಿದ ಗೌರವ ಹಾಗೂ ಭಾವನಾತ್ಮಕ ಸಮುದಾಯದ ಭಾಗವಹಿಸುವಿಕೆಗಾಗಿ ಮನ್ನಣೆ.

ಲುಲು ಶಾಪಿಂಗ್ ಮಾಲ್ಸ್ ಇಂಡಿಯಾ ನಿರ್ದೇಶಕಿ ಶಿಬು ಫಿಲಿಪ್ಸ್ ಮಾತನಾಡಿ, "ಜಾಗತಿಕ ವೇದಿಕೆಯಲ್ಲಿ ಮೂರು ಮ್ಯಾಕ್ಸಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಸಂತಸ ಕೇವಲ ಲುಲು ಸಮೂಹಕ್ಕೆ ಮಾತ್ರವಲ್ಲ, ಇದು ಇಡೀ ಭಾರತಕ್ಕೂ ಹೆಮ್ಮೆಯ ಕ್ಷಣ". ಈ ಪ್ರಶಸ್ತಿಗಳು ಗಡಿಯಾಚೆ ಇರುವ ಜನರೊಂದಿಗೆ ಭಾವನಾತ್ಮಕ ಸಂಪರ್ಕ ಕಲ್ಪಿಸುವುದಲ್ಲದೇ ನಂಬಿಕೆ ಬಲಪಡಿಸುತ್ತದೆ ಎಂದು ಹೇಳಿದರು.

ಲುಲು ಮಾಲ್ಸ್ ಇಂಡಿಯಾದ ಮಾರ್ಕೆಟಿಂಗ್ ಜನರಲ್ ಮ್ಯಾನೇಜರ್ ಐಶ್ವರ್ಯ ಬಾಬು, "ಲುಲು ಮಾಲ್ಸ್ ಹಮ್ಮಿಕೊಂಡಿದ್ದ ಪ್ರತಿಯೊಂದು ಅಭಿಯಾನವು ಬಲವಾದ ಒಳನೋಟವನ್ನು ಹೊಂದಿದ್ದವು. ಸಮುದಾಯದ ಆಚರಣೆ, ಸಂತೋಷ ಹೆಚ್ಚಿಸುವ ಮತ್ತು ಜನತೆಯಲ್ಲಿ ರಾಷ್ಟ್ರೀಯ ಗೌರವ ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದ್ದವು" ಎಂದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಸರ್ಜಾಪುರ: ಭೂಸ್ವಾಧೀನ ಪ್ರಕ್ರಿಯೆ ಪೂರ್ಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ ಮುಖ್ಯರಸ್ತೆ ವಿಸ್ತರಣೆ ಕಾಮಗಾರಿ ಮುಗಿದಿದ್ದು, ಸರ್ವಿಸ್ ರಸ್ತೆ ಅಭಿವೃದ್ಧಿಗೆ ಬಾಕಿ ಇರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಸೂಚಿಸಿದರು.

ಮಹದೇವಪುರ ವಲಯದಲ್ಲಿ ಮಂಗಳವಾರ ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಿ ಅವರು ಮಾತನಾಡಿದರು.

'ಮಹದೇವಪುರ ವಲಯ ವ್ಯಾಪ್ತಿಯ ಇಬ್ಬಲೂರು ಜಂಕ್ಷನ್‌ನಿಂದ ಕಾರ್ಮಲ್ ರಾವ್ ಆರ್.ಜೆ. ಟೆಕ್ ಪಾರ್ಕ್‌ವರೆಗೆ 4.7 ಕಿ.ಮೀ. ರಸ್ತೆ ವಿಸ್ತರಣೆ ಕಾರ್ಯ 2022ರಲ್ಲಿಯೇ ಮುಗಿದಿದೆ. ಆದರೆ ಸರ್ವಿಸ್ ರಸ್ತೆಯಲ್ಲಿರುವ ಸ್ವತ್ತುಗಳಿಗೆ ಟಿಡಿಆರ್ ಅಡಿ ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ವಿಳಂಬವಾಗಿದ್ದು, ರಸ್ತೆ ಅಭಿವೃದ್ಧಿ ಕಾರ್ಯ ಕುಂಠಿತಗೊಂಡಿದೆ' ಎಂದು ವಲಯ ಅಧಿಕಾರಿ ಮಾಹಿತಿ ನೀಡಿದರು.

'ಸರ್ವಿಸ್ ರಸ್ತೆಯಲ್ಲಿ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಗೆ ಒಪ್ಪಿರುವ ಮಾಲೀಕರಿಂದ ಪರಿತ್ಯಾಜನ ಪತ್ರದ ಮೂಲಕ ಭೂಸ್ವಾಧೀನಗೊಂಡಿರುವ ಜಾಗವನ್ನು ಪಾಲಿಕೆಗೆ ಹಸ್ತಾಂತರ ಮಾಡಿಕೊಳ್ಳಬೇಕು. ಉಳಿದವರ ಮನವೊಲಿಸಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಪಾದಚಾರಿ ಮಾರ್ಗಗಳನ್ನು ನಿರ್ಮಿಸಬೇಕು' ಎಂದು ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಇಬ್ಲೂರು ಜಂಕ್ಷನ್, ಹರಳೂರು ರಸ್ತೆ ಜಂಕ್ಷನ್ ಹಾಗೂ ಕಸವನಹಳ್ಳಿ ಜಂಕ್ಷನ್‌ಗಳ ಸುಧಾರಣೆ ಮಾಡಬೇಕು. ಪಾದಚಾರಿ ಮಾರ್ಗಗಳ ನಿರ್ಮಾಣ, ಪಾದಚಾರಿ ಕ್ರಾಸಿಂಗ್‌ಗಳ ಅಳವಡಿಕೆ ಸೇರಿದಂತೆ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಹೇಳಿದರು.

ಪಾದಚಾರಿ ಮಾರ್ಗಗಳ ಸಮರ್ಪಕ ನಿರ್ವಹಣೆ, ಸೈಡ್ ಡ್ರೈನ್‌ಗಳ ದುರಸ್ತಿ ಹಾಗೂ ಹೂಳೆತ್ತುವುದು, ರಸ್ತೆ ಬದಿ ತ್ಯಾಜ್ಯ ಬಿಸಾಡದಂತೆ ಕ್ರಮವಹಿಸುವುದು, ಪಾದಚಾರಿ ಮೇಲ್ಸೇತುವೆ ನಿರ್ಮಿಸುವುದು, ಹೊಸದಾಗಿ ಪಾದಚಾರಿ ಮಾರ್ಗ ನಿರ್ಮಾಣ ಸೇರಿದಂತೆ ಹಲವು ನಿರ್ದೇಶನಗಳನ್ನು ಅಧಿಕಾರಿಗಳಿಗೆ ನೀಡಿದರು.

ಸೀತಾರಾಮು, ತಿಮ್ಮಪ್ಪಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಎಂ.ಟಿ.ತಿಮ್ಮಪ್ಪ

ಸೀತಾರಾಮು

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಿಬ್ಬಂದಿಗೆ ನೀಡುವ 'ಶ್ರೀಮತಿ ವಿ.ಗೌರಮ್ಮ ಗಂಗಾಧರಯ್ಯ ಮಕ್ಕಳ ಸಿಬ್ಬಂದಿ ಸೇವಾ ಪ್ರಶಸ್ತಿ'ಗೆ ಎಂ.ಟಿ.ತಿಮ್ಮಪ್ಪ ಹಾಗೂ 'ಶ್ರೀಮತಿ ಎಸ್.ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ'ಗೆ ಜಿ.ಸೀತಾರಾಮು ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಎಂ.ಜಿ.ನಾಗರಾಜ್ ಹಾಗೂ ಎಸ್. ರಮಾದೇವಿ ವಿಶ್ವೇಶ್ವರಯ್ಯ ಅವರು ಈ ದತ್ತಿ ಪ್ರಶಸ್ತಿಗಳನ್ನು ಸ್ಥಾಪಿಸಿದ್ದಾರೆ. ಕನಿಷ್ಠ 10 ವರ್ಷಗಳು ಪರಿಷತ್ತಿನಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ತಿಮ್ಮಪ್ಪ ಅವರು 29 ವರ್ಷಗಳಿಂದ ಹಾಗೂ ಸೀತಾರಾಮು ಅವರು 25 ವರ್ಷಗಳಿಂದ ಪರಿಷತ್ತಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೇ 4ರಂದು ಸಂಜೆ 5 ಗಂಟೆಗೆ ಕಸಾಪದ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆಯುವ ರಾಜರ್ಷಿ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ–561203
ಸಂಖ್ಯೆ:ಅನಧಿಕೃತ ಬಡಾವಣೆ/ಸಾರ್ವಜನಿಕ ಪ್ರಕಟಣೆ/01/2025–26 ದಿನಾಂಕ:31.05.2025

ಸಾರ್ವಜನಿಕ ಪ್ರಕಟಣೆ

ವಿಷಯ: ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳನ್ನು ಅಭಿವೃದ್ಧಿಪಡಿಸದಿರಲು ಮತ್ತು ಅನಧಿಕೃತ ಬಡಾವಣೆಗಳಲ್ಲಿನ ನಿವೇಶನ ಖರೀದಿಸಬಾರದೆಂದು ಸಾರ್ವಜನಿಕರಿಗೆ ನೀಡುತ್ತಿರುವ ಪ್ರಕಟಣೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (BMRDA) ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಒಂದಾಗಿದ್ದು, ಕಛೇರಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬಳ್ಳಾಪುರ ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4–(ಎ)(1) ರನ್ವಯ ಸರ್ಕಾರದ ಅಧಿಸೂಚನೆ–II ಸಂಖ್ಯೆ: ನಅಇ95 ಬಿಎಂಆರ್ 2016 ದಿನಾಂಕ: 30.11.2017ರಲ್ಲಿ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)(1)ರನ್ವಯ ಸರ್ಕಾರದ ಅಧಿಸೂಚನೆ ಸಂ: ನಅಇ95 ಬಿಎಂಆರ್ 2016 ದಿನಾಂಕ: 20.03.2018 ರಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬಳ್ಳಾಪುರ ನಗರವನ್ನು ಒಳಗೊಂಡಂತೆ, ಕಸಬಾ, ದೊಡ್ಡಬೆಳವಂಗಲ, ತೂಬಗೆರೆ, ಸಾಸಲು, ಮಧುರೆ ಹೋಬಳಿಗಳ ಒಟ್ಟು 265 ಗ್ರಾಮಗಳು ಮತ್ತು ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ [ಯಲಹಂಕ ತಾಲ್ಲೂಕು] ಹೆಸರಘಟ್ಟ ಹೋಬಳಿಯ 29 ಗ್ರಾಮಗಳು ಸೇರಿ ಒಟ್ಟು 294 ಗ್ರಾಮಗಳನ್ನು ಒಳಗೊಂಡಿದ್ದು, 772.77 ಚ.ಕಿ.ಮೀ. ವಿಸ್ತೀರ್ಣದ ವ್ಯಾಪ್ತಿಯ ಪ್ರದೇಶವನ್ನು ಹೊಂದಿರುತ್ತದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಮತ್ತು ಸರ್ವೆ ನಂಬರುಗಳ ವಿವರ, ಅಧಿಸೂಚನೆಗಳು ಹಾಗೂ ಮಹಾಯೋಜನೆ ನಕ್ಷೆಗಳನ್ನು ಪ್ರಾಧಿಕಾರದ ಅಂತರ್ಜಾಲ ತಾಣ (ವೆಬ್‌ಸೈಟ್) **www.doddaballapur.tpa.gov.in** ರಲ್ಲಿ ಪರಿಶೀಲಿಸಬಹುದಾಗಿದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಭೂ ಪರಿವರ್ತನೆ ಆದ ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14, 15 & 17 ರಂತೆ ಭೂಉಪಯೋಗ ಬದಲಾವಣೆ, ವಿನ್ಯಾಸ ಅನುಮೋದನೆ ಮತ್ತು ಕಟ್ಟಡ ನಕ್ಷೆಗಳಿಗೆ ಸಕ್ಷಮ ಪ್ರಾಧಿಕಾರವಾದ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಯೋಜನಾ ಪ್ರಾಧಿಕಾರದ ಅನುಮೋದನೆ ಇಲ್ಲದೆ ಇತರೆ ಯಾವುದಾದರೂ ಅನುಮೋದನೆ ಆಧಾರದ ಮೇಲೆ ಯಾವುದಾದರೂ ಅಭಿವೃದ್ಧಿಗಳನ್ನು ಕೈಗೊಂಡಿದ್ದರೆ ಅಂತಹ ಅಭಿವೃದ್ಧಿ ಕಾರ್ಯಗಳು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 76–M(2)(b) ರಂತೆ ಊರ್ಜಿತವಾಗುವುದಿಲ್ಲ. ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಿರುವ ವಿನ್ಯಾಸಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಖರೀದಿಸುವ ಮೊದಲು ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ವಸತಿ/ವಸತಿಯೇತರ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು, ನಿವೇಶನಗಳು ನೋಂದಣಿಗೆ ಬಿಡುಗಡೆಯಾಗಿರುವ ಹಾಗೂ ವಸತಿ/ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ವಿದ್ಯುತ್, ನೀರು ಸರಬರಾಜು ಮತ್ತು ಇತರೆ ಮೂಲಭೂತ ಸೌಲಭ್ಯಗಳು ಲಭ್ಯವಿರುವುದಿಲ್ಲ. ಆದ್ದರಿಂದ ಅಂತಹ ಅನಧಿಕೃತ ವಿನ್ಯಾಸಗಳಲ್ಲಿನ ನಿವೇಶನಗಳು ಮತ್ತು ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿನ ಕಟ್ಟಡಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಿನ್ಯಾಸಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ/ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ.

ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ವಿನ್ಯಾಸಗಳಲ್ಲಿ (Layouts) ಹಾಗೂ ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿನ (Development Plan) ಕಟ್ಟಡಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಅಂದರೆ ರಸ್ತೆ, ಚರಂಡಿ, ವಿದ್ಯುತ್, ನೀರು ಸರಬರಾಜು ಮತ್ತು ಇತರೆ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ವಿನ್ಯಾಸಗಳಿಗೆ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ಆದ ನಂತರ ಸದರಿ ಮೂಲಭೂತ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ

ಅನಧಿಕೃತ ವಿನ್ಯಾಸಗಳಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿನ ಕಟ್ಟಡಗಳನ್ನು ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಹಾಗೂ ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ / ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಮಾಲೀಕರು / ಅಭಿವೃದ್ಧಿದಾರರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರಡಿಯಲ್ಲಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ವಿನ್ಯಾಸಗಳನ್ನು (Layouts) ಮತ್ತು ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿ (Development Plan) ಕಟ್ಟಡಗಳನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 15 (4) ಮತ್ತು 17 (4) ರಡಿಯಲ್ಲಿ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರು / ಜಿಪಿಎದಾರರು/ ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–
ಅಧ್ಯಕ್ಷರು
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

ಸಹಿ/–
ಜಂಟಿ ನಿರ್ದೇಶಕರು/ಸದಸ್ಯ ಕಾರ್ಯದರ್ಶಿಗಳು
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: SWRTMYPR2025WT05
ದಿನಾಂಕ: 28.05.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯಲ್ಲಿ ಟ್ರ್ಯಾಕ್ ಮಶೀನ್‌ಗಳ ಬಳಕೆಗಾಗಿ ಸೂಕ್ತವಾದ ಎಂಡ್ ಫಿಟಿಂಗ್‌ಗಳೊಂದಿಗೆ ಸರಿಯಾದ ರೀತಿ ಕ್ರಿಂಪ್ ಮಾಡಲಾದ ಹೋಸ್‌ಗಳೊಂದಿಗೆ ಹೈಡ್ರಾಲಿಕ್ ಹೋಸ್‌ಗಳ ಪೂರೈಕೆ.	ರೂ. 91,73,969.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.06.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕಾರ್ಯನಿರ್ವಾಹಕ ಇಂಜಿನಿಯರ್/ಟ್ರ್ಯಾಕ್ ಮಶೀನ್‌ಗಳು/ಬೆಂಗಳೂರು
PUB/153/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸರಾಗವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: HE-TRD-2025-26-OT-05
ದಿನಾಂಕ: 31.05.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ಡಿಎಸ್‌ಡಿಸಿ ರೈಲುಗಳ ಸಂಚಾರಕ್ಕಾಗಿ ಓಹೆಚ್‌ಇ ಮೇಲಿನ ಮಾರ್ಪಾಡು ಕಾಮಗಾರಿಗಳು.	ರೂ. 50,39,475/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.06.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ ಹುಬ್ಬಳ್ಳಿ
PUB/161/AAF/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRRLY

ಪ್ರವೇಶಾತಿ ಪ್ರಕಟಣೆ

ಕೇರಳ ರಾಜ್ಯದ ತಿರುವನಂತಪುರಂನಲ್ಲಿರುವ ಭಾರತೀಯ ಕ್ರೀಡಾ ಪ್ರಾಧಿಕಾರದ ಲಕ್ಷ್ಮೀಬಾಯಿ ರಾಷ್ಟ್ರೀಯ ದೈಹಿಕ ಶಿಕ್ಷಣ ಕಾಲೇಜು (ಎಸ್‌ಎಐ–ಎಲ್‌ಎನ್‌ಸಿಪಿಇ) ಎಂಬ ಸಂಸ್ಥೆಯು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನಗಳ ಕ್ಷೇತ್ರದಲ್ಲಿನ ಒಂದು ಪ್ರಮುಖ ಸಂಸ್ಥೆಯಾಗಿದೆ. ಇದೀಗ ಈ ಸಂಸ್ಥೆಯು ಸನ್ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಬಿಪಿಇಡಿ (4 ವರ್ಷಗಳ ಇನ್ನೊವೇಟಿವ್) ಮತ್ತು ಎಂಪಿಇಎಸ್ ಕಾರ್ಯಕ್ರಮಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಏಪ್ರಿಲ್ 30, 2025 ರಿಂದ ಜೂನ್ 19, 2025 ರಂದು ಸಂಜೆ 6.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಪರೀಕ್ಷಾ ಕೇಂದ್ರಗಳು: ಎಸ್‌ಎಐಎಲ್‌ಎನ್‌ಸಿಪಿಇ, ತಿರುವನಂತಪುರಂ, ಎಲ್‌ಎನ್‌ಐಪಿಇ, ಗ್ವಾಲಿಯರ್ ಮತ್ತು ಎಲ್‌ಎನ್‌ಐಪಿಇಎನ್‌ಇಆರ್‌ಸಿ, ಗುವಾಹಟಿ.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.lncpe.ac.in ವೆಬ್‌ಸೈಟ್‌ಗೆ ಭೇಟಿ ಕೊಡಿ.
ದೂರವಾಣಿ ಸಂಖ್ಯೆಗಳು: 0471–2412189, 2418712

ಪ್ರಾಂಶುಪಾಲರು
ಎಸ್‌ಎಐಎಲ್‌ಎನ್‌ಸಿಪಿಇ

CBC 47115/12/0001/2526

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ

ಅಂತರಿಕ್ಷ ಭವನ, ಬೆಂಗಳೂರು–560094, ದೂರವಾಣಿ: (080) 22172614/2613/5610

ಎನ್‌ಐಟಿ ಸಂ.: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(16)/ಸಿ/ಇ/148/2025–26 ದಿ: 03.06.2025

ಸಂಕ್ಷಿಪ್ತ ಇ–ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಬೆಂಗಳೂರು, ದೇವನಹಳ್ಳಿ, ಹೆಚ್‌ಎಸ್‌ಎಫ್‌ಸಿ ಕ್ಯಾಂಪಸ್‌ನಲ್ಲಿ 30ಕೆಎಲ್‌ಡಿ ಒಳಚರಂಡಿ ಸಂಸ್ಕರಣಾ ಘಟಕ (ಎಸ್‌ಬಿಆರ್ ಪ್ರಕ್ರಿಯೆ) ನಿರ್ಮಾಣ(ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು)
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 167.22 ಲಕ್ಷಗಳು.
ಪೂರ್ಣಗೊಳಿಸುವ ಕಾಲಾವಧಿ (ಕೆಲಸದ ಆದೇಶ ಪತ್ರ ನೀಡಿದ ದಿನಾಂಕದಿಂದ 15ನೇ ದಿನದಿಂದ ಪರಿಗಣಿಸಲಾಗುತ್ತದೆ).	(07) ಏಳು ತಿಂಗಳು.
ಟೆಂಡರ್ ದಸ್ತಾವೇಜು ಕೋರಿಕೆ ಸಲ್ಲಿಸುವ ಅವಧಿ	04.06.2025, 11:00 ಗಂಟೆಯಿಂದ 17.06.2025, 23:30 ಗಂಟೆವರೆಗೆ.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	04.06.2025, 11:10 ಗಂಟೆಯಿಂದ 17.06.2025, 23:59 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಅವಧಿ	04.06.2025, 11:30 ಗಂಟೆಯಿಂದ 18.06.2025, 10:30 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಪ್ರತಿಕ್ರಿಯೆ ನೀಡಲು ಕೊನೆಯ ದಿನಾಂಕ	19.06.2025, 17:00 ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	20.06.2025, 11:00 ಗಂಟೆವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	20.06.2025, 11:30 ಗಂಟೆಗೆ
ಇಎಂಡಿ	ರೂ. 3,34,440/–

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಇ–ಟೆಂಡರ್ ಪ್ರಕಟಣೆಯನ್ನು ವೆಬ್‌ಸೈಟ್: www.tenderwizard.com/ISRO ರಲ್ಲಿ ಪರಿವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

FARNAZ

ವಿದ್ಯುತ್ ಪರಿವೀಕ್ಷಣಾಲಯ

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ
ಬೆಂಗಳೂರು ಹೆಚ್ಚುವರಿ ಪೂರ್ವ ವೃತ್ತ, ನಂ: 255, 1ನೇ ಮಹಡಿ
1ನೇ ಕ್ರಾಸ್ ರಸ್ತೆ, ಗಂಗಾನಗರ ಲೇಔಟ್, ಬೆಂಗಳೂರು–560032
ದೂರವಾಣಿ : 080–23332862, ಇ–ಮೇಲ್: dcei.bae@gmail.com

ಸಂಖ್ಯೆ: ಉಮುವಿಪ/ಬೆಂಹೆ.ಪೂ/ಅ/ಆಡಳಿತ/ಇ–ಟೆಂಡರ್/ವಾಹನ/1604/2025-25 ದಿನಾಂಕ: 29.05.2025

ಇ–ಟೆಂಡರ್ ಪ್ರಕಟಣೆ

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ ವೃತ್ತ ಕಚೇರಿಯ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಪಡೆಯಲು ಇ–ಟೆಂಡರ್ ಆಹ್ವಾನಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಚೇರಿಯ **ಅಧಿಕೃತ ಕೆಲಸಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ 02 ಸಂಖ್ಯೆಯ ಎ.ಸಿ ಕಾರು ಹಾಗೂ 01 ಸಂಖ್ಯೆಯ ನಾನ್ ಎ.ಸಿ ಕಾರು, ಒಟ್ಟು 03 ಕಾರುಗಳನ್ನು ಹಾಗೂ ಚಾಲಕರನ್ನು ಬಾಡಿಗೆಗೆ ಪೂರೈಸಲು** (ಹಳದಿ ಬಣ್ಣದ ನಂಬರ್ ಬೋರ್ಡ್ ಹೊಂದಿದ) ಇ.ಎಂ.ಡಿ. ಮೊತ್ತ: **ರೂ.35,000/–**ಗಳೊಂದಿಗೆ ಕರ್ನಾಟಕ ಪೋರ್ಟಲ್ **https://kppp.karnataka.gov.in** ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ ವಿವರ ಈ ಕೆಳಗಿನಂತಿದೆ: 1) ಟೆಂಡರ್ ಷರತ್ತು ಸಂಬಂಧ ವಿವರ/ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ : **04.06.2025 ಸಾಯಂಕಾಲ 3.00 ಗಂಟೆಯವರೆಗೆ** 2) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: **06.06.2025ರ ಸಾಯಂಕಾಲ 5.00 ಗಂಟೆಯವರೆಗೆ** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 09.06.2025 ಸಾಯಂಕಾಲ 5.00 ಗಂಟೆಗೆ** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 10.06.2025 ಬೆಳಿಗ್ಗೆ 11:00 ಗಂಟೆಯ ನಂತರ.**

ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಾರ್ಯಾಲಯದಲ್ಲಿ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/–
ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು
ಬೆಂಗಳೂರು ಹೆಚ್ಚುವರಿ ಪೂರ್ವ, ಬೆಂಗಳೂರು

DIPR/CP/SA/1014/2025-26

ಆರ್‌ಸಿಬಿ ಗೆಲುವು: ಕಟ್ಟೆಯೊಡೆದ ಸಂಭ್ರಮ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಆರಂಭವಾದಾಗಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಟ್ರೋಫಿ ಎತ್ತಿಹಿಡಿಯಲಿ ಎಂದು ಹಂಬಲಿಸುತ್ತಿದ್ದ, 'ಈ ಸಲ ಕಪ್ ನಮ್ಮದೇ' ಎಂದು ಹುರಿದುಂಬಿಸುತ್ತಲೇ ಇದ್ದ ಆರ್‌ಸಿಬಿ ಅಭಿಮಾನಿಗಳ ಕನಸು ನನಸಾಗಲು ಬರೋಬ್ಬರಿ 18 ವರ್ಷಗಳು ಬೇಕಾದವು. ದೂರದ ಅಹಮದಾಬಾದ್‌ನಲ್ಲಿ ಆರ್‌ಸಿಬಿ ಐಪಿಎಲ್ ಫೈನಲ್ ಪಂದ್ಯವನ್ನು ಗೆಲ್ಲುತ್ತಿದ್ದಂತೆ ಇತ್ತ ಬೆಂಗಳೂರಿನಲ್ಲಿ ಅಭಿಮಾನಿಗಳ ಸಂಭ್ರಮದ ಕಟ್ಟೆಯೊಡೆಯಿತು. ನಗರದ ಬೀದಿ–ಬೀದಿಗಳಲ್ಲೂ 'ಆರ್‌ಸಿಬಿ, ಆರ್‌ಸಿಬಿ' ಘೋಷಣೆ ತುಂಬಿತು.

'ಈ ಸಲ ಕಪ್ ನಮ್ದೇ' ಎಂದು ಗೊತ್ತಾದ ಮರುಕ್ಷಣವೇ ಬೀದಿಗಿಳಿದ ಆರ್‌ಸಿಬಿ ಅಭಿಮಾನಿಗಳ ಸಂಭ್ರಮಕ್ಕೆ ಎಲ್ಲೆಯೇ ಇರಲಿಲ್ಲ. ಮಕ್ಕಳು, ಯುವಕರು, ಗೃಹಿಣಿಯರು, ಮಧ್ಯವಯಸ್ಕರು, ಇಳಿ ವಯಸ್ಸಿನ ಅಭಿಮಾನಿಗಳೂ ಮನೆಯಿಂದ ಹೊರಗೆ ಬಂದು ಆರ್‌ಸಿಬಿ ವಿಜಯೋತ್ಸವದಲ್ಲಿ ಭಾಗಿಯಾದರು. ಪಂದ್ಯ ವೀಕ್ಷಣೆಗಾಗಿ ಮನೆ ಸೇರಿದ್ದ, ಕ್ಲಬ್–ರೆಸ್ಟೋರೆಂಟ್‌ಗಳಲ್ಲಿ ಜಮಾಯಿಸಿದ್ದ ಲಕ್ಷಾಂತರ ಅಭಿಮಾನಿಗಳು ಒಮ್ಮೆಗೇ ರಸ್ತೆಗೆ ಇಳಿದಿದ್ದರಿಂದ ನಗರದ ಹಲವಡೆ ಮಧ್ಯರಾತ್ರಿಯಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಅಬಾಲವೃದ್ಧರಾಗಿ ಎಲ್ಲರೂ ರಸ್ತೆಗಿಳಿದು, 'ಆರ್‌ಸಿಬಿ, ಆರ್‌ಸಿಬಿ, ಆರ್‌ಸಿಬಿ' ಎಂದು ಕೂಗತೊಡಗಿದಿರು. ಈ ಕ್ಷಣಕ್ಕಾಗಿಯೇ ಕೂಡಿಟ್ಟುಕೊಂಡಿದ್ದರಂಬಂತೆ ಪಟಾಕಿಗಳನ್ನು ಹೊರತೆಗೆದು, ಸಿಡಿಸತೊಡಗಿದರು. ಕಿವಿಗಡಚಿಕ್ಕುವ ಪಟಾಕಿ ಸದ್ದಿನ ನಡುವೆಯೂ ಅಭಿಮಾನಿಗಳ ಸಂಭ್ರಮ ಮುಗಿಲುಮುಟ್ಟಿತ್ತು. ಅಲ್ಲಿ ಸಿಡಿಯುತ್ತಿದ್ದದ್ದು ಪಟಾಕಿ ಮಾತ್ರವಲ್ಲ, ಬದಲಿಗೆ 18 ವರ್ಷಗಳಿಂದ ಅದುಮಿಟ್ಟುಕೊಂಡಿದ್ದ ನಿರಾಸೆ.

ಒಬ್ಬರು ರಸ್ತೆಗಳಿಯುತ್ತಿದ್ದಂತೆಯೇ, ಅವರ ಹಿಂದೆ ಮತ್ತೊಬ್ಬರೆಂಬಂತೆ ಜನ ರಸ್ತೆಗೆ ಇಳಿಯುತ್ತಲೇ ಹೋದರು. ರಾತ್ರಿ ಹನ್ನೆರಡರ ವೇಳೆಗೆ ನಗರದ ಬಹುತೇಕ ಮುಖ್ಯರಸ್ತೆಗಳು, ವೃತ್ತಗಳು ಸಂಭ್ರಮಾಚರಣೆಯ ತಾಣಗಳಾಗಿ ಬದಲಾಗಿ ಹೋದವು. ಇನ್ನು ರಸ್ತೆಗೆ ಇಳಿಯದವರು ಬಾಲ್ಕನಿಗಳಲ್ಲಿ, ಮನೆ ಬಾಗಿಲಿನಲ್ಲಿ ನಿಂತು ವಿಜಯೋತ್ಸವಕ್ಕೆ ಜತೆಯಾದರು.

ತಡರಾತ್ರಿಯೂ ತೆರೆದಿದ್ದ ಬೇಕರಿಗಳಲ್ಲಿ ಸಿಹಿ ಖರೀದಿಸಿ, ರಸ್ತೆಯಲ್ಲಿ ಹಂಚಿದರು. ರಸ್ತೆಯಲ್ಲಿ ಹೋಗುತ್ತಿದ್ದ ವಾಹನಗಳನ್ನು ತಡೆದು, ಸಿಹಿ ಮತ್ತು ಸಂಭ್ರಮ ಹಂಚಿಕೊಂಡರು. ಇನ್ನೂ ಕೆಲವರು ಬೈಕು, ಕಾರುಗಳನ್ನು ಏರಿ ಮೆರವಣಿಗೆ ಹೊರಟರು. ರಸ್ತೆಯಲ್ಲಿ ಅಲ್ಲಲ್ಲಿ ನಿಂತಿದ್ದವರೂ ಮೆರವಣಿಗೆಗೆ ಜತೆಯಾದರು. ಇನ್ನೂ ಹಲವರು ರಸ್ತೆಗಳಲ್ಲಿ ಗುಂಪು ಸೇರಿ, ಕುಣಿದು ಕುಪ್ಪಳಿಸಿದರು. 18 ವರ್ಷಗಳ ಕಾಯುವಿಕೆ ಮರೆಯುವಷ್ಟು ಕುಣಿದರು, ಕೂಗಿದರು.

ಎದುರಿಗಿರವವರು, ಪಕ್ಕದಲ್ಲಿರುವವರು, ಹಿಂದಿರುವವರು, ಮುಂದಿರುವವರು ಎಲ್ಲರೂ ನಮ್ಮವರೆ ಎಂಬಂತೆ ಕೈಬೀಸಿ ವಿಜಯದ ಸಂಕೇತ ತೋರಿದರು. ಎದುರಾದವರಿಗೆ 'ಹೈ ಫೈವ್' ಹೊಡೆದರು. ರಸ್ತೆಗೆ ಇಳಿದಿದ್ದವರ ಮಧ್ಯೆ ಬೇಧದ ಯಾವ ಒಡಕೂ ಕಾಣಲಿಲ್ಲ. ಅಲ್ಲಿದ್ದದ್ದು ಆರ್‌ಸಿಬಿ ಅಭಿಮಾನ, ಸಂಭ್ರಮ, ವಿಜಯೋತ್ಸವ ಮತ್ತು ಅಬ್ಬರ ಮಾತ್ರ.

ಆರ್‌ಸಿಬಿ ಅಭಿಮಾನಿಗಳ ಸಂಭ್ರಮದ ಅಬ್ಬರ ಅದಾಗಲೇ ನಿದ್ರೆಗೆ ಜಾರಿದ್ದವರನ್ನೂ ಬಡಿದೆಬ್ಬಿಸಿತು. ಮನೆ–ಮನೆಗಳ ದೀಪಗಳು ಬೆಳಗಿದವು. ಸಮಯ ಕಳೆಯುತ್ತಾ ಹೋದಂತೆ ಸಂಭ್ರಮಾಚರಣೆ ಹೆಚ್ಚುತ್ತಲೇ ಹೋಯಿತು. ಪೊಲೀಸರೂ ಅಡ್ಡಿಪಡಿಸದೆ, ಸಂಭ್ರಮಾಚರಣೆಯ ಭಾಗವಾದರು. ರಾತ್ರಿ ಕಳೆದಂತೂ ಸಂಭ್ರಮ ಹೆಚ್ಚುತ್ತಲೇ ಹೋಯಿತು. ಮತ್ತೆ ನಿದ್ರೆಗೆ ಜಾರುವವರೆಗೂ 'ಆರ್‌ಸಿಬಿ, ಆರ್‌ಸಿಬಿ, ಆರ್‌ಸಿಬಿ' ಎಂಬುದಹ ಕಿವಿಗೆ ಅಪ್ಪಳಿಸುತ್ತಲೇ ಇತ್ತು.

ಆರ್‌ಸಿಬಿ ತಂಡವು ಪಂಜಾಬ್ ಕಿಂಗ್ಸ್ ವಿರುದ್ಧ ಗೆಲುವು ಸಾಧಿಸಿದ ನಂತರ ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಅಭಿಮಾನಿಗಳು ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್

ಚರ್ಚ್ ಸ್ಟ್ರೀಟ್‌ನಲ್ಲಿ ಕಲಾವಿದರೊಬ್ಬರು ವಿರಾಟ್ ಕೊಹ್ಲಿ ಅವರ ಚಿತ್ರವನ್ನು ಬಿಡಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಶಿವಾಜಿನಗರದ ಚಾಂದಿನಿ ಚೌಕ್‌ನಲ್ಲಿ ಹಾಕಿರುವ ಎಲ್‌ಇಡಿ ಪರದೆಯಲ್ಲಿ ಐಪಿಎಲ್ ಫೈನಲ್ ಪಂದ್ಯ ವೀಕ್ಷಿಸಿದ ಜನ ಪ್ರಜಾವಾಣಿ ಚಿತ್ರ

ಐಪಿಎಲ್ ಫೈನಲ್ ಜಾತ್ರೆ...

ಹದಿನೆಂಟನೇ ಆವೃತ್ತಿಯ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ನಡುವಣ ಫೈನಲ್ ಪಂದ್ಯ ಅಹಮದಾಬಾದ್‌ನಲ್ಲಿ ನಡೆದರೂ ಬೆಂಗಳೂರಿನ ರಸ್ತೆ, ಮೈದಾನ, ಪಬ್, ಮಾಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು ಅಕ್ಷರಶಃ ಕ್ರಿಕೆಟ್ ವೀಕ್ಷಣಾ ಮಂದಿರಗಳಾಗಿ ಬದಲಾಗಿದ್ದವು.

ಐಪಿಎಲ್ ಆರಂಭವಾದಾಗಿನಿಂದ ಮೂರು ಬಾರಿ ಫೈನಲ್ ಪ್ರವೇಶಿಸಿದ್ದರೂ ಆರ್‌ಸಿಬಿ ಒಮ್ಮೆಯೂ ಟ್ರೋಫಿ ಗೆದ್ದಿರಲಿಲ್ಲ. ಆದರೂ ಆರ್‌ಸಿಬಿ ಅಭಿಮಾನಿಗಳಿಗೆ ತಂಡದ ಮೇಲಿನ ಅಭಿಮಾನ ಕಡಿಮೆ ಆಗಿರಲಿಲ್ಲ. ಬದಲಿಗೆ ಪ್ರತಿ ಬಾರಿ ಪಂದ್ಯ ಆರಂಭವಾದಾಗಲೂ, 'ಈ ಸಲ ಕಪ್ ನಮ್ದೇ' ಎಂದು ಬೆಂಬಲಿಸಿ ಕ್ರೀಡಾಂಗಣಕ್ಕೆ ದಾಂಗುಡಿ ಇಡುತ್ತಿದ್ದರು. ಈ ಸಾಲಿನಲ್ಲಿ ಆರ್‌ಸಿಬಿ ಆಡಿದ ಪ್ರತಿ ಪಂದ್ಯದಲ್ಲೂ ಇದೇ ಹುಮ್ಮಸ್ಸಿನೊಂದಿಗೆ ಅಭಿಮಾನಿಗಳು ಕ್ರೀಡಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದರು.

ಅಹಮದಾಬಾದ್‌ನಲ್ಲಿ ಫೈನಲ್ ಪಂದ್ಯ ನಡೆಯುತ್ತಿರುವ ಕಾರಣ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರುವ ಅವಕಾಶ ಬೆಂಗಳೂರಿಗರಿಗೆ ಮತ್ತು ಆರ್‌ಸಿಬಿ ಅಭಿಮಾನಿಗಳ ಕೈತಪ್ಪಿತ್ತು. ಆದರೂ, ಇಡೀ ಬೆಂಗಳೂರಿನಲ್ಲಿ ಕ್ರಿಕೆಟ್ ಹಬ್ಬ ಆಚರಿಸುವ ಉತ್ಸಾಹ ಅಭಿಮಾನಿಗಳಲ್ಲಿ ಕುಂದಿರಲಿಲ್ಲ.

ಸಂಜೆ 7.30ಕ್ಕೆ ಪಂದ್ಯ ಆರಂಭವಾಯಿತಾದರೂ, ಬೆಳಿಗ್ಗೆಯಿಂದಲೇ ಪಂದ್ಯ ವೀಕ್ಷಣೆಗೆ ಎಲ್ಲ ರೀತಿಯ ಸಿದ್ಧತೆ ನಡೆದಿತ್ತು. ಈ ಪಂದ್ಯವನ್ನು ಆರ್‌ಸಿಬಿ ಗೆಲ್ಲಲಿ, ಈ ಸಲವಾದರೂ ಕಪ್ ನಮ್ಮದಾಗಲಿ ಎಂದು ಅಭಿಮಾನಿಗಳು ಹಲವೆಡೆ ಪ್ರಾರ್ಥಿಸಿದರು.

ನಗರದ ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯ ಸ್ವಾಮಿ ದೇವಾಲಯದ ಬಳಿ ಪ್ರತಿ ಶನಿವಾರ ವಿಶೇಷ ಪೂಜೆಗೆ ಸಾವಿರಾರು ಜನ ಸೇರುತ್ತಾರೆ. ಮಂಗಳವಾರ ಅಲ್ಲಿ ಸೇರಿದ್ದ ನೂರಾರು ಜನರು, ಆರ್‌ಸಿಬಿ ಹೆಸರಿನಲ್ಲಿ ಅರ್ಚನೆ ಮಾಡಿಸಿದರು. ವಿಶೇಷ ಹೋಮದಲ್ಲಿ ಭಾಗಿಯಾದರು. ಆಟೊಗಳಲ್ಲಿ ಆರ್‌ಸಿಬಿಯ ಧ್ವಜ ಕಟ್ಟಿಕೊಂಡು ಚಾಲಕರು ಮೆರವಣಿಗೆ ನಡೆಸಿದರು. ಆಟೊ ಚಾಲಕರು, ಡೆಲಿವರಿ ಬಾಯ್‌ಗಳು ಸೇರಿದಂತೆ ಜನಸಾಮಾನ್ಯರು ಕೂಡ ಅರ್‌ಸಿಬಿಯ ಜರ್ಸಿ ಧರಿಸಿ ಬೆಂಬಲ ಸೂಚಿಸಿದರು.

ನಗರದ ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಮುಂಭಾಗದಲ್ಲಿ ಆರ್‌ಸಿಬಿ ಅಭಿಮಾನಿಗಳು 'ಆರ್‌ಸಿಬಿ..ಆರ್‌ಸಿಬಿ..', 'ಕೊಹ್ಲಿ..ಕೊಹ್ಲಿ..' ಎಂದು ಕೂಗುತ್ತಿದ್ದ ದೃಶ್ಯಗಳು ಕಂಡುಬಂದವು. ಕ್ರೀಡಾಂಗಣದ ಹೊರಭಾಗದಲ್ಲಿ ಆರ್‌ಸಿಬಿಯ ಟೀ ಶರ್ಟ್, ಧ್ವಜಗಳನ್ನು ಅಭಿಮಾನಿಗಳು ಖರೀದಿಸಿದರು.

ಸಂಜೆಯ ವೇಳೆಗೆ ಜನರು ಮನೆಗಳತ್ತ ತರಾತುರಿಯಲ್ಲಿ ಹೆಜ್ಜೆಹಾಕಿದರು. ಐಟಿ ಕಂಪನಿ ಉದ್ಯೋಗಿಗಳಲ್ಲಿ ಹಲವರು 'ಆರ್‌ಸಿಬಿ ಪಂದ್ಯ ವೀಕ್ಷಣೆ'ಯ ಕಾರಣ ಕೊಟ್ಟು, ರಜೆ ಪಡೆದಿದ್ದರು.

ಚರ್ಚ್ ಸ್ಟ್ರೀಟ್ ನಲ್ಲಿ ಅಭಿಮಾನಿಗಳು ಹರ್ಷಿಸಿದರು

ಪಂದ್ಯ ಆರಂಭವಾಗುವ ವೇಳೆಗೆ ನಗರದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಿತ್ತು. ಮೆಟ್ರೊ ರೈಲಿನಲ್ಲೂ ಪ್ರಯಾಣಿಕರ ಸಂಖ್ಯೆ ಕಡಿಮೆ ಆಗಿತ್ತು. ವಸತಿ ಪ್ರದೇಶಗಳಲ್ಲಿ ಜನರು ಮನೆ ಸೇರಿದ್ದರಿಂದ ರಸ್ತೆಗಳು ನಿರ್ಜನವಾಗಿದ್ದವು.

ನಗರದ ಪಬ್‌ಗಳು, ಮಾಲ್‌ಗಳು, ರೆಸ್ಟೋರೆಂಟ್‌ಗಳು, ಕ್ಲಬ್‌ಗಳು ಕಿಕ್ಕಿರಿದು ತುಂಬಿದ್ದವು. ದೊಡ್ಡ ಪರದೆಗಳಲ್ಲಿ ಪಂದ್ಯ ವೀಕ್ಷಣೆಗೆ ಅವಕಾಶ ಮಾಡಿದ್ದರಿಂದ ವಹಿವಾಟು ಜೋರಾಗಿತ್ತು. ಚರ್ಚ್‌ಸ್ಟ್ರೀಟ್‌ನಲ್ಲಿನ ಬಹುತೇಕ ರೆಸ್ಟೋರೆಂಟ್‌ಗಳು ತುಂಬಿದ್ದವು. ಒಂದು ದಿನ ಮೊದಲೇ ಕ್ಲಬ್ ಮತ್ತು ಪಬ್‌ಗಳ ಪಾಸ್‌ಗಳು ಬಿಕರಿಯಾಗಿದ್ದವು. ಹೀಗಾಗಿ ದೊಡ್ಡ ಎಲ್‌ಇಡಿ ಪರದೆ ಹಾಕಿದ್ದ ರೆಸ್ಟೋರೆಂಟ್‌ಗಳ ಎದುರು ಆರ್‌ಸಿಬಿ ಅಭಿಮಾನಿಗಳು ರಸ್ತೆಯಲ್ಲೇ ನಿಂತು ಪಂದ್ಯ ವೀಕ್ಷಿಸಿದರು.

ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳು ರನ್‌ಗಳಿಸಿದಾಗ, ಚೆಂಡನ್ನು ಬೌಂಡರಿಗೆ ಅಟ್ಟಿದಾಗ ಅಭಿಮಾನಗಳ ಹರ್ಷೋದ್ಗಾರ ಮುಗಿಲುಮುಟ್ಟಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ ನಡೆದಾಗ ಸೇರುತ್ತಿದ್ದಕ್ಕಿಂತ ಹೆಚ್ಚಿನ ಸದ್ದುಗದ್ದಲ ಚರ್ಚ್‌ಸ್ಟ್ರೀಟ್ ಮತ್ತು ಎಂ.ಜಿ. ರಸ್ತೆಯಲ್ಲಿತ್ತು.

ವಿಜಯನಗರದ ಬಿಜಿಎಸ್ ಕ್ರೀಡಾಂಗಣದಲ್ಲಿ ಹಾಕಿದ್ದ ಬೃಹತ್ ಎಲ್‌ಇಡಿ ಪರದೆ ಮೇಲೆ ಫೈನಲ್ ಪಂದ್ಯ ವೀಕ್ಷಿಸಲು ಸಾವಿರಾರು ಜನ ಸೇರಿದ್ದರು. ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

'ಸಿಂಧೂರ': 7 ತಾಣಗಳ ವಿವರ ನೀಡಿದ ಪಾಕ್



ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿನ ಉಗ್ರರ ನೆಲೆ ಗುರಿಯಾಗಿಸಿ ಭಾರತ ಸೇನೆಯು ನಡೆಸಿದ ನಿರ್ದಿಷ್ಟ ದಾಳಿಯ ಸ್ಥಳಗಳ ಹೊಸ ಪಟ್ಟಿಯನ್ನು ಪಾಕ್ ತಯಾರಿಸಿದೆ. ಈ ಪಟ್ಟಿಯಲ್ಲಿ ಹಿಂದೆ ಉಲ್ಲೇಖವಾಗದೇ ಇದ್ದ ಏಳು ಹೊಸ ತಾಣಗಳನ್ನು ಗುರುತಿಸಿದೆ.

ಪಾಕ್‌ನ ಹೊಸ ಪಟ್ಟಿಯ ಪ್ರಕಾರ, ಖೈಬರ್ ಪಖ್ತುಂಕ್ವಾ ಪ್ರಾಂತ್ಯದ ಪೆಶಾವರ್‌ನ ಅಟ್ಟೊಕ್, ಬಹವಲ್‌ನಗರ್, ಚೊರ್ ಹಾಗೂ ಸಿಂಧ್ ಪ್ರಾಂತ್ಯದ ಹೈದರಾಬಾದ್, ಪಂಜಾಬ್ ಪ್ರಾಂತ್ಯದ ಝೂಂಗ್, ಗುಜರಾತ್ ತಾಣಗಳಲ್ಲೂ ಭಾರತ ಸೇನೆ ದಾಳಿ ನಡೆಸಿದೆ.

'ಆಪರೇಷನ್ ಸಿಂಧೂರ' ಸೇನಾ ದಾಳಿಗೆ ಪ್ರತಿಯಾಗಿ ಪಾಕಿಸ್ತಾನವು ಕೈಗೊಂಡಿದ್ದ ಆಪರೇಷನ್ ಬನ್ಯಾನ್ ಉಮ್ ಮಾರ್ಸೂಸ್ ಕಾರ್ಯಾಚರಣೆ ಕುರಿತ ದಾಖಲೆಯಲ್ಲಿ ಈ ತಾಣಗಳನ್ನು ಪಾಕಿಸ್ತಾನ ಉಲ್ಲೇಖಿಸಿದೆ.

ಪಾಕಿಸ್ತಾನದ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾದ ಈ ದಾಖಲೆಯ ಗ್ರಾಫಿಕ್‌ಗಳು ಇದ್ದು, ಭಾರತವು ನಡೆಸಿದ ಡ್ರೋನ್ ದಾಳಿಯ ವಿವರಗಳನ್ನು ಒಳಗೊಂಡಿದೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ನೆಲೆ ಗುರಿಯಾಗಿಸಿ ಭಾರತವು ಮೇ 8, 9 ಮತ್ತು 10ರಂದು ದಾಳಿ ನಡೆಸಿತ್ತು. ಉಗ್ರ ಸಂಘಟನೆಗಳಾದ ಎಲ್‌ಇಟಿ ಜೊತೆಗೆ ಗುರುತಿಸಿಕೊಂಡಿರುವ ಮಾರ್ಕಜ್ ತಯಬಾ, ಜೈಶ್ ಎ ಮೊಹಮ್ಮದ್ ಮತ್ತು ಹಿಜ್ಬುಲ್ ಮೆಹಮೂನ್ ಜೊಯಾಗೆ ಸೇರಿದ ತಾಣಗಳ ಮೇಲೆ ದಾಳಿ ನಡೆಸಲಾಗಿತ್ತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

("ವಿ ಟಿ ಯು ಅಧಿನಿಯಮ 1994 ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ")
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ ರಾಜ್ಯ
ಫೋನ್ : (0831)2405468, ಫ್ಯಾಕ್ಸ್ : (0831)2405467

ಉಲ್ಲೇಖ : ವಿತಾವಿ/ಆ.ಸ./2025–26/ 384 ದಿನಾಂಕ : 02–06–2025

ಅಧಿಸೂಚನೆ

ವಿಷಯ: ವಿ.ತಾ.ವಿ.ಯ ಇಪ್ಪತ್ತೈದನೇಯ ವಾರ್ಷಿಕ ಘಟಿಕೋತ್ಸವ (ಭಾಗ–I) ಸಮಾರಂಭ– ಪದವಿ(UG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಪದವಿ (UG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ತೈದನೇಯ ಘಟಿಕೋತ್ಸವ (ಭಾಗ–I) ಸಮಾರಂಭವು ಶುಕ್ರವಾರ, ದಿನಾಂಕ 04 ಜುಲೈ 2025 ರಂದು, ಪೂರ್ವಾಹ್ನ 11–00 ಗಂಟೆಗೆ ವಿ.ತಾವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಪ್ರೇಕ್ಷಾಗೃಹ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2024–25ನೇ ಸಾಲಿನ ಪದವಿ(UG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ‍್ಯಾಂಕ ವಿಜೇತರಿಗೆ ಮತ್ತು ಸಂಶೋಧನ ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರುವುದು ಸಲಹೆ ನೀಡಲಾಗಿದೆ.
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು(ಪರೀಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು
* ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಕಛೇರಿಯ ಮಾರನೇಯ ದಿನ, ಅಂದರೆ ದಿ:07–07–2025ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು.
* ಉಳಿದವರಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗ, ಭಾರತ ಸರ್ಕಾರ

ಜವಾಹರ ನವೋದಯ ವಿದ್ಯಾಲಯಗಳಲ್ಲಿ 2026–27ನೇ ಸಾಲಿಗೆ ಆಯ್ಕೆ ಪರೀಕ್ಷೆಯ ಮೂಲಕ 6ನೇ ತರಗತಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳಿಂದ ಆನ್ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2026-27 ಪ್ರವೇಶ ಅಧಿಸೂಚನೆ ಪ್ರಮುಖ ಘೋಷಣೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 29–07–2025

ಸಾಮಾನ್ಯ ವಿಶೇಷ ಲಕ್ಷಣಗಳು

★ ಪ್ರತಿ ಜಿಲ್ಲೆಯಲ್ಲಿ ಸಹ ಶಿಕ್ಷಣ ವಸತಿ ಶಾಲೆಗಳು,
★ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ.
★ ಉಚಿತ ಶಿಕ್ಷಣ, ಆಹಾರ ಮತ್ತು ವಸತಿ ವ್ಯವಸ್ಥೆ.
★ ವಲಸೆ ಯೋಜನೆಯ ಮೂಲಕ ವೈವಿಧ್ಯಮಯ ಸಾಂಸ್ಕೃತಿಕ ವಿನಿಮಯ, ಕ್ರೀಡೆ ಮತ್ತು ಆಟೋಟಗಳಿಗೆ ಉತ್ತೇಜನ.
★ ಎನ್.ಸಿ.ಸಿ., ಸ್ಕೌಟ್ಸ್ & ಗೈಡ್ಸ್ ಮತ್ತು ಎನ್.ಎಸ್. ಎಸ್

ವಿಶೇಷ ಲಕ್ಷಣಗಳು

ಗುಣಮಟ್ಟದ ಶಿಕ್ಷಣದ ಮೇಲೆ ವಿಶೇಷ ಕೊಟ್ಟಿರುವುದರ ಪರಿಣಾಮವಾಗಿ

★ JEE MAIN – 2025: 12103 ವಿದ್ಯಾರ್ಥಿಗಳಲ್ಲಿ 4492 (37.11%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.
★ JEE ADVANCE -2024: 3126 ವಿದ್ಯಾರ್ಥಿಗಳಲ್ಲಿ 1083 (34.64%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.
★ NEET -2024 24529 ವಿದ್ಯಾರ್ಥಿಗಳಲ್ಲಿ 19183 (81.03%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.
★ X ಮತ್ತು XII ಬೋರ್ಡ್ ತರಗತಿಗಳಲ್ಲಿ ಉತ್ತಮ ಫಲಿತಾಂಶ (2024-25)
★ ವರ್ಗ X: 99.49% ವರ್ಗ XII: 99.29%

ಅರ್ಹತೆ

★ ಅಭ್ಯರ್ಥಿಗಳು ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಜವಾಹರ ನವೋದಯ ವಿದ್ಯಾಲಯಗಳ ಆಯಾ ಜಿಲ್ಲೆಯ ವಿಶ್ವಾಸಾರ್ಹ ನಿವಾಸಿಗಳೇ ಆಗಿರಬೇಕು ಮತ್ತು 2025–26 ನೇ ಶೈಕ್ಷಣಿಕ ವರ್ಷದಲ್ಲಿ ಅದೇ ಜಿಲ್ಲೆಯ ಸರ್ಕಾರಿ/ ಸರ್ಕಾರದಿಂದ ಮಾನ್ಯತೆ ಪಡದಿರುವ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರಬೇಕು.
★ ವಿದ್ಯಾರ್ಥಿಯು 3 ಮತ್ತು 4 ನೇ ತರಗತಿಯ ಪೂರ್ಣ ಶೈಕ್ಷಣಿಕ ವರ್ಷವನ್ನು ಸರ್ಕಾರಿ/ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಪೂರ್ಣಾವಧಿ ಶಾಲಾ ಶಿಕ್ಷಣ ಪಡೆದು ತೇರ್ಗಡ ಹೊಂದಿರಬೇಕು. 01.05.2014 ರಿಂದ 31.07.2016 ರ ಮಧ್ಯೆ ಜನಿಸಿದವರಾಗಿರಬೇಕು (ಎರಡೂ ದಿನಗಳು ಸೇರಿ).

ನೋಂದಣಿ ಮತ್ತು ವಿವರಗಳಿಗಾಗಿ ಲಾಗಿನ್ ಮಾಡಿ

https://navodava.gov.in

ಮೀಸಲಾತಿ

★ ಜಿಲ್ಲೆಯಲ್ಲಿ ಕನಿಷ್ಠ ಶೇ 75% ರಷ್ಟು ಸ್ಥಾನಗಳು ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಂದ ತುಂಬಲಾಗುವುದು.
★ ಸರ್ಕಾರದ ನಿಯಮದನ್ವಯ SC,ST, OBC ಮತ್ತು ದಿವ್ಯಾಂಗ ಅಭ್ಯರ್ಥಿಗಳಿಗೆ ಮೀಸಲಾತಿ ಇದೆ.
★ ಕನಿಷ್ಠ 1/3 ರಷ್ಟು ಸ್ಥಾನಗಳು ಬಾಲಕಿಯರಿಗೆ ಮೀಸಲಾಗಿರುತ್ತವೆ.

ಆಯ್ಕೆ ಪರೀಕ್ಷೆ ದಿನಾಂಕ

ಬೇಸಿಗೆಗಾಲ ಬದ್ಧ ಜ.ನ.ವಿ.ಗಳು
ಡಿಸೆಂಬರ್ 13, 2025

ಚಳಿಗಾಲ ಬದ್ಧ ಜ.ನ.ವಿ.ಗಳು
ಏಪ್ರಿಲ್ 11, 2026

ಪ್ರಕಟಣೆ: ನವೋದಯ ವಿದ್ಯಾಲಯ ಸಮಿತಿ

ಮೂರು ದಿನದಲ್ಲಿ ₹21.19 ಲಕ್ಷ ದಂಡ ವಸೂಲಿ: ಬಿ.ದಯಾನಂದ ಮಾಹಿತಿ

ಕೋಟ್ಪಾ: 11,507 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ದಯಾನಂದ

ಬೆಂಗಳೂರು: 'ವಿಶ್ವ ತಂಬಾಕು ರಹಿತ ದಿನ'ದ ಅಂಗವಾಗಿ ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಕೋಟ್ಪಾ ಕಾಯ್ದೆ(-ಸಿಗರೇಟ್ ಮತ್ತಿತರ ತಂಬಾಕು ಉತ್ಪನ್ನಗಳ ಕಾಯ್ದೆ) ಉಲ್ಲಂಘಿಸಿದವರ ವಿರುದ್ಧ 11,507 ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ನಗರದಾದ್ಯಂತ ವೈನ್‌ಶಾಪ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಲಾಡ್ಜ್‌ಗಳು, ಪಿ.ಜಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮೇ 31ರಿಂದ ಜೂನ್ 2ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಕೋಟ್ಪಾ ಕಾಯ್ದೆಯ ಕಲಂ 4ರ ಅಡಿಯಲ್ಲಿ 11,324 ಪ್ರಕರಣ ದಾಖಲಿಸಿಕೊಂಡು ₹20.91 ಲಕ್ಷ ದಂಡ ವಸೂಲಿ ಮಾಡಲಾಗಿದೆ. ಕಲಂ 6ಎ ಅಡಿ 135 ಪ್ರಕರಣ ದಾಖಲು ಮಾಡಿಕೊಂಡು ₹22 ಸಾವಿರ ದಂಡ ಸಂಗ್ರಹ ಮಾಡಲಾಗಿದೆ. ಕಲಂ 6ಬಿ ಅಡಿ 48 ಪ್ರಕರಣ ದಾಖಲಿಸಿಕೊಂಡು, ₹5 ಸಾವಿರ ದಂಡ ವಸೂಲಿ ಮಾಡಲಾಗಿದೆ. ಒಟ್ಟು ₹21.19 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಹೇಳಿದರು.

ಕಾಯ್ದೆಯ ಕಲಂ 4ರ (ತಿದ್ದುಪಡಿ) ಪ್ರಕಾರ ಸಾರ್ವಜನಿಕ ಪ್ರದೇಶಗಳಲ್ಲಿ ಸಿಗರೇಟು ಸೇವನೆ ಮಾಡುವಂತಿಲ್ಲ ಹಾಗೂ ತಂಬಾಕು ಜಗಿದು ಉಗಿಯುವಂತಿಲ್ಲ. ಉಲ್ಲಂಘಿಸಿದರೆ ₹1 ಸಾವಿರ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು.

ಕಲಂ 4ಎ ಅನ್ವಯ ರೆಸ್ಟೋರೆಂಟ್ ಅಥವಾ ಹೋಟೆಲ್‌ಗಳಲ್ಲಿ ಹುಕ್ಕಾ ಬಾರ್ ಸ್ಥಾಪಿಸುವಂತಿಲ್ಲ. ಸಿಗರೇಟ್‌ಗಳು ಹಾಗೂ ಇತರೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲು ಪರವಾನಗಿ ಪಡೆದುಕೊಳ್ಳಬೇಕು. ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲು ಬಿಬಿಎಂಪಿ ಕಮಿಷನರ್‌ರಿಂದ ಪರವಾನಗಿ ಪಡೆದುಕೊಳ್ಳಬೇಕು. ಪರವಾನಗಿ ಪಡೆದುಕೊಳ್ಳದೇ ಮಾರಾಟ ಮಾಡಿದ್ದು ಕಂಡುಬಂದರೆ ದಂಡ ವಿಧಿಸಲಾಗುವುದು ಎಂದರು.

ಕಲಂ 5ರ ಅಡಿ ತಂಬಾಕು ಉತ್ಪನ್ನಗಳ ಜಾಹೀರಾತು ಮತ್ತು ಪ್ರಚಾರದ ಮೇಲೆ ನೇರ/ ಪರೋಕ್ಷ ನಿಷೇಧ ಹೇರಲಾಗಿದೆ. ಮೊದಲ ಅಪರಾಧಕ್ಕೆ ಎರಡು ವರ್ಷ ಕಾರಾಗೃಹ ಶಿಕ್ಷೆ ಅಥವಾ ₹1 ಸಾವಿರ ದಂಡ, ಪುನರಾವರ್ತಿತ ಅಪರಾಧಕ್ಕೆ ಐದು ವರ್ಷ ಕಾರಾಗೃಹ ಶಿಕ್ಷೆ ಅಥವಾ ₹5 ಸಾವಿರ ದಂಡವಿದೆ ಎಂದು ಮಾಹಿತಿ ನೀಡಿದರು.

ಯಾವುದೇ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳು 30ಕ್ಕಿಂತ ಹೆಚ್ಚು ಆಸನಗಳು ಅಥವಾ 30ಕ್ಕಿಂತ ಹೆಚ್ಚು ಕೊಠಡಿಗಳನ್ನು ಹೊಂದಿದ್ದರೆ ಧೂಮಪಾನ ಪ್ರದೇಶವನ್ನು ನಿಗದಿಪಡಿಸಬೇಕು ಎಂದು ಹೇಳಿದರು.

ಅಪರಾಧ ಸುದ್ದಿ

1,408 ಪ್ರಕರಣ ದಾಖಲು, ₹7.38 ಲಕ್ಷ ದಂಡ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ಪಶ್ಚಿಮ ವಿಭಾಗದ ಸಂಚಾರ ಪೊಲೀಸರು, 1,408 ಪ್ರಕರಣ ದಾಖಲಿಸಿಕೊಂಡು ₹7.38 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ದ್ವಿಚಕ್ರ ವಾಹನದಲ್ಲಿ ಮೂವರು ಸಂಚರಿಸುತ್ತಿದ್ದ 45 ಪ್ರಕರಣಗಳನ್ನು ದಾಖಲಿಸಿಕೊಂಡು, ₹22,500 ದಂಡ ಸಂಗ್ರಹಿಸಿದ್ದಾರೆ. ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬಂದವರ ವಿರುದ್ಧ 114 ಪ್ರಕರಣ ದಾಖಲಿಸಿಕೊಂಡು, ₹58,500 ದಂಡ ಸಂಗ್ರಹ ಮಾಡಿದ್ದಾರೆ. ನಿರ್ಬಂಧಿತ ಮಾರ್ಗದಲ್ಲಿ ಸಂಚರಿಸಿದವರ ವಿರುದ್ಧ 210 ಪ್ರಕರಣ ದಾಖಲಿಸಿಕೊಂಡು ₹1 ಲಕ್ಷ ದಂಡ ಸಂಗ್ರಹ ಮಾಡಿದ್ದಾರೆ. ಇತರೆ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಒಟ್ಟು 1,035 ಪ್ರಕರಣ ದಾಖಲಿಸಿಕೊಂಡು, ₹5.52 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಪಶ್ಚಿಮ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣವರ್ ತಿಳಿಸಿದರು. ಎಲ್ಲ ವಾಹನ ಚಾಲಕರು, ಸವಾರರು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಸೂಚನೆ ನೀಡಲಾಗಿದೆ ಎಂದೂ ಮಾಹಿತಿ ನೀಡಿದರು.

ವ್ಹೀಲಿ ವಿರುದ್ಧದ ಕಾರ್ಯಾಚರಣೆ: ಹಳೇ ಮೈಸೂರು ರಸ್ತೆಯಲ್ಲಿ ವ್ಹೀಲಿ ಮಾಡುತ್ತಿದ್ದ ಜಾನಕಿರಾಮ್ (19) ಎಂಬಾತನ ವಿರುದ್ಧ ಮಾಗಡಿ ರಸ್ತೆ ಸಂಚಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವ್ಹೀಲಿ ನಡೆಸುತ್ತಿದ್ದ ಬೈಕ್ ಅನ್ನು ಮಾಗಡಿ ರಸ್ತೆ ಸಂಚಾರ ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ

ಮಾಗಡಿ ರಸ್ತೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಜಾನಕಿರಾಮ್ ವ್ಹೀಲಿ ಮಾಡುತ್ತಿರುವುದು ಕಂಡುಬಂದಿತ್ತು. ಯುವಕನ ವಿರುದ್ಧ ಬಿಎನ್‌ಎಸ್ ಕಾಯ್ದೆ ಸೆಕ್ಷನ್ 281 ಹಾಗೂ ಮೋಟಾರು ವಾಹನ ಕಾಯ್ದೆ ಸೆಕ್ಷನ್ 129 ಹಾಗೂ 189ರ ಅಡಿ ಎಫ್‌ಐಆರ್ ದಾಖಲಿಸಿಕೊಂಡು, ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ.

ಆರು ಮಂದಿ ಬಂಧಿಸಿದ ಸಿಸಿಬಿ

ಬಂಧಿತರಿಂದ ಗಾಂಜಾ, ಎಂಡಿಎಂಎ ಕ್ರಿಸ್ಟಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಅನಸ್ಮೊಯ್ದು

ಹಾದಿಲ್

ಅಲೆಕ್ಸ್ ವರ್ಗಿಸ್

ಜೋಬಿನ್

ಬೆಂಗಳೂರು: ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ನಗರದ ವಿವಿಧೆಡೆ ಕಾರ್ಯಾಚರಣೆ ನಡೆಸಿ, ಆರು ಮಂದಿಯನ್ನು ಬಂಧಿಸಿದ್ದು ₹ 84 ಲಕ್ಷ ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ.

ರಾಜಗೋಪಾಲನಗರದ ದರ್ಶನ್, ಪ್ರಜ್ವಲ್ ಹಾಗೂ ಕೇರಳದ ಅಲೆಕ್ಸ್ ವರ್ಗಿಸ್, ಹಾದಿಲ್, ಅನಸ್ಮೊಯ್ದು, ಜೋಬಿನ್ ಬಂಧಿತರು.

ಬ್ಯಾಡರಹಳ್ಳಿ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ 1 ಕೆ.ಜಿ 200 ಗ್ರಾಂ ಗಾಂಜಾ , 220 ಗ್ರಾಂ ಹೈಡ್ರೊ ಗಾಂಜಾ, ಎರಡು ಐ-ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಇದರ ಮೌಲ್ಯ ₹13 ಲಕ್ಷ ಎಂದು ಅಂದಾಜಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಹಾದಿಲ್ ಹಾಗೂ ಜೋಬಿನ್ ಅವರು ಮೋಜಿನ ಜೀವನ ನಡೆಸಲು ಕೇರಳದಿಂದ ಡ್ರಗ್ಸ್ ತಂದು ಬೆಂಗಳೂರಿನಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು' ಎಂದು ಹೇಳಿದರು.

ಬ್ಯಾಡರಹಳ್ಳಿ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ರಾಜಗೋಪಾಲ ನಗರದ ದರ್ಶನ್ ಹಾಗೂ ಪ್ರಜ್ವಲ್ ಅವರನ್ನು ಬಂಧಿಸಲಾಗಿದೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಕ್ರಾಸ್ ಬಳಿ ಅಪರಿಚಿತ ವ್ಯಕ್ತಿಯಿಂದ ಗಾಂಜಾ ಹಾಗೂ ಎಂಡಿಎಂಎ ಡ್ರಗ್ಸ್ ಅನ್ನು ಕಡಿಮೆ ಬೆಲೆಗೆ ಖರೀದಿಸಿ ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದರು. ಆರೋಪಿಗಳಿಂದ ಗಾಂಜಾ, ಎಂಡಿಎಂಎ ಕ್ರಿಸ್ಟಲ್ ಹಾಗೂ ತೂಕದ ಯಂತ್ರವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ನಿಷೇಧಿತ ತಂಬಾಕು ಉತ್ಪನ್ನ ಜಪ್ತಿ: ನಿಷೇಧಿತ ತಂಬಾಕು ಉತ್ಪನ್ನಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದ ಗೋದಾಮಿನ ಮೇಲೆ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ಮುಖ್ಯರಸ್ತೆಯಲ್ಲಿರುವ ಗೋದಾಮಿನ ಮೇಲೆ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿ, ತಂಬಾಕು ಹಾಗೂ ನಿಕೋಟಿನ್ ಒಳಗೊಂಡ ಅಂದಾಜು ₹61.82 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಪರವಾನಗಿ ಪಡೆಯದೆ ತಂಬಾಕು ಉತ್ಪನ್ನಗಳನ್ನು ಹಲವು ದಿನಗಳಿಂದ ಸಂಗ್ರಹಿಸಿ ಆರೋಪಿಗಳು ಹಂಚಿಕೆ ಮಾಡುತ್ತಿದ್ದರು. ಈ ಬಗ್ಗೆ ಬಂದ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಲಾಯಿತು. ಈ ವೇಳೆ ಗೋದಾಮಿನಲ್ಲಿ ಸಂಗ್ರಹಿಸಿಟ್ಟಿದ್ದ ಗಣೇಶ್ 701 ಟೊಬ್ಯಾಕೊ ಪೊಟ್ಟಣಗಳಿದ್ದ 155 ಚೀಲಗಳು, ಕೂಲ್ ಲಿಪ್ ಟೊಬ್ಯಾಕೊ ಇರುವ 160 ಚೀಲಗಳು, ಎಸ್‌ಜಿಟಿ 60 ಬಾಕ್ಸ್‌ಗಳು, ಸ್ವಾಗಟ ಪಾನ್ ಮಸಾಲಾ 60 ಬಾಕ್ಸ್‌ಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇ-ಸಿಗರೇಟುಗಳು ಜಪ್ತಿ: ಎಚ್‌ಬಿಆರ್ ಲೇಔಟ್ ಎರಡನೇ ಹಂತದ ಅಂಗಡಿಯೊಂದರ ಮೇಲೆ ದಾಳಿ ನಡೆಸಿ ನಿಷೇಧಿತ ಸಿಗರೇಟ್, ಹುಕ್ಕಾ, ಫಾರಿನ್ ಸಿಗರೇಟ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದು, ಆರೋಪಿಯನ್ನು ಬಂಧಿಸಲಾಗಿದೆ.

ಸಾರ್ವಜನಿಕರ ಸಹಭಾಗಿತ್ವವೂ ಅಗತ್ಯ

'ಆಲ್ಟರ್‌ನೇಟಿವ್–2025'ರಲ್ಲಿ ಬಿಬಿಎಂಪಿ ಪೂರ್ವವಲಯದ ಆಯುಕ್ತೆ ಸ್ನೇಹಲ್

ಪ್ರಜಾವಾಣಿ ವಾರ್ತೆ

ಗ್ರೇಟರ್ ಬೆಂಗಳೂರು

ಯಲಹಂಕ: 'ಗ್ರೇಟರ್ ಬೆಂಗಳೂರು' ಆಡಳಿತ ಕಾಯ್ದೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರಿ ಸಂಸ್ಥೆಗಳ ಜೊತೆಗೆ ಸಾರ್ವಜನಿಕರ ಸಹಭಾಗಿತ್ವವೂ ಅತ್ಯಗತ್ಯವಾಗಿದೆ ಎಂದು ಬಿಬಿಎಂಪಿ ಪೂರ್ವವಲಯದ ಆಯುಕ್ತೆ ಸ್ನೇಹಲ್ ರಾಯಮಾನೆ ಅಭಿಪ್ರಾಯಪಟ್ಟರು.

ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ವಿಐಎಂಒವಿಇ ಪ್ರತಿಷ್ಠಾನ ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಆಲ್ಟರ್‌ನೇಟಿವ್-2025' ಕಾರ್ಯಕ್ರಮದ 'ಸುಸ್ಥಿರ ಗ್ರೇಟರ್ ಬೆಂಗಳೂರು-ಸಾರ್ವಜನಿಕರ ಅಭಿಪ್ರಾಯಗಳು' ಕುರಿತ ಗುಂಪು-ಚರ್ಚೆಯಲ್ಲಿ ಅವರು ಮಾತನಾಡಿದರು.

'ಪ್ರಸ್ತುತ ನಾಗರಿಕರ ಹೊಣೆಗಾರಿಗೆ ಮತ್ತು ಮೂಲಸೌಕರ್ಯಗಳು ಸೇರಿದಂತೆ ಹಲವಾರು ಸಮಸ್ಯೆಗಳಿವೆ. ಈ ಸಂದರ್ಭದಲ್ಲಿ ಇದನ್ನು ಯಾವ ರೀತಿ ಮುಂದುವರಿಸಿಕೊಂಡು ಹೋಗುತ್ತೀರಿ' ಎಂಬ ಸಾರ್ವಜನಿಕರ ಪ್ರಶ್ನೆಗೆ ಉತ್ತರಿಸಿದ ಅವರು, 'ಯಾವುದೇ ಹೊಸ ವ್ಯವಸ್ಥೆಗಳು ಜಾರಿಯಾಗುವ ಆರಂಭದಲ್ಲಿ ಸಮಸ್ಯೆಗಳು ಸಾಮನ್ಯ. ಸಾರ್ವಜನಿಕರಿಗೆ ಸಮಸ್ಯೆಗಳಾಗದಂತೆ ಕಾಯ್ದೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈಗಾಗಲೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ' ಎಂದರು.

'ಆಲ್ಟರ್‌ನೇಟಿವ್ 2025' ಕಾರ್ಯಕ್ರಮದಲ್ಲಿ ಆಯೋಜಿಸಿದ್ದ 'ಸುಸ್ಥಿರ ಗ್ರೇಟರ್ ಬೆಂಗಳೂರುಸಾರ್ವಜನಿಕರ ಅಭಿಪ್ರಾಯಗಳು' ಕುರಿತ ಗುಂಪುಚರ್ಚೆಯಲ್ಲಿ ಸ್ನೇಹಲ್ ರಾಯಮಾನೆ ಮಾತನಾಡಿದರು. ವಿನಯ್ ಶಿಂದೆ, ಕ್ಲೆಮೆಂಟ್ ಜಯಕುಮಾರ್, ರವೀಂದ್ರ ಹಾಜರಿದ್ದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸೇರಿ ಸರ್ಕಾರಿ ಸಂಸ್ಥೆಗಳು, ಜನಪ್ರತಿ ನಿಧಿಗಳು ಹಾಗೂ ನಾಗರಿಕರನ್ನು ಒಳಗೊಂಡಂತೆ ಪ್ರತಿಯೊಬ್ಬರ ಜವಾಬ್ದಾರಿಯೂ ಈ ಯೋಜನೆಯ ಯಶಸ್ಸಿಗೆ ಮುಖ್ಯವಾಗಿದೆ. ಈಗಿರುವ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಿ, ಭವಿಷ್ಯದಲ್ಲಿ ಇವು ಮರುಕಳಿಸಿದಂತೆ ಯೋಜನೆಗಳನ್ನು ರೂಪಿಸಲಾಗುವುದು. ಜೊತೆಗೆ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿಯೇ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಅನುಷ್ಠಾನಗೊಳಿಸಲಾಗುವುದು' ಎಂದು ತಿಳಿಸಿದರು.

ಮಹದೇವಪುರದ ಸಾಮಾಜಿಕ ಕಾರ್ಯಕರ್ತ ಕ್ಲೆಮೆಂಟ್ ಜಯಕುಮಾರ್ ಮಾತನಾಡಿ, 'ನಾಗರಿಕರು ಮತ್ತು ಜನಪ್ರತಿನಿಧಿಗಳು ಸೇರಿ ಎಲ್ಲರೂ ಸರ್ಕಾರದ ಜೊತೆಗೆ ಕೈಜೋಡಿಸಿದರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಯಾವುದೇ ಸಮಸ್ಯೆಗಳಾಗುವುದಿಲ್ಲ' ಎಂದು ತಿಳಿಸಿದರು.

ಪರಿಸರ ಕಾರ್ಯಕರ್ತ ರವೀಂದ್ರ ಮಾತನಾಡಿ, 'ಪ್ರತಿಯೊಬ್ಬರೂ ಕನಿಷ್ಠ ಏಳು ಗಿಡಗಳನ್ನು ನೆಡಲು ಪ್ರತಿಜ್ಞೆ ಮಾಡಬೇಕು' ಎಂದರು.

'ಆಲ್ಟರ್‌ನೇಟಿವ್- 2025' ಕಾರ್ಯಕ್ರಮದ ಕ್ಯುರೇಟರ್ ಮತ್ತು ಗೋಷ್ಠಿ ನಿರ್ವಾಹಕ ವಿನಯ್ ಶಿಂದೆ, ಗ್ರೇಟರ್ ಬೆಂಗಳೂರು ಕಾಯ್ದೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಅಭಿಪ್ರಾಯಗಳನ್ನು ಪರಿಗಣಿಸುವ ಕುರಿತ ಪತ್ರವನ್ನು ಬೆಂಗಳೂರು ಉಸ್ತುವಾರಿ ಸಚಿವರಿಗೆ ತಲುಪಿಸುವಂತೆ ಕೋರಿ ವಲಯ ಆಯುಕ್ತರಿಗೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸುಸ್ಥಿರ ಬೆಂಗಳೂರು ಅಭಿವೃದ್ಧಿಗೆ ಕೊಡುಗೆ ನೀಡುತ್ತಿರುವ ಸಾಧಕರಿಗೆ 'ನಮ್ಮ ಅರ್ಥ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ನಮ್ಮ ಕೆರೆಗಳು' ವಿಭಾಗದಲ್ಲಿ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಕೆ.ಎಸ್.ನವೀನ್‌ಕುಮಾರ್, 'ಸ್ವಚ್ಛ ಬೆಂಗಳೂರು' ವಿಭಾಗದಲ್ಲಿ ಜಿ. ನಾಗರಾಜ್(ಪ್ಲಾಗ್‌ರಾಜ್) ಹಾಗೂ ಡಿಜಿಟಲ್ ಕಂಟೆಂಟ್ ಕ್ರಿಯೇಟರ್ ವಿಭಾಗದಲ್ಲಿ ಸೃಷ್ಟಿ ಕುಕ್ರೇಜ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗ್ರೇಟರ್ ಬೆಂಗಳೂರಿನ ಪರಿಸರ ನಡೆಗಾಗಿ ಗೀತಾಶಿಂದೆ ಬೆನಗಿ ಅವರ ನೃತ್ಯ ಸಂಯೋಜನೆ ಆಕರ್ಷಕವಾಗಿತ್ತು. ದಯಾ ದಾಬೋಲ್ಕರ್ ಅವರ ವಸ್ತ್ರವಿನ್ಯಾಸದಲ್ಲಿ ಆಯೋಜಿಸಿದ್ದ ಪರಿಸರಸ್ನೇಹಿ ಫ್ಯಾಶನ್ ಶೋ ಕಾರ್ಯಕ್ರಮದಲ್ಲಿ ಪುರುಷರು ಹಾಗೂ ಮಹಿಳೆಯರು ಸ್ವದೇಶಿ ಬಟ್ಟೆಗಳನ್ನು ತೊಟ್ಟು ಹೆಜ್ಜೆಹಾಕುವ ಮೂಲಕ ಗಮನ ಸೆಳೆದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ರೇವಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎನ್.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಆರೋಪಿ ಪೊಲೀಸರ ವಶಕ್ಕೆ, ಮಗು ಆಸ್ಪತ್ರೆಗೆ ದಾಖಲು

ಮಗುವಿನ ಮೇಲೆ ಹಲ್ಲೆ ನಡೆಸಿದ ತಂದೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೇಳಿದ ಮಾತು ಕೇಳಲಿಲ್ಲ ಎನ್ನುವ ಕಾರಣ
- ನೆರೆಯವರಿಂದ ಮಾಹಿತಿ

ಬೆಂಗಳೂರು: ಹೇಳಿದ ಮಾತು ಕೇಳಲಿಲ್ಲ ಎನ್ನುವ ಕಾರಣಕ್ಕೆ 10 ವರ್ಷದ ಹೆಣ್ಣು ಮಗುವಿಗೆ ಬಾಸುಂಡೆ ಬರುವಂತೆ ಹಲ್ಲೆ ನಡೆಸಿದ ತಂದೆಯನ್ನು ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ನೇಪಾಳ ಮೂಲದ ದಂಪತಿ, ಠಾಣಾ ವ್ಯಾಪ್ತಿಯ ಚಿಕ್ಕಬೆಟ್ಟದ ಹಳ್ಳಿಯ ಬಾಲಾಜಿ ಲೇಔಟ್‌ನ ಬಾಡಿಗೆ ಮನೆಯಲ್ಲಿ ನೆಲಸಿದ್ದಾರೆ. ಮಗು ಹೇಳಿದ ಮಾತು ಕೇಳಲಿಲ್ಲ ಎನ್ನುವ ಕಾರಣಕ್ಕೆ ತಂದೆ ಲೋಕೇಶ್ ಅವರು ಹಲ್ಲೆ ನಡೆಸಿದ್ದಾರೆ. ಬಾಲಕಿಯ ಕೈ-ಕಾಲು, ಬೆನ್ನಿಗೆ ಗಾಯವಾಗಿದೆ. ತಾಯಿ ಅಮೃತಾ ಅವರ ಎದುರೇ ಹಲ್ಲೆ ನಡೆಸಿದ್ದರೂ ಆಕೆ ರಕ್ಷಣೆ ಮಾಡಿರಲಿಲ್ಲ ಎನ್ನಲಾಗಿದೆ.

ಜೋರಾಗಿ ಅಳುತ್ತಿರುವುದನ್ನು ಗಮನಿಸಿದ ಅಕ್ಕಪಕ್ಕದ ನಿವಾಸಿಗಳು ಮಗುವನ್ನು ರಕ್ಷಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು.

'ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಹಲ್ಲೆಯ ಪರಿಣಾಮ ಮಗುವಿನ ದೇಹದ ಭಾಗದ ಬಹುತೇಕ ಕಡೆ ರಕ್ತ ಹೆಪ್ಪುಗಟ್ಟಿದೆ. ಮಗುವನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಮಗುವಿನ ತಂದೆ ಲೋಕೇಶ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಲೋಕೇಶ್ ಅವರು ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದಾರೆ. ಅಮೃತಾ ಅವರು ಮನೆ ಕೆಲಸ ಮಾಡುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು. ಸದ್ಯ ಘಟನೆ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಅಪಘಾತ: ಇಬ್ಬರು ಯುವಕರ ಸಾವು

ಆಕಾಶ್

ಅಫ್ಜಲ್

ಬೆಂಗಳೂರು: ಮೈಸೂರು ರಸ್ತೆಯ ಸಿಟಿ ಮಾರುಕಟ್ಟೆ ಮೇಲ್ಸೇತುವೆಯಲ್ಲಿ ಸೋಮವಾರ ತಡರಾತ್ರಿ ಎರಡು ಬೈಕ್‌ಗಳ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಮತ್ತಿಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಆಕಾಶ್ ಹಾಗೂ ಅಫ್ಜಲ್ ಮೃತರು.

ಕೆ.ಪಿ.ಅಗ್ರಹಾರ ನಿವಾಸಿಯಾಗಿದ್ದ ಆಕಾಶ್ ಗ್ರೈಂಡರ್ ರಿಪೇರಿ ಕೆಲಸ ಮಾಡುತ್ತಿದ್ದರು. ಮಂಗಳೂರಿನ ಅಫ್ಜಲ್ ಅವರು ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ವಿಜಯನಗರದಲ್ಲಿ ನೆಲಸಿದ್ದರು.

ಸೋಮವಾರ ತಡರಾತ್ರಿ ಮಣಿ ಹಾಗೂ ಆಕಾಶ್ ಅವರು ಒಂದೇ ಬೈಕ್‌ನಲ್ಲಿ ಮೇಲ್ಸೇತುವೆಯಲ್ಲಿ (ಗಣೇಶ್ ದೇವಸ್ಥಾನದ ಬಳಿ) ವೇಗವಾಗಿ ತೆರಳುತ್ತಿದ್ದರು. ಮುಂದೆ ಅಫ್ಜಲ್ ಹಾಗೂ ಕಾಸೀಂ ಅವರು ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಮಣಿ ಹಾಗೂ ಆಕಾಶ್ ತೆರಳುತ್ತಿದ್ದ ಬೈಕ್, ಎಲೆಕ್ಟ್ರಿಕ್ ಸ್ಕೂಟರ್‌ಗೆ ಡಿಕ್ಕಿಯಾದ ಪರಿಣಾಮ ನಾಲ್ವರು ರಸ್ತೆಗೆ ಬಿದ್ದರು. ಗಾಯಗೊಂಡ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ಧಾರೆ. ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಹವಾಮಾನ ಬದಲಾವಣೆ: ಪರಿಹಾರ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಸಿಲಿಕಾನ್ ವ್ಯಾಲಿ ಎಂದೇ ಹೆಸರಾಗಿರುವ ಬೆಂಗಳೂರು ವಿಜ್ಞಾನ ಮತ್ತು ಸಂಶೋಧನೆಯ ಕೇಂದ್ರವಾಗಿದೆ. ಆದರೆ, ಸಂಪನ್ಮೂಲ ಪಡೆದುಕೊಳ್ಳುವಲ್ಲಿ ನಗರವು ಹಲವು ಸವಾಲು ಮತ್ತು ಒತ್ತಡ ಎದುರಿಸುತ್ತಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ನಗರದಲ್ಲಿ ಮಂಗಳವಾರ ಒ.ಪಿ. ಜಿಂದಾಲ್ ಜಾಗತಿಕ ವಿಶ್ವವಿದ್ಯಾಲಯ (ಜೆಜಿಯು) ಮತ್ತು ಆರ್.ವಿ. ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ಬೆಂಗಳೂರಿನಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಮುನ್ನಡೆಸುವುದು: ಜ್ಞಾನ ಹಂಚಿಕೆ ಮತ್ತು ಸಹಕಾರದ ಮೂಲಕ ಬಹು-ಪಾಲುದಾರರ ಸಹಭಾಗಿತ್ವದ ಪರಿಣಾಮವನ್ನು ಹೆಚ್ಚಿಸುವುದು' ಕುರಿತ ಬೆಂಗಳೂರು ಸುಸ್ಥಿರತೆ ಸಮಾವೇಶದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಥಾವರಚಂದ್ ಗೆಹಲೋತ್ ಅವರನ್ನು ಪ್ರೊ. ಸಿ.ರಾಜಕುಮಾರ್ ಗೌರವಿಸಿದರು. (ಎಡದಿಂದ) ಆನಂದ್ ಪ್ರಕಾಶ್ ಮಿಶ್ರಾ, ಪ್ರೊ. ಆರ್‌ಸುದರ್ಶನ್, ಡಾ.ಎ.ವಿ.ಎಸ್‌ಮೂರ್ತಿ, ಮೈಕಲ್ ಡಿ ವಿಲ್ಸನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಹವಾಮಾನ ಬದಲಾವಣೆಯಿಂದ ಎದುರಾಗುವ ಸವಾಲುಗಳನ್ನು ನಿವಾರಣೆ ಮಾಡುವಲ್ಲಿ ಜ್ಞಾನದ ಹಂಚಿಕೆ, ಸಹಕಾರ ಮತ್ತು ಮಾಹಿತಿ ವಿನಿಮಯ ಮಹತ್ವದ ಪಾತ್ರ ವಹಿಸುತ್ತದೆ. ಪರಿಸರಕ್ಕೆ ಇಂಗಾಲ ಸೇರ್ಪಡೆ, ಮಾಲಿನ್ಯ, ಅರಣ್ಯಗಳ ನಾಶ ಹಾಗೂ ಇತರೆ ಅಂಶಗಳು ಹವಾಮಾನಕ್ಕೆ ಸಂಬಂಧಿಸಿದ ಸಂಕಷ್ಟಕ್ಕೆ ಕಾರಣವಾಗಿವೆ. ಈ ಎಲ್ಲಾ ಸಮಸ್ಯೆಗಳಿಗೆ ತುರ್ತಾಗಿ ಪರಿಹಾರ ಕಂಡುಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಕೇಂದ್ರ ಜಾರಿಗೊಳಿಸುತ್ತಿರುವ ಮೇಕ್ ಇನ್ ಇಂಡಿಯಾ, ಸ್ವಚ್ಛ ಭಾರತ ಅಭಿಯಾನ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮ, ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆ-ಗ್ರಾಮೀಣ ಮತ್ತು ನಗರ, ಡಿಜಿಟಲ್ ಇಂಡಿಯಾ, ಕೌಶಲ ಭಾರತ ಸೇರಿ ವಿವಿಧ ಯೋಜನೆಗಳು ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಅನುಗುಣವಾಗಿವೆ ಎಂದರು.

ಇದೇ ವೇಳೆ ಸುಸ್ಥಿರ ಅಭಿವೃದ್ಧಿ ವರದಿ (ಎಸ್‌ಡಿಆರ್) ಬಿಡುಗಡೆ ಮಾಡಿದರು. ಜಿಂದಾಲ್ ವಿ.ವಿ. ಕುಲಪತಿ ಪ್ರೊ. ಸಿ.ರಾಜಕುಮಾರ್, ಆರ್.ವಿ.ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎ.ವಿ.ಎಸ್. ಮೂರ್ತಿ, ಅಮೆರಿಕ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ ವಿಲ್ಸನ್, ಜೆಜಿಯು ಡೀನ್ ಪ್ರೊ. ಪದ್ಮನಾಭ, ಜೆಎಸ್‌ಜಿಪಿ ಡೀನ್ ಪ್ರೊ. ಆರ್.ಸುದರ್ಶನ್ ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಗೆ 3 ಠಾಣೆ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಗೆ ಮತ್ತೆ ಮೂರು ಪೊಲೀಸ್ ಠಾಣೆಗಳು ಸೇರ್ಪಡೆಗೊಂಡಿದ್ದು, ಮಂಗಳವಾರದಿಂದಲೇ ನಗರ ವ್ಯಾಪ್ತಿಯಲ್ಲಿ ಕಾರ್ಯಾರಂಭ ಮಾಡಿವೆ.

ಬೆಂಗಳೂರು ನಗರ ಜಿಲ್ಲೆಯ ಆವಲಹಳ್ಳಿ, ಹೆಬ್ಬಗೋಡಿ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಕುಂಬಳಗೋಡು ಪೊಲೀಸ್ ಠಾಣೆಗಳು ಸೇರ್ಪಡೆ ಆಗಿವೆ.

ಇದುವರೆಗೂ ಆವಲಹಳ್ಳಿ, ಹೆಬ್ಬಗೋಡಿ ಹಾಗೂ ಕುಂಬಳಗೋಡು ಠಾಣೆಗಳಲ್ಲಿ ಆಯಾ ಜಿಲ್ಲಾಡಳಿತ ಹಾಗೂ ಎಸ್‌ಪಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮಂಗಳವಾರದಿಂದ ಕಮಿಷನರೇಟ್ ವ್ಯಾಪ್ತಿಗೆ ಒಳಪಟ್ಟಿವೆ. ಮೂರು ಠಾಣೆಗಳನ್ನು ಫೆಬ್ರುವರಿ 6ರಂದು ಸೇರ್ಪಡೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿತ್ತು. ಈ ಆದೇಶ ಮಂಗಳವಾರದಿಂದ ಜಾರಿಗೆ ಬಂದಿದೆ.

ಸಾರ್ವಜನಿಕರು ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಆವಲಹಳ್ಳಿ 080 28472500, 9480802473, ಹೆಬ್ಬಗೋಡಿ 080 27832922, 9480802451, ಕುಂಬಳಗೋಡು 080 28437599, 9480802854 ಸಂಪರ್ಕಿಸಬಹುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಯುವಕ ನೇಣಿಗೆ ಶರಣು

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕು ತೋಟದಗುಡದಹಳ್ಳಿಯಲ್ಲಿ ಬಿಹಾರದ ಯುವಕ ರಾಹುಲ್‌ಕುಮಾರ್(20) ಎಂಬಾತ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗಾರೆ ಕೆಲಸ ಮಾಡಿಕೊಂಡಿದ್ದ ರಾಹುಲ್, ತೋಟದಗುಡದ ಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಾದನಾಯಕನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಥೋತ್ಸವ

ಬೆಂಗಳೂರಿನ ಕೋಟೆ ಪ್ರಸನ್ನ ವೆಂಕಟರಮಣ ಸ್ವಾಮಿ ಬ್ರಹ್ಮ ರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ರಾಜೀವ್ ಗಾಂಧಿ ವಿ.ವಿ: ವ್ಯಸನ ಮುಕ್ತ ಕ್ಯಾಂಪಸ್ ಅಭಿಯಾನ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ 'ಮಾದಕ ವ್ಯಸನ ಮುಕ್ತ ಕ್ಯಾಂಪಸ್' ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದೇ ಗುರುವಾರ ಬೆಳಿಗ್ಗೆ 10.30ಕ್ಕೆ ಅರಮನೆ ಮೈದಾನದ ರಾಯಲ್ ಸೆನೆಟ್‌ನಲ್ಲಿ ಉದ್ಘಾಟನಾ ಸಮಾರಂಭ ಆಯೋಜಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಲಪತಿ ಡಾ. ಭಗವಾನ್ ಬಿ.ಸಿ., 'ಅಂತರರಾಷ್ಟ್ರೀಯ ಯೋಗ ದಿನ ಹಾಗೂ ರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನದ ಪೂರ್ವಭಾವಿಯಾಗಿ ಅಭಿಯಾನ ನಡೆಯಲಿದೆ ಎಂದರು.

ಮಾದಕ ವ್ಯಸನ ಬೆಂಗಳೂರಿನಲ್ಲಿ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ದೇಶದಲ್ಲಿ ಶೇ 30 ರಷ್ಟು ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಕ್ಯಾಂಪಸ್ ಅಭಿಯಾನ ಹಮ್ಮಿಕೊಂಡಿದ್ದೇವೆ' ಎಂದರು.

ರಸ್ತೆ ಗುಂಡಿ ಮುಚ್ಚಲು ತುಷಾರ್ ಸೂಚನೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿರುವ ಸುಮಾರು 1800 ರಸ್ತೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಸೂಚಿಸಿದರು.

ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ಮಳೆ ವಾತಾವರಣ ಇರುವುದರಿಂದ ಕೋಲ್ಡ್ ಮಿಕ್ಸ್ ಹಾಗೂ ಇಕೋ ಫಿಕ್ಸ್ ಬಳಸಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ರಸ್ತೆ ಗುಂಡಿಗಳನ್ನು ಮುಚ್ಚುವ ವರದಿಯನ್ನು ಪ್ರತಿ ನಿತ್ಯ ನೀಡಬೇಕು ಎಂದರು.

ಪಾಲಿಕೆ ವ್ಯಾಪ್ತಿಯಲ್ಲಿ ₹690 ಕೋಟಿ ವೆಚ್ಚದಲ್ಲಿ ರಸ್ತೆಗಳಿಗೆ ಡಾಂಬರೀಕರಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆಎಂದರು.

ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪ್ರವಾಹ ಉಂಟಾಗುವ ಪ್ರದೇಶಗಳು ಹಾಗೂ ರಸ್ತೆಗಳಿಗೆ ಆದ್ಯತೆ ನೀಡಿ, ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ತಿಳಿಸಿದರು.

ಬಡ ವಿದ್ಯಾರ್ಥಿಗಳಿಗೆ ಅನ್ಯಾಯ- ಸಂಘಟನೆಗಳಿಂದ ಸಿ.ಎಂ, ಸಚಿವರಿಗೆ ಮನವಿ

'ಘಟಕ ಕಾಲೇಜು ಪ್ರಸ್ತಾವ ಕೈಬಿಡಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಂ ನಾರಾಯಣ್ ಚೆಲ್ಲಾರಾಂ (ಆರ್.ಸಿ) ಸರ್ಕಾರಿ ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿ ಪರಿವರ್ತಿಸಬಾರದು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ವಿವಿಧ ಸಂಘಟನೆಗಳು ಮನವಿ ಸಲ್ಲಿಸಿವೆ.

'ನಗರದ ಪಾರಂಪರಿಕವಾದ ಈ ಎರಡು ಕಾಲೇಜುಗಳಲ್ಲಿ ಶುಲ್ಕವು ತೀರಾ ಕಡಿಮೆ. ಪ್ರಸಕ್ತ ಸಾಲಿನಲ್ಲಿ (2025–26) ಆರ್.ಸಿ. ಕಾಲೇಜಿನಲ್ಲಿ ಪ್ರಥಮ ವರ್ಷ ಪದವಿಗೆ (ಬಿ.ಕಾಂ) ಬಿ.ಬಿ.ಎ (ಸಾಮಾನ್ಯ) ಬಿ.ಬಿ.ಎ (ಏವಿಯೇಷನ್) ಪ್ರವೇಶ ಶುಲ್ಕ ಗಂಡು ಮಕ್ಕಳಿಗೆ ₹6,489, ಹೆಣ್ಣುಮಕ್ಕಳಿಗೆ ₹ 5,502 ನಿಗದಿಪಡಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿ ಪರಿವರ್ತಿಸಿದರೆ ಶುಲ್ಕ ಭಾರಿ ಏರಿಕೆ ಆಗಲಿದೆ.

ಇದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಆರ್ಥಿಕವಾಗಿ ತೀರಾ ಹಿಂದುಳಿದ ಮಕ್ಕಳು ವಿದ್ಯಾಭ್ಯಾಸ ಮುಂದುವರಿಸಲು ಕಷ್ಟ ಆಗಲಿದೆ' ಎಂದು ಮನವಿಯಲ್ಲಿ ವಿವರಿಸಲಾಗಿದೆ.

'ಮಲ್ಲೇಶ್ವರದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯ ಘಟಕ ಕಾಲೇಜಿನಲ್ಲಿ ಪ್ರಸಕ್ತ ವರ್ಷ ಬಿ.ಎ ಪದವಿ ಮೊದಲ ವರ್ಷಕ್ಕೆ ₹13,502, ಬಿ.ಕಾಂ (ಸಾಮಾನ್ಯ) ಪದವಿಗೆ ₹20,489, ಬಿಸಿಎ (ಸಾಮಾನ್ಯ) ₹31,721, ಬಿ.. ಬಿಎ (ಸಾಮಾನ್ಯ) ₹ 25,369 ಶುಲ್ಕ ನೀಡಬೇಕಿದೆ.

ಘಟಕ ಕಾಲೇಜು ಆಗಿ ಪರಿವರ್ತಿಸಿದರೆ ಶುಲ್ಕದಲ್ಲಿ ಹೆಚ್ಚಳ ಆಗುವುದರಿಂದ ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಲಿದೆ' ಎಂದು ರಾಜ್ಯ ದಲಿತ ಪದವೀಧರರ ಸಂಘ, ಸಮತಾ ಸೈನಿಕ ದಳ- ವಿದ್ಯಾರ್ಥಿ ಒಕ್ಕೂಟ, ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆಗಳು ಹೇಳಿವೆ.

'ವರ್ಗಾವಣೆಯಿಂದ ತಪ್ಪಿಸಿಕೊಳ್ಳಬಹುದು ಮತ್ತು ವಯೋ ನಿವೃತ್ತಿ 62 ವರ್ಷ ಆಗಲಿದೆ ಎಂಬ ಕಾರಣಕ್ಕೆ ಘಟಕ ಕಾಲೇಜು ಪರಿವರ್ತನೆಯ ಪ್ರಸ್ತಾವದ ಪರ 4–5 ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಅವರ ಬೇಡಿಕೆಗೆ ಸರ್ಕಾರ ಮಣಿದರೆ ಬಡ ವಿದ್ಯಾರ್ಥಿಗಳು ಕಡಿಮೆ ಶುಲ್ಕ ಪಾವತಿಸಿ ಉನ್ನತ ಶಿಕ್ಷಣ ಪಡೆಯಬಹುದಾದ ಅವಕಾಶದಿಂದ ವಂಚಿತರಾಗಲಿದ್ದಾರೆ.

ಹೀಗಾಗಿ, ಸರ್ಕಾರ ಯಾವುದೇ ಕಾರಣಕ್ಕೂ ಈ ಎರಡು ಕಾಲೇಜುಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸಬಾರದು' ಎಂದೂ ಸಂಘಟನೆಗಳು ಆಗ್ರಹಿಸಿವೆ.

ಸಿ.ಎಂಗೆ ಮಹದೇವಪ್ಪ ಪತ್ರ

ಮಹದೇವಪ್ಪ

ಬೆಂಗಳೂರು ನಗರದ ಸರ್ಕಾರಿ ಆರ್.ಸಿ. ಕಾಲೇಜು ಮತ್ತು ಸರ್ಕಾರಿ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿ ಪರಿವರ್ತಿಸುವ ಪ್ರಸ್ತಾವದ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಚಿವ ಎಚ್. ಸಿ. ಮಹದೇವಪ್ಪ ಪತ್ರ ಬರೆದಿದ್ದಾರೆ.
ಈ ಪ್ರಸ್ತಾವವನ್ನು ಕೈಬಿಡಬೇಕೆಂದು ವಿವಿಧ ಸಂಘಟನೆಗಳು ಸಲ್ಲಿಸಿರುವ ಮನವಿಯನ್ನು ಪರಿಗಣಿಸಬೇಕು ಎಂದೂ ಅವರು ಪತ್ರದಲ್ಲಿ ಕೋರಿದ್ದಾರೆ.

ವಿಗ್ರಹಗಳ ಪುನರ್ ಪ್ರತಿಷ್ಠಾಪನೆ ನಾಳೆ

ಕೆ.ಆರ್.ಪುರ: ಲಿಂಗರಾಜಪುರದ ಇತಿಹಾಸ ಪ್ರಸಿದ್ಧ ಶ್ರೀಸಂತಾನ ವೇಣುಗೋಪಾಲಸ್ವಾಮಿ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ಶ್ರೀಮುತ್ಯಾಲಮ್ಮದೇವಿಯ ನೂತನ ಶಿಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮವು ಮಹಾಕುಂಭಾಬಿಷೇಕದೊಂದಿಗೆ ಗುರುವಾರ ನಡೆಯಲಿದೆ.

ಗುರುವಾರ ಶ್ರೀಸಂತಾನ ವೇಣುಗೋಪಾಲಸ್ವಾಮಿ ಹಾಗೂ ಶ್ರೀಮುತ್ಯಾಲಮ್ಮದೇವಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮವು ನೇತ್ರೋನ್ಮಿಲನ, ಕಲಾವೃದ್ಧಿ ಹೋಮ, ಮಹಾಪೂರ್ಣಹುತಿ, ಮಹಾಕುಂಭಾಭಿಷೇಕದೊಂದಿಗೆ ನಡೆಯಲಿದೆ6

ಕಾರ್ಯಕ್ರಮಕ್ಕೆ ಶ್ರೀಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದಸ್ವಾಮೀಜಿ, ಹಾಸನ ಶಾಖಾಮಠದ ಶ್ರೀಶಂಭುನಾಥ ಸ್ವಾಮೀಜಿ, ಇಂಧನ ಸಚಿವ ಕೆ.ಜೆ.ಜಾರ್ಜ್, ಸಂಸದ ಪಿ.ಸಿ. ಮೋಹನ್ ಭಾಗವಹಿಸಲಿದ್ದಾರೆ ಎಂದು ದೇವಸ್ಥಾನದ ಟ್ರಸ್ಟಿ ಪಟೇಲ್ ರವಿ ತಿಳಿಸಿದರು.

ಚಿತ್ರಾವಳಿ

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರಸ್ವತಿ ಸಂಗೀತ ವಿದ್ಯಾಲಯದ 2025ನೇ ಸಾಲಿನ 'ಗೋವಿಂದ ಲಕ್ಷ್ಮೀ ಹಾಗೂ ಶಾಮಲಾ ಸ್ಮೃತಿ ಸಮ್ಮಾನ್' ವಾರ್ಷಿಕ ಪುರಸ್ಕಾರವನ್ನು ಸಿತಾರ್ ವಾದಕ ಎನ್. ವಿ. ಗೋಪಿನಾಥ್ ಹಾಗೂ ಪಿಟೀಲು ವಾದಕ ಕೆ. ಸಿ. ಜಯರಾಮ್ ಅವರಿಗೆ ಹೋಮಿಯೋಪತಿ ವೈದ್ಯ ಶ್ರೀಪಾದ ಹೆಗಡೆ ಅವರು ನೀಡಿ ಗೌರವಿಸಿದರು. ತಬಲಾ ವಾದಕ ಸತೀಶ್ ಹಂಪಿಹೊಳಿ, ಹಿಂದೂಸ್ತಾನಿ ಗಾಯಕ ವಾಗೀಶ್ ಭಟ್, ವಿದ್ಯಾಲಯದ ಅಧ್ಯಕ್ಷ ಕೆ. ಮೋಹನ್ ಉಪಸ್ಥಿತರಿದ್ದರು.

ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್. ಶಿವಣ್ಣ ಮಳವಳ್ಳಿ ಅವರು ಪ್ರತಿಭಾವಂತ ಬಡ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಭಾನುವಾರ ಲ್ಯಾಪ್‌ಟಾಪ್ ವಿತರಿಸಿದರು ಪ್ರಜಾವಾಣಿ ಚಿತ್ರ

ಜಲಮಂಡಳಿ: ನೀರು ಮತ್ತು ಒಳಚರಂಡಿ ಸಂಪರ್ಕ ಪರಿವೀಕ್ಷಣೆ ● ₹5 ಸಾವಿರ ದಂಡ ವಿಧಿಸಲು ನಿರ್ಧಾರ

ಅಕ್ರಮ ಸಂಪರ್ಕ ತಡೆಗೆ 'ನೀಲಿ ಕಾರ್ಯಪಡೆ'

● ಗಾಣಧಾಳು ಶ್ರೀಕಂಠ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ಪಡೆದಿರುವ ಒಳಚರಂಡಿ ಮತ್ತು ಕಾವೇರಿ ನೀರಿನ ಸಂಪರ್ಕ ಪತ್ತೆಗಾಗಿ ಬೆಂಗಳೂರು ಜಲಮಂಡಳಿ, ನಾಲ್ವರು ಸದಸ್ಯರನ್ನೊಳಗೊಂಡ ವಿಶೇಷ ಕಾರ್ಯಪಡೆಯೊಂದನ್ನು ರಚಿಸಲು ಮುಂದಾಗಿದೆ.

'ನೀಲಿ ಪಡೆ (ಬ್ಲ್ಯೂ ಫೋರ್ಸ್)' ಹೆಸರಿನ ವಿಶೇಷ ತಂಡವನ್ನು ಜಲ ಮಂಡಳಿಯ 43 ಉಪವಿಭಾಗಗಳಲ್ಲೂ ನಿಯೋಜಿಸಲಾಗುತ್ತದೆ. ಈ ತಂಡ ಆಯಾ ಉಪವಿಭಾಗದಲ್ಲಿ ಕಾರ್ಯಾಚರಣೆ ನಡೆಸಿ ಅಕ್ರಮ ಸಂಪರ್ಕವನ್ನು ಪತ್ತೆ ಹಚ್ಚಿ, ತಪ್ಪಿತಸ್ಥರಿಗೆ ₹5 ಸಾವಿರ ದಂಡ ವಿಧಿಸಲಿದೆ. ಆ ಮೂಲಕ ಜಲಮಂಡಳಿಗೆ ಆಗುತ್ತಿರುವ ನಷ್ಟವನ್ನು ತಪ್ಪಿಸಲಿದೆ.

'ಹದಿನೈದು ದಿನಗಳಲ್ಲಿ ಕಾರ್ಯಪಡೆ ರಚನೆಯಾಗಿ, ಅಧಿಕೃತವಾಗಿ ಕೆಲಸ ಆರಂಭವಾಗುವ ನಿರೀಕ್ಷೆ ಇದೆ' ಎಂದು ಜಲಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಪಾರ್ಟ್‌ಮೆಂಟ್‌ನ ಒಳಚರಂಡಿ ಸಂಪರ್ಕವನ್ನು ಕಾವೇರಿ ಕೊಳವೆಗೆ ಜೋಡಿಸಿದ್ದ ಸ್ಥಳ

ಪ್ರತಿ ಕಾರ್ಯಪಡೆಯಲ್ಲಿ ಒಬ್ಬರು ಮಾಜಿ ಸೈನಿಕ ಅಥವಾ ನಿವೃತ್ತ ಪೊಲೀಸ್ ಅಧಿಕಾರಿಯ ಜೊತೆಗೆ ಜಲ ಮಂಡಳಿಯ ಮೂವರು ಸಿಬ್ಬಂದಿ(ಲೀಕ್ ಗ್ಯಾಂಗ್) ಇರುತ್ತಾರೆ. ತಂಡಕ್ಕೊಂದು ಪ್ರತ್ಯೇಕ ವಾಹನವಿರುತ್ತದೆ. ಈ ತಂಡ ಉಪವಲಯಗಳಲ್ಲಿ ನಿರಂತರವಾಗಿ ತಪಾಸಣೆ ನಡೆಸಿ ಅನಧಿಕೃತ ನೀರಿನ ಸಂಪರ್ಕ ಮತ್ತು ಒಳಚರಂಡಿ ಸಂಪರ್ಕಗಳನ್ನು ಪತ್ತೆ ಹಚ್ಚಲಿದೆ. ಅಲ್ಲದೆ ಮನೆ ಮೇಲೆ ಸುರಿಯುವ ಮಳೆ ನೀರಿನ ಸಂಪರ್ಕವನ್ನು ಒಳಚರಂಡಿಗೆ ನೀಡಿರುವಂತಹ ಪ್ರಕರಣಗಳನ್ನು ಪತ್ತೆ ಮಾಡಿ ದಂಡ ವಿಧಿಸಲಿದೆ.

'ನಗರದಾದ್ಯಂತ 11 ಲಕ್ಷಕ್ಕೂ ಹೆಚ್ಚು ಅಧಿಕೃತವಾದ ಕಾವೇರಿ ನೀರಿನ ಸಂಪರ್ಕಗಳಿವೆ. ಪ್ರತಿ ನಿತ್ಯ 2,225 ದಶಲಕ್ಷ ಲೀಟರ್ ಕಾವೇರಿ ನೀರು ನಗರಕ್ಕೆ ಪೂರೈಕೆಯಾಗುತ್ತಿದೆ. ಹೊಸದಾಗಿ ಬಿಬಿಎಂಪಿಗೆ ಸೇರ್ಪಡೆಗೊಂಡ 110 ಹಳ್ಳಿಗಳ ವ್ಯಾಪ್ತಿಯ ಅನೇಕ ಮನೆಗಳಿಗೆ ಒಳಚರಂಡಿ ಸಂಪರ್ಕವಿರುತ್ತದೆ. ಆದರೆ ಕಾವೇರಿ ನೀರಿನ ಸಂಪರ್ಕ ಪಡೆದಿರುವುದಿಲ್ಲ. ಸಿಎಂಸಿಯ ಕೊಳವೆಬಾವಿಯಿಂದ ಉಚಿತ ನೀರು ಪಡೆಯುತ್ತಾರೆ. ಕಾರ್ಯಪಡೆ ಇಂಥ ಮನೆಗಳನ್ನು ಪತ್ತೆ ಹಚ್ಚಿ ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಿ, ದಂಡ ವಿಧಿಸಲಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಪ್ರತಿ ಕಾರ್ಯಪಡೆಗೆ ₹2 ಲಕ್ಷ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಸದ್ಯ ಇದು ಪ್ರಸ್ತಾವದ ಹಂತದಲ್ಲಿದ್ದು, ಮಂಡಳಿಯಿಂದ ಒಪ್ಪಿಗೆ ಸಿಕ್ಕ ನಂತರ ವಿಶೇಷ ಪಡೆ ಕಾರ್ಯಾರಂಭ ಮಾಡಲಿದೆ' ಎಂದು ಜಲಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

11,877 ಮನೆಗಳಿಗೆ ನೋಟಿಸ್

ಜಲಮಂಡಳಿ ಪ್ರಸ್ತುತ 3.15 ಲಕ್ಷ ಮನೆಗಳ ಸಮೀಕ್ಷೆ ಮಾಡಿದೆ. ಇದರಲ್ಲಿ ಅನಧಿಕೃತವಾಗಿ ಮಳೆ ನೀರಿನ ಸಂಪರ್ಕವನ್ನು ಒಳಚರಂಡಿಗೆ ನೀಡಿರುವ 16,445 ಪ್ರಕರಣಗಳನ್ನು ಪತ್ತೆ ಮಾಡಿದೆ. ಇದರಲ್ಲಿ 11,877 ಮನೆಗಳಿಗೆ ನೋಟಿಸ್ ನೀಡಲಾಗಿದೆ. 8,902 ಮನೆಗಳ ಅಕ್ರಮ ಸಂಪರ್ಕಗಳನ್ನು ಸ್ಥಗಿತಗೊಳಿಸಲಾಗಿದೆ' ಎಂದು ಜಲಮಂಡಳಿ ತಿಳಿಸಿದೆ.

'ಜೂ.15ರ ನಂತರ ಕಾರ್ಯಪಡೆ ಆರಂಭ'

'ಅಕ್ರಮ ನೀರು ಮತ್ತು ಒಳಚರಂಡಿ ಸಂಪರ್ಕ ಪತ್ತೆಗೆ ರಚಿಸಲಿರುವ ನೀಲಿ ಕಾರ್ಯಪಡೆ ಜೂ.15ರಿಂದ ಕೆಲಸ ಆರಂಭಿಸಲಿದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ 'ಪ್ರಜಾವಾಣಿ'ಗೆ ತಿಳಿಸಿದರು.

ರಾಮ್‌ಪ್ರಸಾತ್ ಮನೋಹರ್

'ಅಕ್ರಮವಾಗಿ ಒಳಚರಂಡಿ ಸಂಪರ್ಕ ಪಡೆದಿರುವವರು ಜೂನ್ 15ರೊಳಗೆ ಸಕ್ರಮಗೊಳಿಸಿಕೊಳ್ಳಬೇಕು. ಕಾರ್ಯಪಡೆಯ ತಪಾಸಣೆ ವೇಳೆ ಅಕ್ರಮ ಕಂಡು ಬಂದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅವರು ತಿಳಿಸಿದರು.

'ಈಗಾಗಲೇ ಸಮೀಕ್ಷೆ ನಡೆದು, ವರದಿಗಳು ಬರುತ್ತಿವೆ. ಕೃತಕ ಬುದ್ಧಿಮತ್ತೆ ಬಳಸಿಕೊಂಡು ಸಮೀಕ್ಷೆ ನಡೆಸಿದ್ದೇವೆ. ಇದರಿಂದ ಅಕ್ರಮವಾಗಿ ಪಡೆದಿರುವ ಒಳಚರಂಡಿ ಸಂಪರ್ಕಗಳ ದತ್ತಾಂಶ ಲಭ್ಯವಾಗುತ್ತದೆ. ಜೂ.15ರವರೆಗೆ ದಂಡವಷ್ಟೇ ಹಾಕಲಾಗುತ್ತದೆ. ಆ ನಂತರ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುತ್ತದೆ' ಎಂದು ಅವರು ಎಚ್ಚರಿಸಿದರು.

ಪರಿಶಿಷ್ಟ ಜಾತಿ ಸಮೀಕ್ಷೆ ವಿಶೇಷ ಶಿಬಿರದ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಗಟ್ಟೆ ಮಟ್ಟದಲ್ಲಿ ನಡೆಸಲಾಗುತ್ತಿರುವ ವಿಶೇಷ ಶಿಬಿರದ ಮಾಹಿತಿಯನ್ನು ಲಿಂಕ್ (https://bbmp.gov.in/castsurvey/) ಮೂಲಕ ಪಡೆದುಕೊಳ್ಳಬಹುದು ಎಂದು ಬಿಬಿಎಂಪಿ ತಿಳಿಸಿದೆ.

ಪರಿಶಿಷ್ಟ ಜಾತಿಗಳ ಸಮೀಕ್ಷಾ ಕಾರ್ಯವನ್ನು ಜೂನ್ 8ರವರೆಗೆ ವಿಸ್ತರಿಸಲಾಗಿದ್ದು, ವಿಶೇಷ ಶಿಬಿರ ಹಾಗೂ ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳಬಹುದಾಗಿದೆ ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ವಿಶೇಷ ಶಿಬಿರದಲ್ಲಿ ಸಮೀಕ್ಷೆಗೆ ಹೋಗುವವರು ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ತೆಗೆದುಕೊಂಡು ಹೋಗುವುದು ಕಡ್ಡಾಯ. ಸ್ವಯಂ ಘೋಷಣೆಯ ಮೂಲಕ ಆನ್‌ಲೈನ್ (https://schedulecastesurvey.karnataka.gov.in/selfdeclaration/) ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. 20 ನಿಮಿಷದಲ್ಲಿ ನೀಡುವ ಮಾಹಿತಿಯಿಂದ ಸರ್ಕಾರಕ್ಕೆ ಒಳ ಮೀಸಲಾತಿ ವರ್ಗೀಕರಣ ಸೌಲಭ್ಯ ಒದಗಿಸಲು ತುಂಬಾ ಸಹಾಯಕವಾಗಲಿದೆ ಎಂದರು.

'ಮುಂದಿನ ಪೀಳಿಗೆ ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗದಿರಲು ಸಮೀಕ್ಷೆಯು ಅಗತ್ಯ. ನ್ಯಾಯಯುತ ಮೀಸಲಾತಿ ಹಂಚಿಕೆಗಾಗಿ ಸಮೀಕ್ಷಾದಾರರಿಗೆ ಪರಿಶಿಷ್ಟ ಜಾತಿಗೆ ಸೇರಿದವರು ಮೂಲ ಜಾತಿ, ಶಿಕ್ಷಣ, ವರಮಾನ, ಉದ್ಯೋಗ ಮತ್ತು ಇನ್ನಿತರ ನಿಖರ ಮಾಹಿತಿ ನೀಡುವುದು ಆದ್ಯ ಕರ್ತವ್ಯ. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಲು ಪರಿಶಿಷ್ಟ ಜಾತಿಗಳಲ್ಲಿ ಆಂತರಿಕ ಮೀಸಲಾತಿಯ ಬೇಡಿಕೆಗಳನ್ನು ಪರಿಹರಿಸಲು ಸಮೀಕ್ಷೆಯಲ್ಲಿ ಭಾಗವಹಿಸಬೇಕು' ಎಂದು ತಿಳಿಸಿದರು.

ಹೇಮಾವತಿ ನಾಲೆ: ಸಿ.ಎಂ.ಗೆ ಸೋಮಣ್ಣ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೇಮಾವತಿ ಸಂಪರ್ಕ ನಾಲೆ ನಿರ್ಮಾಣ ವಿವಾದದ ಸ್ವರೂಪ ಪಡೆದಿದ್ದು, ಈ ಕುರಿತು ಚರ್ಚಿಸಲು ಯೋಜನಾ ವ್ಯಾಪ್ತಿಯ ಜನಪ್ರತಿನಿಧಿಗಳ ಸಭೆ ಕರೆಯಬೇಕು ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ವಿ. ಸೋಮಣ್ಣ

ಯೋಜನೆಯಿಂದ ರೈತರಿಗೆ ಅನ್ಯಾಯವಾಗಿದೆ. ಕಾಮಗಾರಿಯನ್ನು ನಿಲ್ಲಿಸುವಂತೆ ಒತ್ತಡ ಬಂದರೂ ಸರ್ಕಾರ ಸ್ಪಂದಿಸಿಲ್ಲ. ತುಮಕೂರಿನಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿದೆ. ನ್ಯಾಯಯುತವಾಗಿ ತಮ್ಮ ಪಾಲಿನ ನೀರು ಉಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟವನ್ನು ಹತ್ತಿಕ್ಕಲಾಗುತ್ತಿದೆ. ಪ್ರಕರಣ ದಾಖಲಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತುಮಕೂರು ಭಾಗದ ಜನರ ಹಿತದೃಷ್ಟಿಯಿಂದ ಯೋಜನೆಯ ತಾಂತ್ರಿಕ ಅಂಶಗಳ ಕುರಿತು ಚರ್ಚೆ ನಡೆಸಬೇಕು. ಯೋಜನಾ ವ್ಯಾಪ್ತಿಯ ಮಠಾಧೀಶರು, ರೈತರು ಹಾಗೂ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು. ತಾಂತ್ರಿಕ ತಜ್ಞರು, ಯೋಜನೆ ಕಾರ್ಯ ಅನುಷ್ಠಾನಕ್ಕೆ ಒಪ್ಪಿಗೆ ನೀಡಿದ ಅಧಿಕಾರಿಗಳನ್ನು ಕರೆಸಬೇಕು. ಹೋರಾಟಗಾರರ ಮೇಲೆ ದಾಖಲಿಸಿರುವ ಪ್ರಕರಣ ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

'ಕುಣಿಗಲ್‌ಗೆ ಅನ್ಯಾಯವಾಗಲು ಬಿಡಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಣಿಗಲ್ ತಾಲ್ಲೂಕಿನ ಪಾಲಿನ ಹೇಮಾವತಿ ನೀರನ್ನು ಕೊಂಡೊಯ್ಯಲು ಲಿಂಕ್ ಕೆನಾಲ್ ಯೋಜನೆ ರೂಪಿಸಲಾಗಿದೆ. ಇದರಿಂದ ಬೇರೆ ತಾಲ್ಲೂಕುಗಳಿಗೆ ಅನ್ಯಾಯ ಆಗುವುದಿಲ್ಲ. ಕೆಲವರು ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಯೋಜನೆಗೆ ವಿರೋಧ ಮಾಡುತ್ತಿದ್ದಾರೆ' ಎಂದು ಕುಣಿಗಲ್ ಶಾಸಕ ಎಚ್.ಡಿ. ರಂಗನಾಥ್ ಹೇಳಿದರು.

ಬಸವೇಶ್ವರನಗರದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ರಂಗನಾಥ್, 'ತುಮಕೂರಿನ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಹೇಮಾವತಿ ಲಿಂಕ್ ಕೆನಾಲ್ ಯೋಜನೆ ವಿಚಾರವಾಗಿ ರೈತರನ್ನು ದಾರಿ ತಪ್ಪಿಸುತ್ತಿದ್ದಾರೆ' ಎಂದರು.

'ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆಗೆ ಸೇರಿಲ್ಲವೇ? ಇಲ್ಲಿನ ರೈತರೂ ಬದುಕಬಾರದೇ ಎಂಬ ಪ್ರಶ್ನೆಯನ್ನು ತುಮಕೂರಿನ ರೈತರು ಹಾಗೂ ಸಂಘಟನೆ ನಾಯಕರಿಗೆ ಕೇಳುತ್ತೇನೆ. ನಮಗೆ ನೀರು ಕೊಡಲು ಇಷ್ಟವಿಲ್ಲದಿದ್ದರೆ ಅದನ್ನು ನೇರವಾಗಿ ಹೇಳಿ. ಮುಂದೆ ನೀರು ಕೊಡುತ್ತೇವೆ ಎಂದು ಹೇಳಿ ಆನಂತರ ಅಡ್ಡಿ ಮಾಡುವುದು ಬೇಡ' ಎಂದರು.

'ನಾನು ಪ್ರೀತಿಗೆ ತಲೆಬಾಗುತ್ತೇನೆಯೇ ಹೊರತು ಗೊಡ್ಡು ಬೆದರಿಕೆಗಳಿಗಲ್ಲ. ಹೋರಾಟದಲ್ಲಿ ಭಾಗವಹಿಸಿದ ಸ್ವಾಮೀಜಿಗಳ ಮಠಕ್ಕೆ ಹೋಗಿ ಎಲ್ಲ ವಿಚಾರಗಳನ್ನು ವಿವರಿಸುತ್ತೇನೆ' ಎಂದರು.

ರೈತರ ಪರವಾಗಿ ನಿಲ್ಲಿ: ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಗುಬ್ಬಿ (ತುಮಕೂರು): ಕಾಂಗ್ರೆಸ್ ನಾಯಕರು ಅಧಿಕಾರದ ಅಮಲಿನಿಂದ ಹೊರ ಬಂದು ರೈತರ ಪರವಾಗಿ ನಿಲ್ಲಬೇಕು. ಹೇಮಾವತಿ ಲಿಂಕ್ ಕೆನಾಲ್ ಯೋಜನೆ ಸ್ಥಗಿತಗೊಳಿಸಬೇಕು ಎಂದು ಬಿಜೆಪಿ ರಾಜ್ಯ ನಾಯಕರು ಒತ್ತಾಯಿಸಿದರು.

ತಾಲ್ಲೂಕಿನ ಸುಂಕಾಪುರ ಸಮೀಪ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಮಂಗಳವಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪರಿಷತ್ ಸದಸ್ಯ ಸಿ.ಟಿ.ರವಿ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲಿಸಿತು.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿಜಯೇಂದ್ರ, 'ರಾಜ್ಯ ಸರ್ಕಾರ ಈ ಭಾಗದ ರೈತರ ಹಕ್ಕು ಕಿತ್ತುಕೊಳ್ಳಲು ಹೊರಟಿದೆ. ಹೋರಾಟ ಹತ್ತಿಕ್ಕಲು ಮುಂದಾಗಿದೆ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಠಾಧೀಶರನ್ನು ಬಂಧಿಸುತ್ತಿದೆ. ರೈತರ ಹೋರಾಟವನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳದೆ ಸರ್ವಪಕ್ಷಗಳ ಸಭೆ ಕರೆದು, ಅಭಿಪ್ರಾಯ ಪಡೆದು ನಿರ್ಧಾರ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಜಾಗ ಬದಲು; ಸಚಿವ ಸಂಪುಟದಲ್ಲಿ ನಿರ್ಧಾರ

ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಭೂಮಿ ಪರಿಶೀಲಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿರುವ ಭೂಮಿಯನ್ನು ಸಮಾಜ ಕಲ್ಯಾಣ ಇಲಾಖೆಯ ಭೂಮಿಯೊಂದಿಗೆ ಬದಲಾಯಿಸಿಕೊಳ್ಳುವ ಸಂಬಂಧ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುಮನಹಳ್ಳಿ ಮಾಗಡಿ ರಸ್ತೆಯಲ್ಲಿರುವ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಜಮೀನು, ಕೆಂಪೇಗೌಡ ಜಯಂತಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿರುವ ಡಾ. ಬಾಬೂ ಜಗಜೀವನ್ ರಾಂ ಸಂಶೋಧನಾ ಸಂಸ್ಥೆಯ ಸಭಾಂಗಣವನ್ನು ಮಂಗಳವಾರ ಪರಿಶೀಲಿಸಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರಾಧಿಕಾರಕ್ಕೆ ಮಂಜೂರಾಗಿರುವ ಜಾಗವನ್ನು ಸಮಾಜ ಕಲ್ಯಾಣ ಇಲಾಖೆ ಜಾಗದ ಜೊತೆ ಬದಲಾಯಿಸಿಕೊಂಡರೆ, ಮತ್ತೊಂದು ಸಭಾಂಗಣ ನಿರ್ಮಾಣ ಮಾಡುವ ಅಗತ್ಯ ಇರುವುದಿಲ್ಲ ಎಂದು ಸ್ಥಳೀಯ ನಾಯಕರು ಸಲಹೆ ನೀಡಿದರು. ಮುಂದೆ ಮೆಟ್ರೊ ಮಾರ್ಗ ಇಲ್ಲೇ ಬರಲಿದ್ದು, ನಿಲ್ದಾಣವನ್ನೂ ನಿರ್ಮಿಸಲಾಗುತ್ತದೆ. ಹೀಗಾಗಿ, ಜಾಗ ಬದಲಿಸುವ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗುತ್ತದೆ' ಎಂದು ಅವರು ತಿಳಿಸಿದರು.

'ಈ ವರ್ಷ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಡಾ. ಬಾಬೂ ಜಗಜೀವನ್ ರಾಂ ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ನಡೆಸಲು ತೀರ್ಮಾನಿಸಿದ್ದೇವೆ. ಸಮೀಪದಲ್ಲೇ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಜಮೀನು ನಿಗದಿ ಮಾಡಲಾಗಿದೆ. ಆ ಜಾಗದಲ್ಲಿ ಜೂನ್ 27ರಂದು ಶಂಕುಸ್ಥಾಪನೆ ಮಾಡಿ, ನಂತರ ಕೆಂಪೇಗೌಡ ಜಯಂತಿ ಆಚರಿಸಲಾಗುತ್ತದೆ. ಕೆಂಪೇಗೌಡರ ಇತಿಹಾಸ ಸಾರುವ ವಸ್ತು ಪ್ರದರ್ಶನ ಕೇಂದ್ರವನ್ನೂ ನಿರ್ಮಾಣ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ಈ ಜಾಗ ದೂರ ಆಗಲಿಲ್ಲವೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಬೆಂಗಳೂರು ಬೆಳೆದಿದೆ ಏನು ಮಾಡುತ್ತೀರಿ? ಬೇರೆ ಎಲ್ಲಿ ಜಾಗ ನೀಡುತ್ತೀರಿ? ಗಾಲ್ಫ್ ಕೋರ್ಸ್, ಕಬ್ಬನ್ ಪಾರ್ಕ್, ರೇಸ್ ಕೋರ್ಸ್ ಬಿಡಲು ಯಾರೂ ಸಿದ್ಧರಿಲ್ಲ. ಮತ್ತೆ ಬೇರೆ ಎಲ್ಲಿ ಜಾಗ ಇದೆ? ಮಂತ್ರಿಗಳ ಮನೆ, ನ್ಯಾಯಾಧೀಶರಿಗೆ ಹೊಸ ಮನೆ, ಬೆಂಗಳೂರು ಮಧ್ಯಭಾಗದಲ್ಲಿ ಜಾಗ ಇಲ್ಲ. ಹೀಗಾಗಿ ಇಲ್ಲಿ ಜಾಗ ನೀಡಿದ್ದೇವೆ' ಎಂದು ತಿಳಿಸಿದರು.

ಸ್ಕೈಡೆಕ್: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಸುಮಾರು 25 ಎಕರೆ ಪ್ರದೇಶದಲ್ಲಿ ಸ್ಕೈಡೆಕ್ ನಿರ್ಮಾಣ ಮಾಡುವ ಸ್ಥಳವನ್ನೂ ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು. ಬಿಡಿಎ ಅಧಿಕಾರಿಗಳು ನಕ್ಷೆಯೊಂದಿಗೆ ಸ್ಥಳದ ಮಾಹಿತಿ ನೀಡಿದರು.

ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಹಾಗೂ ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆ ನಡುವೆ ಬಿಡಿಎ ನಿರ್ಮಿಸುತ್ತಿರುವ 'ಪ್ರಮುಖ ರಸ್ತೆ'ಗೂ ಸಂಪರ್ಕಿಸುವ ಸ್ಥಳದಲ್ಲಿ ಸ್ಕೈಡೆಕ್ ನಿರ್ಮಾಣವಾಗಲಿದೆ. ಈ ಸ್ಥಳದಲ್ಲಿ ನಿವೇಶನವನ್ನು ಈಗಾಗಲೇ ಗುರುತು ಮಾಡಲಾಗಿದೆ. ಅದನ್ನು ಬದಲಿಸಿ, ಸ್ಕೈಡೆಕ್‌ಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ತೊಂದರೆ ನೀಡುವವರ ವಿರುದ್ಧ ಕ್ರಮಕ್ಕೆ ಸೂಚನೆ

ವಿದ್ಯಾರಣ್ಯಪುರ ಶಾರದಾ ವಿದ್ಯಾನಿಕೇತನ ಶಾಲೆಗೆ ಅತಿಕ್ರಮ ಪ್ರವೇಶ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರಣ್ಯಪುರದ ಶ್ರೀ ಶಾರದಾ ವಿದ್ಯಾನಿಕೇತನ ಶಾಲೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರಿಗೆ ತೊಂದರೆ ನೀಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿ ಹಾಗೂ ಬೆಂಗಳೂರು ಉತ್ತರ ಡಿಡಿಪಿಐಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚನೆ ನೀಡಿದರು.

ಡಿ ಕೆ ಶಿವಕುಮಾರ್ ಅವರನ್ನು ಶ್ರೀ ಶಾರದಾ ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಮಂಗಳವಾರ ಭೇಟಿ ಮಾಡಿದರು

ಸದಾಶಿವನಗರ ನಿವಾಸದಲ್ಲಿ ಶಿವಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿದ ಶಾಲೆಯ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು, 'ಧನಂಜಯ ಎಂಬುವರು ಅಕ್ರಮವಾಗಿ ಶಾಲೆಯನ್ನು ಕಬ್ಜ ಮಾಡಿಕೊಂಡು ಗೂಂಡಾಗಳ ನೆರವಿನಿಂದ ಶಾಲೆ ಆವರಣದಿಂದ ತಮ್ಮನ್ನು ಹೊರಗೆ ಹಾಕಿದ್ದಾರೆ' ಎಂದು ದೂರಿದರು.

'ಧನಂಜಯ 2022ರ ಏಪ್ರಿಲ್ ತಿಂಗಳಿಂದ ತೊಂದರೆ ನೀಡುತ್ತಿದ್ದಾರೆ. ಇತ್ತೀಚೆಗೆ ಸುಮಾರು 50-60 ಜನರನ್ನು ಕರೆತಂದು ದಬ್ಬಾಳಿಕೆ ನಡೆಸಿದ್ದಾರೆ. ಶಾಲೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ನಾಶ ಮಾಡಿ, ವೈಫೈ ಸಂಪರ್ಕ ಕಿತ್ತುಹಾಕಿದರು. ನಂತರ ಪೊಲೀಸರು ನಮಗೆ ರಕ್ಷಣೆ ನೀಡಿದರು. ಮೇ 29ರಂದು ಮತ್ತೆ ಬಂದು ದಾಳಿ ಮಾಡಿ ಶಾಲೆಯ ಆಸ್ತಿ ನಾಶ ಮಾಡಿದ್ದಾರೆ' ಎಂದೂ ವಿವರಿಸಿದರು.

ಉತ್ತರ ಡಿಡಿಪಿಐ ಅವರಿಗೆ ಕರೆ ಮಾಡಿದ ಶಿವಕುಮಾರ್, 'ನಿಮ್ಮ ವ್ಯಾಪ್ತಿಯಲ್ಲಿ ಧನಂಜಯ ಎಂಬಾತ ಶಾರದಾ ವಿದ್ಯಾನಿಕೇತನ್ ಶಾಲೆ ಮೇಲೆ ದಾಳಿ ಮಾಡುತ್ತಿದ್ದಾನೆ. ನೀವು ಏನು ಮಾಡುತ್ತಿದ್ದೀರಿ? ನಿಮ್ಮ ಗಮನಕ್ಕೆ ಬಂದಿಲ್ಲವೆಂದರೆ ಹೇಗೆ? ತಕ್ಷಣವೇ ಅಲ್ಲಿಗೆ ಹೋಗಿ ಸಮಸ್ಯೆ ಬಗೆಹರಿಸಿ. ರಿಯಲ್ ಎಸ್ಟೇಟ್ ವ್ಯವಹಾರಕ್ಕಾಗಿ ಶಾಲೆಗೆ ಈ ರೀತಿ ಕಿರುಕುಳ ನೀಡುವುದು ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ವರದಿ ನೀಡಬೇಕು. ತೊಂದರೆ ನೀಡುತ್ತಿರುವವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

'ತೊಂದರೆ ನೀಡುತ್ತಿರುವವರು ಕಾಂಗ್ರೆಸ್ ಪಕ್ಷದವರಾದರೂ ಸೂಕ್ತ ಕ್ರಮ ಕೈಗೊಳ್ಳಿ. ಬಿಇಒ ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ ಅಮಾನತು ಮಾಡಿ' ಎಂದು ನಿರ್ದೇಶನ ನೀಡಿದರು.

ಆರ್‌.ಆರ್‌. ನಗರ: ಜನಪ್ರತಿನಿಧಿಗಳು, ಅಧಿಕಾರಿಗಳ ನಿರ್ಲಕ್ಷ್ಯ

ಕೃಷ್ಣಪ್ಪ ಲೇಔಟ್ ಅವ್ಯವಸ್ಥೆಯ ಆಗರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮೊಳದುದ್ದದ ಗುಂಡಿಗಳು, ಮಳೆ ಬಂದಾಗ ಗುಂಡಿಗಳಲ್ಲಿ ನೀರು ತುಂಬಿಕೊಂಡು ರಸ್ತೆ ಕಾಣದೇ ಬೀಳುವ ಬೈಕ್ ಸವಾರರು, ಚರಂಡಿ ನೀರು ಸಹಿತ ಮನೆಗೆ ನುಗ್ಗುವ ಮಳೆ ನೀರು, ಬಡಾವಣೆಯ ಅಲ್ಲಲ್ಲಿ ಕಸದ ರಾಶಿ..

ಇದು ಆರ್.ಆರ್.ನಗರ ವಾರ್ಡ್‌ನ ಕೃಷ್ಣಪ್ಪ ಬಡಾವಣೆಯ ಸದ್ಯದ ಸ್ಥಿತಿ.

ಕೃಷ್ಣಪ್ಪ ಲೇಔಟ್‌ನ ಪ್ರಮುಖ ರಸ್ತೆ(ಆರ್.ಆರ್. ನಗರದಿಂದ ಪದ್ಮನಾಭನಗರ ಜಯನಗರಕ್ಕೆ ಸಂಪರ್ಕಿಸುವ ಪ್ರಮುಖ ರಸ್ತೆ) ಗುಂಡಿಗಳಿಂದ ತುಂಬಿದೆ. ಮಳೆ ಬಂದಾಗ ಈ ರಸ್ತೆಯ ಮೇಲೆ ಹರಿಯುವ ನೀರು ಪಕ್ಕದ ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನುಗ್ಗುವುದರಿಂದ ನಿವಾಸಿಗಳು ನರಕಯಾತನೆ ಅನುಭವಿಸಬೇಕಾಗಿದೆ' ಎಂದು ಸ್ಥಳೀಯರು ಬೇಸರದಿಂದ ನುಡಿಯುತ್ತಾರೆ.

ಪಾದಚಾರಿ ಮಾರ್ಗ ಕಿತ್ತುಹೋಗಿದೆ

'ಬಡಾವಣೆಯ ಮುಖ್ಯರಸ್ತೆ ಹಾಗೂ ಅಡ್ಡ ರಸ್ತೆಗಳ ಬದಿಯಲ್ಲಿನ ಚರಂಡಿಗೆ ಕಸಕಡ್ಡಿ, ಪ್ಲಾಸ್ಟಿಕ್ ಬಾಟಲ್‌ಗಳನ್ನು ತುಂಬುತ್ತಾರೆ. ಮಳೆಗಾಲದಲ್ಲಿ ಚರಂಡಿಯಲ್ಲಿ ಮಳೆ ನೀರು ಹರಿಯದೇ, ರಸ್ತೆ ಮೇಲೆ ಹರಿಯುತ್ತದೆ. ಚರಂಡಿ ಯಾವುದು, ರಸ್ತೆ ಯಾವುದು ಎಂದು ಗೊತ್ತಾಗುವುದಿಲ್ಲ' ಎಂದು ಸ್ಥಳೀಯ ನಿವಾಸಿ ರಾಧ ಅವರು ಹೇಳಿದರು.

'ಪಾದಚಾರಿ ಮಾರ್ಗ ಕಿತ್ತುಹೋಗಿದೆ. ಚರಂಡಿ, ಮೋರಿಯ ಮೇಲಿನ ಕಲ್ಲುಗಳು ಒಡೆದುಹೋಗಿವೆ. ಮಳೆ ಬಂದಾಗ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿಯುತ್ತವೆ. ರಸ್ತೆ ಕೊಳಚೆನೀರಿನ ಹೊಳೆಯಾಗುತ್ತದೆ. ವಾಹನ ಸವಾರರು, ಪಾದಚಾರಿಗಳು ರಸ್ತೆಯಲ್ಲಿ ನಡೆಯುವುದು ದುಸ್ತರವಾಗಿದೆ' ಎಂದು ನಾಗರೀಕರು ದೂರುತ್ತಾರೆ.

'ಬಡಾವಣೆಯಲ್ಲಿ ಇಷ್ಟೆಲ್ಲ ಸಮಸ್ಯೆಗಳಿದ್ದರೂ ಒಮ್ಮೆಯೂ ಅಧಿಕಾರಿಗಳಾಗಲೀ, ಜನಪ್ರತಿನಿಧಿಗಳಾಗಲೀ ಇತ್ತ ಗಮನಹರಿಸಿಲ್ಲ' ಎಂದು ದೂರಿದರು.

ಕೃಷ್ಣಪ್ಪ ಲೇಔಟ್ ಸಮಸ್ಯೆ ಕುರಿತು ಪ್ರತಿಕ್ರಿಯೆಗಾಗಿ ಆರ್‌ಆರ್ ನಗರದ ಬಿಬಿಎಂಪಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿನಯ್ ಅವರನ್ನು ಸಂಪರ್ಕಿಸಲು ಕರೆ ಮಾಡಿದಾಗ, ಅವರು ಕರೆಯನ್ನು ಸ್ವೀಕರಿಸಲಿಲ್ಲ.

ಮೈಸೂರು ರೇಸ್

ಆಲ್ಡ್‌ಗೇಟ್ ಗೆಲ್ಲುವ ನಿರೀಕ್ಷೆ

ಸ್ಟಾರ್ ಸುಪ್ರೀಮ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಲ್ಡ್‌ಗೇಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ಕೋಲಾರ್ ಪ್ಲೇಟ್: 1200 ಮೀ. ಆಶೀರ್ವಾದ್ 1, ಸೇಪಿಯಂಟ್ 7, ಸಾಯ್ಗಾನ್ 3
2. ನಾಗಮಂಗಲ ಪ್ಲೇಟ್-ಡಿ.2; 1400 ಮೀ. ಜೆಮಿನಿ 4, ಆರಿಲೆ 6, ರೆಡ್ ಫಾಲ್ಕನ್ 2
3. ಬಾಲಮುರಿ ಪ್ಲೇಟ್; 1400 ಮೀ. ಎಗೆನ್ಸ್ಟ್ ಆಲ್ ಆಡ್ಸ್ 5, ವಾರಿಯರ್ ವುಮನ್ 7, ಝುರೆವಿಚ್ 2
4. ಪ್ರಿನ್ಸ್ ರೀಜೆಂಟ್ ಪ್ಲೇಟ್; 1200 ಮೀ. ದಿ ಗೋಲ್ಡನ್ ಸನ್‌ರೈಸ್ 9, ಕ್ಲೌಡಿ ಹಿಲ್ಸ್ 5, ಮ್ಯಾಜಿಕ್ ಸರ್ಕಲ್ 1
5. ಸ್ಟಾರ್ ಸುಪ್ರೀಮ್ ಪ್ಲೇಟ್; 1200 ಮೀ. ಆಲ್ಡ್‌ಗೇಟ್ 7, ಜಾರ್ 5, ಸ್ಟಾರ್ ಗ್ಲೋರಿ 4
6. ನಾಗಮಂಗಲ ಪ್ಲೇಟ್-ಡಿ.1; 1400 ಮೀ. ಸರ್ ಕ್ಯಾಲ್ಕುಲಸ್ 3, ಸ್ವಾಗತಮ್ 6, ಕಾನ್ಫಿಡೆಂಟ್ ಗೇಮ್ 2
7. ರೆಡ್ ಸಾಟಿನ್ ಪ್ಲೇಟ್; 1200 ಮೀ. ಶೆರ್ಪಾ 9, ವರ್ದಾನ್ 7, ಶೀಬಾ 6

ಉತ್ತಮ ಬೆಟ್: ಆಶೀರ್ವಾದ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಬಿಸಿಯು: ಘಟಿಕೋತ್ಸವ ಇಂದು

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 4ನೇ ವರ್ಷದ ಘಟಿಕೋತ್ಸವವು ಬುಧವಾರ ಬೆಳಿಗ್ಗೆ 11ಕ್ಕೆ ಅರಮನೆ ರಸ್ತೆಯಲ್ಲಿರುವ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ಸಂಸ್ಕೃತಿ ಇಲಾಖೆಗೆ ಅನುದಾನ ಹೆಚ್ಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡುತ್ತಿರುವ ಅನುದಾನವನ್ನು ₹4 ಸಾವಿರ ಕೋಟಿಗೆ ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಸಾಂಸ್ಕೃತಿಕ ಸಂಘಟನೆಗಳ ಒಕ್ಕೂಟದ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಕಲಾವಿದರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಕಲಾವಿದರ ಅಭಿವೃದ್ಧಿ ನಿಗಮ ಸ್ಥಾಪಿಸಿ ₹1 ಸಾವಿರ ಕೋಟಿ ಮೀಸಲಿಡಬೇಕು. 2025–26ನೇ ಸಾಲಿನಲ್ಲಿ ಅರ್ಜಿ ಆಹ್ವಾನಿಸಿ ಸಾಂಸ್ಕೃತಿಕ ಸಂಘಟನೆಗಳಿಗೆ ಧನಸಹಾಯ ಬಿಡುಗಡೆ ಮಾಡಬೇಕು. ಪ್ರತಿ ಜಿಲ್ಲೆಗೆ ₹3 ಕೋಟಿ ಅನುದಾನ ನೀಡಬೇಕು ಎಂದು ಕಲಾವಿದರು ಆಗ್ರಹಿಸಿದರು.

ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಆರ್.ವೀರೇಶ್ ಪ್ರಸಾದ್ ಮಾತನಾಡಿ, 'ಜನಪದ ಮತ್ತು ರಂಗಭೂಮಿ ಕಲಾವಿದರು ಆರ್ಥಿಕ ಸಂಕಷ್ಟದಲ್ಲಿದ್ದು, ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಕನಿಷ್ಠ ₹3 ಲಕ್ಷ ಹಾಗೂ ಗರಿಷ್ಠ ₹10 ಲಕ್ಷ ನಿಗದಿಪಡಿಸಬೇಕು. ಕಲಾವಿದರ ಮಾಸಾಶನವನ್ನು ₹5 ಸಾವಿರಕ್ಕೆ ಹೆಚ್ಚಿಸಬೇಕು. ಭಜನೆ ಕಲಾವಿದರನ್ನು ಇಲಾಖೆಯ ಎಲ್ಲಾ ಯೋಜನೆಯಲ್ಲಿ ಸಮಾನವಾಗಿ ಪರಿಗಣಿಸಿ, ಒಂದು ನಾಟಕ ಪ್ರದರ್ಶನಕ್ಕೆ ಧನಸಹಾಯವನ್ನು ₹80 ಸಾವಿರಕ್ಕೆ ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಸಾಂಸ್ಕೃತಿಕ ಸಂಘಟನೆಗಳ ಒಕ್ಕೂಟದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರ

ತುಮಕೂರಿನಲ್ಲಿ ರಂಗಾಯಣ ಸ್ಥಾಪಿಸಬೇಕು. ಸರ್ಕಾರಿ ಯೋಜನೆಗಳ ಪ್ರಚಾರಕ್ಕೆ ಬೀದಿ ನಾಟಕ ಕಲಾವಿದರನ್ನೇ ಆಯ್ಕೆ ಮಾಡಬೇಕು ಎಂದರು.

ಪ್ರತಿಭಟನೆಯಲ್ಲಿ ಒಕ್ಕೂಟದ ಗೌರವಾಧ್ಯಕ್ಷ ರಬ್ಬನಹಳ್ಳಿ ಕೆಂಪಣ್ಣ, ಮಹಿಳಾ ಘಟಕದ ಅಧ್ಯಕ್ಷೆ ಪೂಜಾ ಬೇವೂರ, ಪ್ರಧಾನ ಕಾರ್ಯದರ್ಶಿ ಜಿ.ಟಿ.ಪೆರಮಯ್ಯ, ಕಲಾವಿದರಾದ ರಾಮಚಂದ್ರರಾವ್, ಸಿ.ಶಿವಕುಮಾರಸ್ವಾಮಿ, ಸ್ವಾಮಿ, ಸುಮಾ ಭಾಗವಹಿಸಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಕ್ರೋಶ

'ಭಾಗ್ಯಲಕ್ಷ್ಮಿ ಯೋಜನೆ ನಿಲ್ಲಿಸಿ ಅನ್ಯಾಯ ಮಾಡಿದೆ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಬಡವರ್ಗದ ಹೆಣ್ಣುಮಕ್ಕಳಿಗಾಗಿ ಯಡಿಯೂರಪ್ಪ ಸರ್ಕಾರ ಜಾರಿಗೆ ತಂದಿದ್ದ ಭಾಗ್ಯಲಕ್ಷ್ಮಿ ಯೋಜನೆಯನ್ನು ಸಿದ್ದರಾಮಯ್ಯ ಸರ್ಕಾರ ನಿಲ್ಲಿಸಿ, ಅನ್ಯಾಯ ಮಾಡಿದೆ' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜನ್ಮದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'36 ಲಕ್ಷಕ್ಕೂ ಹೆಚ್ಚು ಹೆಣ್ಣುಮಕ್ಕಳು ಭಾಗ್ಯಲಕ್ಷ್ಮಿ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಇಂಥ ಯೋಜನೆ ನಿಲ್ಲಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಬಡ ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡಿದೆ' ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು. ಚಿತ್ರದಲ್ಲಿ ಮಾಜಿ ಶಾಸಕ ಎಂ.ವಿ.ನಾಗರಾಜು, ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ, ಮುಖಂಡ ಜೆ.ಮರಿಸ್ವಾಮಿ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಜಗದೀಶ್ ಚೌಧರಿ ಇದ್ದಾರೆ

'ಅಹಲ್ಯಾಬಾಯಿ ಹೋಳ್ಕರ್ ಅವರು ಸಣ್ಣ ವಯಸ್ಸಿನಲ್ಲೇ ಪತಿಯನ್ನು ಕಳೆದುಕೊಂಡು ಧೃತಿಗೆಡದೆ ಸೈನ್ಯ ಕಟ್ಟಿ, ಹಿಂದೂ ದೇವಾಲಯಗಳನ್ನು ರಕ್ಷಿಸಿದರು, ಔರಂಗಜೇಬನನ್ನು ಹಿಮ್ಮೆಟ್ಟಿಸಿದ್ದರು. ಈ ಹಿನ್ನೆಲೆಯಲ್ಲಿ ಅಹಲ್ಯಾಬಾಯಿ ಅವರ ಜನ್ಮದಿನಾಚರಣೆಯನ್ನು ಮಹಿಳಾ ಸಮಾವೇಶದ ರೀತಿಯಲ್ಲಿ ದೇಶದಾದ್ಯಂತ ಆಚರಿಸಲಾಗುತ್ತಿದೆ' ಎಂದರು.

'ತಮಿಳಿನಿಂದ ಕನ್ನಡ ಹುಟ್ಟಿದೆ ಎಂದು ಹೇಳಿಕೆ ನೀಡಿರುವ ತಮಿಳು ನಟ ಕಮಲ ಹಾಸನ್‌ಗೆ ಕ್ಷಮೆಯಾಚಿಸುವಂತೆ ಹೈಕೋರ್ಟ್ ಹೇಳಿದೆ. ಕೂಡಲೇ ಅವರು ಕ್ಷಮೆ ಯಾಚಿಸಬೇಕು' ಎಂದು ಒತ್ತಾಯಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಅಹಲ್ಯಾಬಾಯಿ ಹೋಳ್ಕರ್ ಅವರ ಭಾವಚಿತ್ರವನ್ನು ಪ್ರವಾಸಿ ಮಂದಿರದಿಂದ ಜಯದೇವ ಭವನದವರೆಗೆ ಮೆರವಣಿಗೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ವಿಜಯೇಂದ್ರ ಅವರಿಗೆ ಕ್ರೇನ್ ಮೂಲಕ ಬೃಹತ್ ಹಾರ ಹಾಕಿ ಸ್ವಾಗತಿಸಲಾಯಿತು.

ಕಾಂಗ್ರೆಸ್ ಯುವಮುಖಂಡ ಅರುಣ್‌ಕುಮಾರ್ ವಿಜಯೇಂದ್ರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ, ತಾಲ್ಲೂಕು ಅಧ್ಯಕ್ಷ ಜಗದೀಶ್ ಚೌಧರಿ, ಮುಖಂಡ ಎಸ್. ಮಲ್ಲಯ್ಯ, ರಾಜ್ಯ ವಕ್ತಾರ ವೆಂಕಟೇಶ್ ದೊಡ್ಡೇರಿ ಇದ್ದರು. ಗ್ರಾಮಾಂತರ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಕಾರ್ಯಕರ್ತರು ಆಗಮಿಸಿದ್ದರು.

ಪೊಲೀಸರು, ಮುಖಂಡರ ನಡುವೆ ಮಾತಿನ ಚಕಮಕಿ: ಮೆರವಣಿಗೆಯಲ್ಲಿ ಡಿ.ಜೆ. ಬಳಸುತ್ತಿರುವುದನ್ನು ನಿಲ್ಲಿಸುವಂತೆ ಪೊಲೀಸರು ತಡೆಯಲು ಬಂದಾಗ ಬಿಜೆಪಿ ಮುಖಂಡರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಡಿ.ಜೆ.ಗೆ ಬದಲಾಗಿ ಮೈಕ್ ಬಳಸುವಂತೆ ಸೂಚಿಸಿದರೂ ಡಿ.ಜೆ. ನಿಲ್ಲಿಸದೆ ಮೆರವಣಿಗೆ ನಡೆಯಿತು.

ಸಂಕ್ಷಿಪ್ತ ಸುದ್ದಿ

ಪದವಿ ದಿನ: ಅತಿಥಿ: ಮಹೇಶ ಜೋಶಿ, ಅಧ್ಯಕ್ಷತೆ: ಅಶೋಕ್ ಎಸ್. ನಗೋರಿ, ಆಯೋಜನೆ: ಅರಿಹಂತ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 9

'ವುಮೆನ್ ಆಫ್ ವರ್ತ್' ಉದ್ಘಾಟನೆ: ಸಿದ್ದರಾಮಯ್ಯ, ಶೋಭಾ ಕರಂದ್ಲಾಜೆ, ಅತಿಥಿಗಳು: ರಾಜ್‌ಕುಮಾರ್ ಖತ್ರಿ, ನಿತೇಶ್ ಕೆ. ಪಾಟೀಲ್, ಪರುಲ್ ಸೋನಿ, ಉಪಸ್ಥಿತಿ: ಕೆ. ರತ್ನಪ್ರಭಾ, ಆಯೋಜನೆ: ಉಬ್ಬಂಟು, ಸ್ಥಳ: ಹೋಟೆಲ್ ತಾಜ್ ವಿವಾಂತ, ಯಶವಂತಪುರ, ಬೆಳಿಗ್ಗೆ 9.30ರಿಂದ

ಪ್ರದರ್ಶನ–2025: ಅತಿಥಿಗಳು: ರಾಜ್ ಗೋಪಾಲಕೃಷ್ಣ, ಎಂ.ಆರ್. ಸೀತಾರಾಮ್, ಎಂ.ಆರ್. ಜಾನಕಿರಾಮ್, ಎಂ.ಆರ್. ಆನಂದರಾಮ್, ಎಂ.ಆರ್. ಸಂಪಂಗಿರಾಮಯ್ಯ, ಎಂ.ಆರ್. ಕೋದಂಡರಾಮ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

ಪರಿವರ್ತನಾ ಸಮಾವೇಶ: ಉದ್ಘಾಟನೆ: ಛಲವಾದಿ ನಾರಾಯಣಸ್ವಾಮಿ, ಮುಖ್ಯ ಭಾಷಣ: ಪುರುಷೋತ್ತಮ ಬಿಳಿಮಲೆ, ಅಗ್ನಿ ಶ್ರೀಧರ್, ಅತಿಥಿ: ಸೋಮಣ್ಣ ಬೇವಿನಮರದ್, ಇಂದಿರಾ ಕೃಷ್ಣಪ್ಪ, ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11.30

2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಸಿಸಿ, ಎನ್‌ಎಸ್‌ಎಸ್, ಯುವ ರೆಡ್‌ಕ್ರಾಸ್, ರೇಂಜರ್ಸ್ ಮತ್ತು ರೋವರ್ಸ್ ಇತರೆ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ರಿಜ್ವಾನ್ ಅರ್ಷದ್, ಪುಟ್ಟಣ್ಣ, ರಾಮಕೃಷ್ಣ ರೆಡ್ಡಿ ಕೆ., ಅಂಕಿತಾ ಅಮರ್, ಸುರಜಿತ್ ಸಿಂಗ್, ಅಧ್ಯಕ್ಷತೆ: ಫಜೀಹಾ ಸುಲ್ತಾನ, ಆಯೋಜನೆ ಮತ್ತು ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರೊಂದಿಗೆ ಸಂವಾದ: ಭಾಗವಹಿಸುವವರು: ಕೆ.ವಿ. ಪ್ರಭಾಕರ್, ಆಯೇಶಾ ಖಾನುಂ, ದಿನೇಶ್ ಅಮೀನ್‌ಮಟ್ಟು, ಆರ್. ಶ್ರೀಧರ್, ಸನ್ಮಾನಿತರು: ಎಂ.ಸಿ. ಶೋಭಾ, ರಶ್ಮಿ ಎಸ್., ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಅಭ್ಯುದಯ ಶೈಕ್ಷಣಿಕ ವರ್ಷದ ಆರಂಭೋತ್ಸವ: ಅತಿಥಿಗಳು: ಹಂಸಲೇಖ, ದೇವರಾಜ್ ಬಿ.ಕೆ., ಲಕ್ಷ್ಮೀಶ್ ಹೆಗಡೆ ಸೋಂದಾ, ಸುಜಾತ ದೇವರಾಜ್, ಆಯೋಜನೆ ಮತ್ತು ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 10



ಹಂಸಲೇಖ

ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರಿಗೆ ಗೌರವ ಸನ್ಮಾನ, ವಾರ್ಷಿಕ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಕಿರುಹೊತ್ತಿಗೆ ಬಿಡುಗಡೆ: ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅಭಿನಂದನಾ ನುಡಿ: ಅರವಿಂದ ಮಾಲಗತ್ತಿ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಜಯಂತಿ, ದತ್ತಿ ಪ್ರಶಸ್ತಿ ಪ್ರದಾನ: ಜಿ.ಎಸ್. ಸಂಗ್ರೇಶಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪನ್ಯಾಸ: ಎನ್. ಚಿನ್ನಸ್ವಾಮಿ ಸೋಸಲೆ, ಅತಿಥಿಗಳು: ನಾಗಯ್ಯ, ಟಿ. ಕೃಷ್ಣರಾಜು, ಎಂ.ಜಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಪದವಿ ದಿನ: ಅತಿಥಿ: ನಾರಾಯಣಸ್ವಾಮಿ, ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಶನ್, ಕೋಲೂರು, ತಾವರೇಕೆರೆ ಹೋಬಳಿ, ಸಂಜೆ 6.30

ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ರಂಗ ನಮನ: ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಚಿಂತಾಮಣಿ ಕೊಡ್ಲೆಕೆರೆ, 'ಕಂಸಾಯಣ' ನಾಟಕ ಪ್ರದರ್ಶನ: ಆಯೋಜನೆ: ತಾರ ಅರೇನಾ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7ರಿಂದ

'ಮುಕ್ಕಾಂ ಪೋಸ್ಟ್ ಬೊಂಬಿಲವಾಡಿ' ನಾಟಕ ಪ್ರದರ್ಶನ: ನಿರ್ದೇಶನ: ರವೀಂದ್ರ ಪೂಜಾರಿ, ಆಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ್, ಸಂಜೆ 7.30

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ಔಷಧ ಪ್ರಯೋಗಕ್ಕೆ ಕೃತಕ ಅಂಗಗಳು



ನೇಸರ ಕಾಡನಕುಪ್ಪೆ

ಹೊಸದೊಂದು ಔಷಧವೊಂದನ್ನು ಶೋಧಿಸಿದರೆ ಅದನ್ನು ಪರೀಕ್ಷಿಸುವುದು ಹೇಗೆ? ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಹೇಗೆ? ಈ ಪರೀಕ್ಷೆಗಳಿಗೆಲ್ಲಾ ಈಗ ಬಹು ಕಠಿಣ ನಿಯಮಗಳಿವೆ. ಪ್ರಾಣಿಗಳ ಮೇಲೆ ಪರೀಕ್ಷಿಸಿ, ಬಳಿಕ ಸ್ವಯಂಪ್ರೇರಿತರಾಗಿ ಪರೀಕ್ಷೆಗೆ ಬರುವವರ ಮೇಲೆ ಮಾನವಪ್ರಯೋಗ ಮಾಡಿ, ಯಶಸ್ಸು ದೊರೆತ ಬಳಿಕ ಔಷಧವೊಂದಕ್ಕೆ ಮಾನ್ಯತೆ ಸಿಗುತ್ತದೆ. ಇದೊಂದು ಕ್ಲಿಷ್ಟಕರ ಪ್ರಕ್ರಿಯೆ. ಈ ಪ್ರಕ್ರಿಯೆಯನ್ನು ಪೂರೈಸಲು ವರ್ಷಗಟ್ಟಲೇ ಸಮಯ ಹಿಡಿಯುತ್ತದೆ.

ಈಗ ಈ ಬಗೆಯ ಪ್ರಯೋಗವನ್ನು ಸರಳಗೊಳಿಸುವ, ಸಮಯವನ್ನು ಕಡಿತಗೊಳಿಸುವ ಹಾಗೂ ಪ್ರಯೋಗಕ್ಕೆ ಪಶುಗಳ ಬಳಕೆಯನ್ನು ಇಲ್ಲವಾಗಿರುವ ಮಹತ್ತರವಾದ ಸಂಶೋಧನೆಯೊಂದು ನಡೆದಿದೆ. ಅಂದರೆ, ಯಾವುದೇ ಔಷಧ ಸಂಶೋಧನೆಯನ್ನು ಪ್ರಯೋಗಿಸಲು ಕೃತಕ ಅಂಗಾಂಗಗಳನ್ನು ನಿರ್ಮಿಸಲಾಗಿದೆ.

ಸಾಮಾನ್ಯವಾಗಿ ಔಷಧಪರೀಕ್ಷೆ ನಡೆಯುವುದು ಹೇಗೆ? ನಿರ್ದಿಷ್ಟವಾದ ದೇಹದ ಭಾಗಗಳ ಮೇಲೆ. ಎಂದರೆ, ಹೃದಯದ ಸಮಸ್ಯೆ ಇದ್ದಲ್ಲಿ, ಔಷಧವು ನೇರವಾಗಿ ಹೃದಯದ ಮೇಲೆ ಪ್ರಯೋಗಗೊಂಡರೆ ಒಳಿತು. ಆದರೆ, ಪ್ರಾಣಿಗಳನ್ನು ಬಳಸಿಕೊಂಡು ಮಾಡುವ ಪ್ರಯೋಗದಲ್ಲಿ ನೇರವಾಗಿ ಅಂಗವೊಂದರ ಮೇಲೆ ಔಷಧ ಪ್ರಯೋಗ ಮಾಡುವುದು ಇದೆಯಾದರೂ ಅದು ಬಹಳ ಅಪರೂಪ. ನೇರವಾಗಿ ಪ್ರಾಣಿಯ ರಕ್ತನಾಳದ ಮೂಲಕ ಔಷಧವನ್ನು ಚುಚ್ಚಿ, ದೇಹದೊಳಗೆ ಕಳುಹಿಸಲಾಗುತ್ತದೆ. ಔಷಧವು ರಕ್ತನಾಳದ ಮೂಲಕ ದೇಹದ ಒಳಗೆ ಪ್ರವೇಶಿಸಿ ಬಳಿಕ ಅದು ರೋಗಪೀಡಿತ ಅಂಗಕ್ಕೆ ತಲುಪುತ್ತದೆ. ಆಗ ಆ ಅಂಗವು ಔಷಧಕ್ಕೆ ಸ್ಪಂದಿಸುತ್ತದೆ. ಅಂದರೆ ಔಷಧ ಕೆಲಸ ಮಾಡಲು ರಕ್ತನಾಳ ಹಾಗೂ ರಕ್ತ ಅತಿ ಮುಖ್ಯ ಅಂಶಗಳು.

ಇದನ್ನೇ ಗಮನದಲ್ಲಿರಿಸಿಕೊಂಡು ಆಸ್ಟ್ರಿಯಾದ ಟಿಯು ವೀನ್ – ವಿಯೆನ್ನಾ ತಾಂತ್ರಿಕ ವಿಶ್ವವಿದ್ಯಾಲಯದ 3ಡಿ ಪ್ರಿಂಟಿಂಗ್ ಮತ್ತು ಜೈವಿಕ ಸಂರಚನೆಯ ವಿಭಾಗದ ಪ್ರಾಧ್ಯಾಪಕ ಅಲೆಕ್ಸಾಂಡರ್ ಆಫ್ಸಿಯನ್‌ಕಾವ್ ಅವರ ತಂಡವು ಹೊಸಬಗೆಯ ಕೃತಕ ಅಂಗಗಳನ್ನು ನಿರ್ಮಿಸಿದ್ದಾರೆ. ಈ ಕೃತಕ ಅಂಗಗಳಲ್ಲಿ ರಕ್ತವೂ ಇರುತ್ತದೆ; ರಕ್ತನಾಳಗಳೂ ಇರುತ್ತವೆ! ಇವಕ್ಕೆ ಔಷಧವಿಜ್ಞಾನಿಗಳು ಬೇಕಾದ ಔಷಧವನ್ನು ಪ್ರವಹಿಸಿ ಪರೀಕ್ಷಿಸಬಹುದು. ಈ ಅಂಗಗಳಿಗೆ ನೋವೂ ಆಗುವುದಿಲ್ಲ; ಪ್ರಾಣಹಾನಿಯ ಭಯವೂ ಇರುವುದಿಲ್ಲ.

ಕಾರ್ಯಾಚರಣೆ

ಮೈಕ್ರೋಚಿಪ್ ಆಧಾರಿತ ನ್ಯಾನೋ ತಂತ್ರಜ್ಞಾನ ಆಧಾರಿತ ಅಂಗಗಳಿವು. ನೈಸರ್ಗಿಕವಾಗಿ ಅಂಗಗಳು ಯಾವ ಗಾತ್ರದಲ್ಲಿ ಇರುತ್ತವೆಯೋ ಅಷ್ಟೇ ಗಾತ್ರದಲ್ಲಿ ಇವು ಇರುವುದಿಲ್ಲ. ಸಾಮಾನ್ಯವಾಗಿ ಸಣ್ಣದಾಗಿರುತ್ತವೆ. ಹಾಗಾಗಿಯೇ ಇಲ್ಲಿ ನ್ಯಾನೋ ತಂತ್ರಜ್ಞಾನ ಬಳಕೆ ಆಗಿರುವುದು. ಹಾಗಾಗಿ, ಕಡಿಮೆ ಪ್ರಮಾಣದ ಔಷಧವನ್ನು ಪ್ರಯೋಗಿಸಿದರೆ ಸಾಕು. ಈ ಅಂಗಗಳಲ್ಲಿ ಇರುವ ಚಿಪ್‌ನಲ್ಲಿ ಆಯಾ ಅಂಗಗಳಿಗೆ ಸಂಬಂಧಿಸಿದ ಈಗಾಗಾಲೇ ಇರುವ ರೋಗಗಳ ಮಾಹಿತಿ, ಔಷಧವಿಧಾನದ ಮಾಹಿತಿಯನ್ನು ಅಡಕಗೊಳಿಸಲಾಗಿರುತ್ತದೆ. ಹೊಸದೊಂದು ಔಷಧವು ಅಂಗವನ್ನು ಪ್ರವೇಶಿಸಿದಾಗ, ಆ ಅಂಗವು ಹೊಸದಾದ ರೀತಿಯಲ್ಲಿ ಸ್ಪಂದಿಸುತ್ತದೆ. ಏಕೆಂದರೆ, ಹೊಸ ಔಷಧದ ಬಗ್ಗೆ ಅದಕ್ಕೆ ಪೂರ್ವಮಾಹಿತಿ ಇರುವುದಿಲ್ಲ. ಈ ಸ್ಪಂದನೆಯನ್ನು ಅಧ್ಯಯನ ಮಾಡಿ, ಅಂಗವು ಔಷಧದಿಂದ ಗುಣ ಹೊಂದುತ್ತದೆಯೇ ಇಲ್ಲವೇ, ಗುಣ ಹೊಂದುವ ಪ್ರಮಾಣವೆಷ್ಟು, ಪರಿಣಾಮಗಳೇನೇನು ಇತ್ಯಾದಿ ದತ್ತಾಂಶಗಳನ್ನು ಒದಗಿಸುತ್ತದೆ.

ಪ್ರಯೋಜನ

ಈ ಅಂಗಗಳಿಂದ, ಔಷಧವಿಜ್ಞಾನಿಗಳಿಗೆ ತಮಗೆ ಬೇಕಾದ ದತ್ತಾಂಶವನ್ನು ಸಂಗ್ರಹಿಸಲು ಸುಲಭವಾಗುತ್ತದೆ. ಜೊತೆಗೆ, ಔಷಧ ಪರೀಕ್ಷೆಯ ಈಗಿನ ಕಠಿಣ ನಿಯಮಗಳ ಪಾಲನೆಯ ಇತಿಮಿತಿಗಳು ಇರುವುದಿಲ್ಲ. ಜೊತೆಗೆ, ಪ್ರಯೋಗಕ್ಕೆ ಬೇಕಾದ ಪ್ರಾಣಿಗಳನ್ನು ಹೊಂದಿಸಿಕೊಳ್ಳುವುದರ ಕಷ್ಟವೂ ಇರುವುದಿಲ್ಲ. ಇವೆಲ್ಲದಕ್ಕಿಂತ ಮುಖ್ಯವಾಗಿ ವಿಜ್ಞಾನಿಗಳು ತಮಗೆ ಎಷ್ಟು ಬಾರಿ ಬೇಕೋ ಅಷ್ಟು ಬಾರಿ ಪ್ರಯೋಗಗಳನ್ನು ನಡೆಸಲು ಇದರಿಂದ ಸಾಧ್ಯವಾಗುತ್ತದೆ.

ಉಪಗ್ರಹಗಳ ಮೂಲಕ ಸೌರವಿದ್ಯುತ್!

ಅವಿನಾಶ್ ಬಿ.

ಜಗತ್ತು ಸೌರವಿದ್ಯುತ್‌ನತ್ತ ಹೆಚ್ಚು ವಾಲುತ್ತಿದೆ. ಭಾರತ ಸರ್ಕಾರವೂ ಸೂರ್ಯಘರ್ ಯೋಜನೆಯ ಮೂಲಕ, ಸೌರವಿದ್ಯುತ್ ಉತ್ಪಾದನೆಗೆ ಒತ್ತು ನೀಡುತ್ತಿದೆ. ಇಂಥ ಪರಿಸ್ಥಿತಿಯಲ್ಲಿ, ಸೌರವಿದ್ಯುತ್ ಬಳಕೆಯನ್ನು ಮತ್ತಷ್ಟು ಉತ್ತೇಜಿಸಬಲ್ಲ ತಂತ್ರಜ್ಞಾನವೊಂದನ್ನು ಜಪಾನ್ ವಿಜ್ಞಾನಿಗಳು ಯಶಸ್ವಿಯಾಗಿ ಪರೀಕ್ಷೆಗೊಳಪಡಿಸಿರುವ ಸುದ್ದಿ ಮೇ ತಿಂಗಳಾಂತ್ಯದಲ್ಲಿ ಬಂದಿದೆ.

ಇದುವೇ ಉಪಗ್ರಹ ಮೂಲಕ ಸೌರವಿದ್ಯುತ್ತನ್ನು ತರಿಸಿಕೊಳ್ಳುವ ಯೋಜನೆ. ಅಂತರಿಕ್ಷದಿಂದಲೇ ನೇರವಾಗಿ ಸೌರವಿದ್ಯುತ್ ವಿತರಣೆ ಮಾಡುವ ಪ್ರಯೋಗಕ್ಕೆ ಕೈಹಚ್ಚಿರುವ ಜಪಾನ್ ಅಂತರಿಕ್ಷ ವ್ಯವಸ್ಥೆ(ಜಪಾನ್ ಸ್ಪೇಸ್ ಸಿಸ್ಟಮ್ಸ್-ಜೆಎಸ್‌ಎಸ್) ಸಂಶೋಧಕರು 'ಒಹಿಸಾಮ ಮಿಶನ್' ಕೈಗೊಂಡಿದ್ದಾರೆ.

ಏನಿದು ಒಹಿಸಾಮ?

'ಒಹಿಸಾಮ' ಎಂದರೆ ಜಪಾನೀ ಭಾಷೆಯಲ್ಲಿ ಸೂರ್ಯ ಎಂದರ್ಥ. ಒಹಿಸಾಮ ಮಿಶನ್ ಅಡಿಯಲ್ಲಿ ಸೌರಪ್ರಭೆಯಿಂದ ನೇರವಾಗಿ ವಿದ್ಯುತ್ ಪಡೆಯುವ ಕನಸನ್ನು ಜಪಾನ್ ನನಸಾಗಿಸಿದೆ. ಪ್ರಾಯೋಗಿಕವಾಗಿ ಭೂಮಿಯಿಂದ ಸುಮಾರು ಆರೇಳು ಕಿ.ಮೀ. ದೂರದಲ್ಲಿ ವೇಗವಾಗಿ ಹಾರಾಡುವ ಜೆಟ್ ವಿಮಾನದಲ್ಲಿ ಸೌರಫಲಕಗಳನ್ನು ಅಳವಡಿಸಿ, ಅದರಿಂದ ಸೂರ್ಯನ ಪ್ರತಿಫಲಿತ ಕಿರಣಗಳನ್ನು ಸುವಾ ಎಂಬಲ್ಲಿ ಸ್ಥಾಪಿಸಲಾಗಿರುವ ಆಂಟೆನಾಗಳ ಗುಚ್ಛಕ್ಕೆ ರವಾನಿಸಲಾಗಿದೆ. ಈ ಆಂಟೆನಾಗಳ ಗುಚ್ಛವು ಸೂರ್ಯಪ್ರಭೆಯನ್ನು ವಿದ್ಯುತ್ತಾಗಿ ಪರಿವರ್ತಿಸಿಕೊಟ್ಟಿದೆ. ಜೆಎಸ್‌ಎಸ್ ಹಿಂದಿನಿಂದಲೂ ಪ್ರಯೋಗ ಮಾಡುತ್ತಲೇ ಇದ್ದು, ಆರಂಭಿಕ ಪ್ರಯೋಗಗಳಲ್ಲಿ ಸುಮಾರು 30ರಿಂದ 100 ಮೀಟರ್ ಅಂತರದಲ್ಲಿ ವೈರ್‌ಲೆಸ್ ವಿದ್ಯುತ್ ಪ್ರವಹಿಸುವಿಕೆ ಸಾಧ್ಯವಾಗಿತ್ತಷ್ಟೇ.

ಜೆಎಸ್‌ಎಸ್ ಮುಂದಿನ ಗುರಿ, ಭೂಮಿಯ ಸುತ್ತ ಸುಮಾರು 400 ಕಿ.ಮೀ.ಗಳಷ್ಟು ಕೆಳ ಭೂಕಕ್ಷೆಯಲ್ಲಿ ಸುಮಾರು 180 ಕಿಲೋ ತೂಗುವ ಪುಟ್ಟ ಉಪಗ್ರಹವನ್ನು ಹಾರಿಬಿಡುವುದು ಎಂದು ತಿಳಿಸಿದ್ದಾರೆ, ಜೆಎಸ್‌ಎಸ್ ಸಲಹೆಗಾರ ವಿಜ್ಞಾನಿ ಕೊಯಿಚಿ ಇಜಿಚಿ. ಭೂಮಿಯ ಕೆಳ ಕಕ್ಷೆಯಲ್ಲಿ ಸೂಕ್ತವಾದ ರೀತಿಯಲ್ಲಿ ಉಪಗ್ರಹವನ್ನು ಪರಿಭ್ರಮಿಸುವಂತೆ ಮಾಡಿದರೆ ಅಲ್ಲಿ ಮೋಡಗಳು ಅಥವಾ ಯಾವುದೇ ನೈಸರ್ಗಿಕ ಅಡೆತಡೆಗಳಿರುವುದಿಲ್ಲ. ಅದರಲ್ಲಿರುವ ಸೌರಫಲಕಗಳು ನಿರಂತರವಾಗಿ ಲಭ್ಯವಿರುವ ಸೌರಶಕ್ತಿಯನ್ನು ಹೀರಿಕೊಂಡು ಅದನ್ನು ಸೂಕ್ಷ್ಮ ತರಂಗಗಳಾಗಿ (ಮೈಕ್ರೋವೇವ್) ಪರಿವರ್ತಿಸುತ್ತದೆ. ಈ ಮೈಕ್ರೋವೇವ್‌ಗಳು ವೈರ್‌ಲೆಸ್ ಆಗಿ ಪ್ರವಹಿಸುತ್ತಾ ಸ್ವೀಕರಣಕೇಂದ್ರದಲ್ಲಿ ವಿದ್ಯುಚ್ಛಕ್ತಿಯಾಗಿ ಪರಿವರ್ತನೆಗೊಳ್ಳುತ್ತವೆ.

ನಮಗೇನು ಲಾಭ?

ಇತ್ತೀಚೆಗಷ್ಟೇ ಉಪಗ್ರಹದಿಂದ ನೇರವಾಗಿ ಇಂಟರ್‌ನೆಟ್ ಸೌಲಭ್ಯ ದೊರೆಯುವ ಯೋಜನೆ ಸುದ್ದಿ ಮಾಡಿತ್ತು. ಎಲಾನ್ ಮಸ್ಕ್ ಅವರ ಸ್ಟಾರ್‌ಲಿಂಕ್ ಮೂಲಕ ಹಲವು ದೇಶಗಳಲ್ಲಿ ಈ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದ್ದು, ಭಾರತಕ್ಕೂ ಬರಲು ಸಿದ್ಧತೆಗಳು ನಡೆಯುತ್ತಿವೆ. ಅದೇ ಮಾದರಿಯಲ್ಲಿದೆ ಉಪಗ್ರಹದ ಮೂಲಕ ನೇರವಾಗಿ ವಿದ್ಯುಚ್ಛಕ್ತಿಯನ್ನು ಪಡೆಯುವ ಈ ಯೋಜನೆ.

ಸಾಂಪ್ರದಾಯಿಕ ಸೌರವಿದ್ಯುತ್ ಫಲಕಗಳಿಗೆ ಒಂದಷ್ಟು ಇತಿಮಿತಿಗಳಿವೆ. ಮೋಡ ಕವಿದರೆ ಸೋಲಾರ್ ವಾಟರ್ ಹೀಟರ್‌ನಲ್ಲಿ ನೀರು ಬಿಸಿಯಾಗುವುದಿಲ್ಲ ಅಥವಾ ವಿದ್ಯುತ್ ಉತ್ಪಾದನೆಯ ಪ್ರಮಾಣ ಕುಸಿತವಾಗಬಹುದು. ವಿಶೇಷವಾಗಿ ಸೌರಫಲಕಗಳಿಗೆ ದೀರ್ಘಕಾಲ ಸೂರ್ಯನ ಕಿರಣಗಳು ಕಾಣಿಸದಿರುವ ಮಳೆಗಾಲದಲ್ಲಂತೂ ಸಮಸ್ಯೆ ಹೆಚ್ಚು.

ಅಂತರಿಕ್ಷದಿಂದಲೇ ನೇರವಾಗಿ ಸೌರಕಿರಣಗಳನ್ನು ಹಾಯಿಸಿ ವಿದ್ಯುತ್ ಉತ್ಪಾದಿಸುವ ವಿನೂತನ ತಂತ್ರಜ್ಞಾನದಿಂದ, ಹಗಲಿರುಳೆಂಬ ಭೇದವಿಲ್ಲದೆ ದಿನದ ಇಪ್ಪತ್ತನಾಲ್ಕು ಗಂಟೆಯೂ ವಿದ್ಯುತ್ ಲಭ್ಯವಾಗಲಿದೆ. ಅಲ್ಲದೆ, ಮಬ್ಬುಬೆಳಕು, ಹವಾಮಾನ ವೈಪರೀತ್ಯಗಳು, ಮೋಡಗಳು. ಇವ್ಯಾವುವೂ ಈ ಸೌರಶಕ್ತಿಯ ಸಂಗ್ರಹಣಕಾರ್ಯಕ್ಕೆ ಅಡ್ಡಿಯಾಗದು. ಇನ್ನೊಂದು ಅನುಕೂಲವೆಂದರೆ, ಸಾಂಪ್ರದಾಯಿಕ ಸೌರಶಕ್ತಿಯನ್ನು ಸಂಗ್ರಹಿಸಿ ಬೇರೆಡೆಗೆ ರವಾನಿಸುವಾಗ ಸಾಕಷ್ಟು ವಿದ್ಯುಚ್ಛಕ್ತಿ ನಷ್ಟವಾಗುತ್ತದೆ. ವರ್ಷಪೂರ್ತಿ ಬಿಸಿಲು ಇರುವ ಸಹರಾ ಮರುಭೂಮಿಯಿಂದ ಗರಿಷ್ಠ ಪ್ರಮಾಣದಲ್ಲಿ ಸೌರಶಕ್ತಿ ಸಂಗ್ರಹಿಸಬಹುದಾದರೂ ಪ್ರಯೋಜನ ಅಷ್ಟಕ್ಕಷ್ಟೆ, ಏಕೆಂದರೆ ಈ ಸೌರಶಕ್ತಿಯನ್ನು ಬೇರೆಡೆ ರವಾನಿಸುವುದು ಕಷ್ಟ ಮತ್ತು ವೆಚ್ಚದಾಯಕ. ಆದರೆ ಭೂಮಿಯ ಮೇಲ್ಮೈ ವಾತಾವರಣದಲ್ಲಿ ಈ ನವೀನ ತಂತ್ರಜ್ಞಾನದ ಮೂಲಕವಾಗಿ ಮೈಕ್ರೋವೇವ್‌ಗಳು ಹಾದು ಬರುವಾಗ ಕೇವಲ ಶೇ 5ರಷ್ಟು ಶಕ್ತಿ ಮಾತ್ರ ನಷ್ಟವಾಗುತ್ತದೆ ಎಂಬುದನ್ನು ವಿಜ್ಞಾನಿಗಳು ದೃಢಪಡಿಸಿದ್ದಾರೆ.

ಈ ವಿದ್ಯುತ್ತಿನ ಮತ್ತೊಂದು ಪ್ರಯೋಜನವೆಂದರೆ ಈಗ ಹೆಚ್ಚು ಜನಪ್ರಿಯವಾಗುತ್ತಿರುವ ಬ್ಯಾಟರಿ ವಿದ್ಯುತ್‌ಚಾಲಿತ ವಾಹನಗಳಿಗೆ. ಇಂಥ ವಾಹನಗಳಿಗೆ ಹಾಗೂ ವಿಮಾನಗಳಲ್ಲಿಯೂ ಈ ಸೌರವಿದ್ಯುತ್ತನ್ನು ನೇರವಾಗಿ ಬಳಸುವಂತಾದರೆ, ಹೆಚ್ಚುತ್ತಲೇ ಇರುವ ವಿದ್ಯುತ್ ಬೇಡಿಕೆಗೆ ಇದೊಂದು ಸಮರ್ಥ ಪರ್ಯಾಯವಾಗಬಲ್ಲುದು. ಸೌರಶಕ್ತಿಯನ್ನು ಅಂತರಿಕ್ಷದಿಂದಲೇ ತರಿಸಿಕೊಂಡು ವಿದ್ಯುತ್ತಾಗಿ ಪರಿವರ್ತಿಸುವ ಕೆಲಸ ಆರಂಭವಾದರೆ ಭೂಮಿಯ ಯಾವುದೇ ಮೂಲೆಗೆ ಬೇಕಾದರೂ ವಿದ್ಯುತ್ತನ್ನು ತಲುಪಿಸಬಹುದು.

ಆದರೆ, ಅಂತರಿಕ್ಷದ ಸೌರವಿದ್ಯುತ್ ಪಡೆಯುವಾಗ ಕೊಂಚ ಎಡರುತೊಡರುಗಳೂ ಇವೆ. ಆಗಾಗ್ಗೆ ಸಂಭವಿಸುವ ಉಲ್ಕಾಪಾತವು ಭೂಮಿಯ ಸುತ್ತ ಪರಿಭ್ರಮಿಸುವ ಪುಟ್ಟ ಉಪಗ್ರಹಕ್ಕೆ ಬಾಧಿಸುವ ಸಾಧ್ಯತೆ ಒಂದೆಡೆಯಾದರೆ, ಉಪಗ್ರಹಕ್ಕೇನಾದರೂ ಹಾನಿಯಾದರೆ ಅಂತರಿಕ್ಷದಲ್ಲಿ ಬಾಹ್ಯಾಕಾಶ ತ್ಯಾಜ್ಯದ ಪ್ರಮಾಣ ಹೆಚ್ಚುವ ಆತಂಕವೂ ಇದೆ.

ಹೊಸದೇನಲ್ಲ

ಅಂತರಿಕ್ಷದಿಂದ ನೇರವಾಗಿ ಸೌರಶಕ್ತಿಯನ್ನು ಸಂಗ್ರಹಿಸುವ ಪರಿಕಲ್ಪನೆಗೆ ಏಳು ದಶಕಗಳ ಇತಿಹಾಸವಿದೆ. 1968ರಲ್ಲೇ ನಾಸಾದ ಎಂಜಿನಿಯರ್ ಪೀಟರ್ ಗ್ಲೇಸರ್ ಅವರು ಅಂತರಿಕ್ಷದಿಂದ ಸೌರಪ್ರಭೆಯ ಶಕ್ತಿಯನ್ನು ನೇರವಾಗಿ ಭೂಮಿಗೆ ತಲುಪಿಸುವ ಬಗ್ಗೆ ಪ್ರಸ್ತಾಪಿಸಿದ್ದರು. 1980ರ ದಶಕದಲ್ಲಿ ಕ್ಯೋಟೋ ಯುನಿವರ್ಸಿಟಿ ಸಂಶೋಧಕರು ಪುಟ್ಟ ರಾಕೆಟ್‌ಗಳನ್ನು ಬಳಸಿ ಕಡಿಮೆ ಅಂತರದಿಂದ ಅಂತರಿಕ್ಷದಿಂದ ಸೌರಶಕ್ತಿಯನ್ನು ಸಂಗ್ರಹಿಸುವ ಪ್ರಯೋಗ ಮಾಡಿದ್ದರು. ನಂತರ 2012ರಲ್ಲಿ ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿರುವ ಸ್ಟ್ರಾಚ್‌ಕ್ಲೈಡ್ ವಿಶ್ವವಿದ್ಯಾಲಯದ ಏರೋಸ್ಪೇಸ್ ಎಂಜಿನಿಯರ್ ಮ್ಯಾಸಿಮಿಲಿಯನೊ ವಸ್ಸೆಲ್ ಅವರ ನೇತೃತ್ವದ ವಿಜ್ಞಾನಿಗಳ ತಂಡವೊಂದು ಅಂತರಿಕ್ಷದಲ್ಲೇ ಸೌರಶಕ್ತಿಯನ್ನು ಸಂಗ್ರಹಿಸಿ, ಅಲ್ಲಿಂದ ನೇರವಾಗಿ ಭೂಮಿಗೆ ರವಾನಿಸಬಹುದಾದ ಬೃಹತ್ ಯೋಜನೆಯೊಂದನ್ನು ಸಿದ್ಧಪಡಿಸಿತ್ತು. 2020ರಲ್ಲಿ ಅಮೆರಿಕದ ನೇವಲ್ ರಿಸರ್ಚ್ ಲ್ಯಾಬೊರೇಟರಿ ಈ ಕುರಿತು ಮಾಡಿದ ಪ್ರಯೋಗದಲ್ಲಿಯೂ ಸೂರ್ಯಪ್ರಭೆಯನ್ನು ಮೈಕ್ರೋವೇವ್‌ಗಳಾಗಿ ಪರಿವರ್ತಿಸುವಲ್ಲಿ ಅಲ್ಪ ಯಶಸ್ಸು ಕಂಡಿತ್ತು. ಆ ಬಳಿಕ ತೀರಾ ಇತ್ತೀಚೆಗೆ ಎಂದರೆ 2023ರಲ್ಲಿ ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕಾಲ್‌ಟೆಕ್) ವಿಜ್ಞಾನಿಗಳು ಇದೇ ರೀತಿಯ ಪ್ರಯೋಗವೊಂದನ್ನು ಮಾಡಿ 200 ಮಿಲಿವ್ಯಾಟ್‌ಗಳಷ್ಟು (ಸೆಲ್‌ಫೋನ್‌ನ ಫ್ಲ್ಯಾಶ್‌ಲೈಟ್‌ಗೆ ಬೇಕಾಗುವಷ್ಟು) ವಿದ್ಯುತ್ ಉತ್ಪಾದಿಸುವಲ್ಲಿ ಯಶಸ್ವಿಯಾಗಿದ್ದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಒಂದು ದ್ರಾವಣ ಕೆಂಪುಬ್ ಲಿಟ್ಮಸ್ ಕಾಗದವನ್ನು ನೀಲಿ ಬಣ್ಣಕ್ಕೆ ಬದಲಾಯಿಸಿದರೆ ಅದರ ಪಿಎಚ್ (PH) ಮೌಲ್ಯವು

ಎ) 1 ಬಿ) 4
ಸಿ) 5 ಡಿ) 10

ಉತ್ತರ:– (ಡಿ) 10

2) ಒಂದು ದ್ರಾವಣ ಪುಡಿ ಮಾಡಿದ ಮೊಟ್ಟೆಯ ಚಿಪ್ಪುಗಳೊಂದಿಗೆ ವರ್ತಿಸಿ ಬಿಡುಗಡೆ ಮಾಡುವ ಅನಿಲ ಸುಣ್ಣದ ತಿಳಿನೀರನ್ನು ಬಿಳಿಯಾಗಿಸುತ್ತದೆ. ದ್ರಾವಣ ಇದನ್ನು ಒಳಗೊಂಡಿದೆ.

(a) NaCl (b) HCl
(c) LiCl (d) KCl

ಉತ್ತರ:– (b) HCl

3. 10 mL NaOH ದ್ರಾವಣವು 8mL HCl ದ್ರಾವಣದಿಂದ ಸಂಪೂರ್ಣವಾಗಿ ತಟಸ್ಥೀಕರಣಗೊಳಿಸಲ್ಪಡುತ್ತದೆ. ನಾವು ಇದೇ NaOH ದ್ರಾವಣವನ್ನು 20 mLನಷ್ಟು ತೆಗೆದುಕೊಂಡರೆ, ಇದನ್ನು ತಟಸ್ಥಗೊಳಿಸಲು ಬೇಕಾದ HCl ದ್ರಾವಣದ(ಈ ಮೊದಲು ತೆಗೆದುಕೊಂಡ ದ್ರಾವಣ) ಪ್ರಮಾಣ,

(a) 4 mL (b) 8 mL
(c) 12 mL (d) 16 mL.

ಉತ್ತರ:– (d) 16 mL

4. ಈ ಕೆಳಗಿನವುಗಳಲ್ಲಿ ಯಾವ ಪ್ರಕಾರದ ಔಷಧಗಳನ್ನು ಅಜೀರ್ಣದ ಚಿಕಿತ್ಸೆಗೆ ಬಳಸಲಾಗುತ್ತದೆ?

(a) ಜೀವನಿರೋಧಕ (b) ನೋವುನಿವಾರಕ
(c) ಆಮ್ಲಶಾಮಕ (d) ನಂಜುನಿವಾರಕ

ಉತ್ತರ:– (c) ಆಮ್ಲಶಾಮಕ

1) ಕೆಳಗಿನ ಕೋಷ್ಟಕವನ್ನು ಗಮನಿ

ವಸ್ತು	PH ಮೌಲ್ಯ
P	7,4
Q	2,2
R	10
S	1.2

ಈ ವಸ್ತುಗಳಲ್ಲಿ ಅತ್ಯಂತ ಕಡಿಮೆ ಹೈಡ್ರೋಜನ ಆಯಾನುಗಳನ್ನು ಹೊಂದಿರುವುದು

ಎ) R ಬಿ) S
ಸಿ) Q ಡಿ) P

ಉತ್ತರ:– (ಎ) R (ಜೂನ್– 2021)

6) ಸೋಡಿಯಂ ಬೈ ಕಾರ್ಬೋನೇಟ್ ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ............

ಎ) ಹೈಡ್ರೋಜನ್ ಬಿ) ನೈಟ್ರೋಜನ್
ಸಿ) ಕಾರ್ಬನ್ ಡೈ ಆಕ್ಸೈಡ್
ಡಿ) ನೈಟ್ರೋಜನ್ ಡೈ ಆಕ್ಸೈಡ್

ಉತ್ತರ:– (ಸಿ) ಕಾರ್ಬನ್ ಡೈ ಆಕ್ಸೈಡ್ (ಜೂನ್– 2021)

7) ನೀಲಿ ಲಿಟ್ಮಸ್ ಕಾಗದವನ್ನು ಕೆಂಪು ಬಣ್ಣಕ್ಕೆ ಬದಲಾಯಿಸುವ ವಸ್ತು ....

ಎ) ಸುಣ್ಣದ ತಿಳಿ ನೀರು ಬಿ) ಶುದ್ಧ ನೀರು
ಸಿ) ಸೋಡಿಯಂಅ ಹೈಡ್ರಾಕ್ಸೈಡ್ ದ್ರಾವಣ
ಡಿ) ಜಠರ ರಸ

ಉತ್ತರ:– (ಡಿ) ಜಠರ ರಸ (ಮಾರ್ಚ್– 2021)

8) ತುರಿಕೆ ಗಿಡದ ಎಲೆಗಳ ಚುಚ್ಚುವ ಕೂದಲಿನಲ್ಲಿರುವ ಆಮ್ಲ ಯಾವುದು?

ಎ) ಮೆಥೆನೋಯಿಕ್ ಆಮ್ಲ ಬಿ) ಅಕ್ಸಾಲಿಕ್ ಆಮ್ಲ
ಸಿ) ಸಿಟ್ರಿಕ್ ಆಮ್ಲ ಡಿ) ಲ್ಯಾಕ್ಟಿಕ್ ಆಮ್ಲ

ಉತ್ತರ:– (ಎ) ಮೆಥೆನೋಯಿಕ್ ಆಮ್ಲ (ಮಾರ್ಚ್– 2021)

9) ಒಂದು ದ್ರಾವಣದ ಪಿಎಚ್ (PH) ಮೌಲ್ಯವು ಹೆಚ್ಚಾದಂತೆ

ಎ)ಪ್ರತ್ಯಾಮ್ಲೀಯ ಲಕ್ಷಣ ಕಡಿಮೆಯಾಗುತ್ತದೆ, ಮತ್ತು OH^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ.

ಬಿ) ಆಮ್ಲೀಯ ಲಕ್ಷಣ ಹೆಚ್ಚಾಗುತ್ತದೆ, ಮತ್ತು H^+ ಅಯಾನುಗಳ ಸಂಖ್ಯೆ ಕಡಿಮೆಯಾಗುತ್ತದೆ

ಸಿ) ಪ್ರತ್ಯಾಮ್ಲೀಯ ಲಕ್ಷಣ ಹೆಚ್ಚಾಗುತ್ತದೆ, ಮತ್ತು OH^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ.

ಡಿ) ಆಮ್ಲೀಯ ಲಕ್ಷಣ ಕಡಿಮೆಯಾಗುತ್ತದೆ, ಮತ್ತು H^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ.

ಉತ್ತರ:–(ಸಿ)ಪ್ರತ್ಯಾಮ್ಲೀಯ ಲಕ್ಷಣ ಹೆಚ್ಚಾಗುತ್ತದೆ, ಮತ್ತು OH^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ. (ಮಾರ್ಚ್– 2020)

10) ಜಲೀಯ ದ್ರಾವಣದಲ್ಲಿ ಅಪೂರ್ಣವಾಗಿ ವಿಯೋಜನೆ ಹೊಂದುವ ಸಂಯುಕ್ತಗಳ ಗುಂಪು (ಮಾರ್ಚ್– 2020)

ಎ) ಹೈಡ್ರೋಕ್ಲೋರಿಕ್ ಆಮ್ಲ, ನೈಟ್ರಿಕ್ ಆಮ್ಲ
ಬಿ) ಕಾರ್ಬೋನಿಕ್ ಆಮ್ಲ, ಫಾಸ್ಪಾರಿಕ್ ಆಮ್ಲ
ಸಿ) ಹೈಡ್ರೋಕ್ಲೋರಿಕ್ ಆಮ್ಲ, ಫಾಸ್ಪರಿಕ ಆಮ್ಲ
ಡಿ) ತಾಮ್ರದ ಸಲ್ಫೇಟ್ ದ್ರಾವಣ, ಸಕ್ಕರೆ ದ್ರಾವಣ

ಉತ್ತರ:– (ಬಿ) ಕಾರ್ಬೋನಿಕ್ ಆಮ್ಲ, ಫಾಸ್ಪಾರಿಕ್ ಆಮ್ಲ

11) ಸೋಡಿಯಂ ಕಾರ್ಬೋನೇಟ್ ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ.....................

ಎ) ಕಾರ್ಬನ್ ಡೈ ಆಕ್ಸೈಡ್ (ಮಾರ್ಚ್– 2021)
ಬಿ) ನೈಟ್ರೋಜನ್ ಡೈ ಆಕ್ಸೈಡ್
ಸಿ) ಹೈಡ್ರೋಜನ್ ಡಿ) ಕ್ಲೋರಿನ್

ಉತ್ತರ:– (ಎ) ಕಾರ್ಬನ್ ಡೈ ಆಕ್ಸೈಡ್

12) P, Q, R ಮತ್ತು S ದ್ರಾವಣಗಳ ಮೌಲ್ಯ ಕ್ರಮವಾಗಿ 7, 8, 1.0, 13.0 ಮತ್ತು 1.4 ಇವುಗಳ ಹೆಚ್ಚಿನ H^+ ಅಯಾನುಗಳ ಸಾರತೆ ಹೊಂದಿರುವ ದ್ರಾವಣವನ್ನು ತಿಳಿಸಿ

ಎ) P ಬಿ) Q
ಸಿ) R ಡಿ) S

ಉತ್ತರ:– (ಬಿ) Q (ಮಾರ್ಚ್– 2018)

(ಮುಂದುವರಿಯುವುದು.........)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - CHEMISTRY

ELECTROCHEMISTRY

19. Write a brief note on the Barrier protection method of preventing corrosion.

Ans:- Barrier protection method – A thin barrier is developed between the metal like iron to be protected and the environment by painting the surface or by coating the surface with a thin film of oil or grease or by developing a thin layer of some non– corrosive metals like nickel, chromium, copper etc., by electroplating.

20. Write a brief note on the Sacrificial protection method of preventing corrosion.

Ans:- Sacrificial protection method is the method in which the metal to be protected say iron is coated with more electropositive metal like zinc which loses electrons easily than iron and hence protects it from corroding. The process of coating zinc to iron is called galvanisation. (The zinc gradually gets lost as basic zinc carbonate $Zn(OH)_2$. $ZnCO_3$).



21. Mention the factors, which affect corrosion.

Ans:- Some factors which affect corrosion are –

(a) Position of metals in the emf series
(b) Presence of impurities in the metals
(c) Presence of the electrolytes
(d) Presence of CO_2 in water and
(e) Presence of protective coatings.

22. How can we prevent corrosion using the anti- rust solutions?

Ans:- The solutions of the alkaline phosphates and alkaline chromates are generally used as anti- rust solutions. Due to the alkaline nature of these solutions, the H^+ ions are removed from the solutions, and rusting is prevented. *Eg:-* Iron articles are dipped in the alkaline sodium phosphate solutions and a protective insoluble film of iron phosphate is formed.

23. What is Standard Electrode Potential?

Ans:- The Standard Electrode Potential is the potential developed between the metal and the solution containing its own ions, when the metal is in equilibrium with its ions of unit concentration at 25^0 C

24. What is Standard Hydrogen Electrode Potential?

Ans:- Standard Hydrogen Electrode Potential is the potential developed when hydrogen gas at one atmospheric pressure is passed through a solution containing hydrogen ions of unit activity.

25. Write a brief note on Sacrificial Protection method of preventing corrosion.

Ans:- Sacrificial Protection - In this method, the surface of the metal to be protected (Eg: iron) is coated with a more reactive metal i.e., metal which occupies a position lower in the electrochemical series than the metal to be protected. Being more reactive, it will take part in the redox reaction and will save the other metal. In other words, it will sacrifice itself for the sake of the metal to be protected. Eg:- iron is generally coated with zinc and this process is called galvanization. Zinc is more reactive than iron as it is evident from the E° values.

$$Zn^{2+}(aq) + 2e^- \rightleftharpoons Zn(s); E^\circ = -0.76\,V$$

$$Fe^{2-}(aq) + 2e^- \rightleftharpoons Fe(s); E^\circ = -0.44\,V$$

In case iron has been galvanized, then zinc will be corroded instead of iron because it is more reactive than iron. It will change to the basic zinc carbonate $ZnCO_3.Zn(OH)_2$, a compound which is formed in the same way as hydrated ferric oxide. Sometimes scratches appear on the surface of iron galvanized with zinc. Even then, zinc will be corroded in preference to iron because there will be a competition between both these metals to take part in oxidation half reaction or in competitive oxidation reaction. Atoms of zinc will be oxidized in preference to the iron atoms. Sometimes surface of iron is coated with tin metal and this process is known as tinning or tin plating. It may be noted that tin is not as effective as zinc since it lies above iron in the electrochemical series as it is evident from its E° value.



Protection of rusting of iron by zinc

$$Sn^{2+}(aq) + 2e^- \rightleftharpoons Sn(s); E^\circ = -0.14\,V$$

Thus, tin will be effective in checking the rusting of iron as long as the surface of iron is not exposed to the atmosphere. However, If scratches are formed on the surface, then iron will participate in the redox reaction being more reactive than tin and rusting of iron will re-start. This clearly shows that galvanization should be preferred to tinning to check the rusting of iron.

26. What is the significance of the electrochemical series?

Ans:- The significance of the electrochemical series are as follows-

(1) The metals on the top of the list are good reducing agents and the metals at the bottom of the list are good oxidising agents.

(2) A metal in the electrochemical series can displace another metal below it in the series, from a solution of the salt.

(Contd.........)

ತಾತ್ಕಾಲಿಕ ಹಾನಿಗಳಿಂದ ಸೇನೆ ಮೇಲೆ ಪರಿಣಾಮವಾಗದು: ಸಿಡಿಎಸ್ ಚೌಹಾಣ್

‘ನಷ್ಟವಲ್ಲ, ಫಲಿತಾಂಶವೇ ಮುಖ್ಯ’

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ/ಪುಣೆ: ‘ಸಂಘರ್ಷದ ವೇಳೆ ಆಗುವ ತಾತ್ಕಾಲಿಕ ನಷ್ಟಗಳು ಸಶಸ್ತ್ರಪಡೆಗಳ ಸ್ಥೈರ್ಯದ ಮೇಲೆ ಪರಿಣಾಮವನ್ನುಂಟು ಮಾಡುವುದಿಲ್ಲ. ಅಂತಿಮ ಫಲಿತಾಂಶ ಮುಖ್ಯವಾಗುವುದೇ ಹೊರತು ಇಂತಹ ಹಿನ್ನಡೆಗಳು ಅಲ್ಲ’ ಎಂದು ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಮಂಗಳವಾರ ಹೇಳಿದ್ದಾರೆ.

ಈ ಮೂಲಕ, ಪಾಕಿಸ್ತಾನ ವಿರುದ್ಧದ ‘ಆಪರೇಷನ್ ಸಿಂಧೂರ’ದ ಆರಂಭಿಕ ಹಂತದಲ್ಲಿ ಭಾರತವು ಅನಿರ್ದಿಷ್ಟ ಸಂಖ್ಯೆಯ ಯುದ್ಧವಿಮಾನಗಳನ್ನು ಕಳೆದುಕೊಂಡಿದೆ ಎಂದು ತಾವು ಒಪ್ಪಿಕೊಂಡಿದ್ದಕ್ಕೆ ತಮ್ಮ ವಿರುದ್ಧ ಕೇಳಿಬರುತ್ತಿರುವ ಟೀಕೆಗಳನ್ನು ಅವರು ತಳ್ಳಿಹಾಕಿದಂತಾಗಿದೆ.

ಅವರು ಇಲ್ಲಿನ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯದ ಡಿಫೆನ್ಸ್ ಅಂಡ್ ಸ್ಟ್ರ್ಯಾಟಜಿಕ್ ಸ್ಟಡೀಸ್ ಹಮ್ಮಿಕೊಂಡಿದ್ದ ‘ಭವಿಷ್ಯದ ಯುದ್ಧಗಳು ಹಾಗೂ ಯುದ್ಧತಂತ್ರಗಳು’ ಕುರಿತ ಸಂವಾದದಲ್ಲಿ ಮಾತನಾಡಿದರು.

ಕಳೆದ ವಾರ ಸಿಂಗಪುರದಲ್ಲಿ ಬ್ಲೂಮ್‌ಬರ್ಗ್ ಸುದ್ದಿವಾಹಿನಿಗೆ ನೀಡಿದ ಸಂದರ್ಶನ ಕುರಿತು ಪ್ರಸ್ತಾಪಿಸಿದ ಅವರು, ‘ಭಾರತೀಯ ಸೇನೆ ಅನುಭವಿಸಿದ ನಷ್ಟಗಳ ಕುರಿತು ನನ್ನನ್ನು ಪ್ರಶ್ನಿಸಲಾಯಿತು. ಈ ನಷ್ಟಗಳು ಮಹತ್ವದ್ದಲ್ಲ. ಅಂತಿಮವಾಗಿ, ನಮಗೆ ಸಿಕ್ಕ ಫಲಿತಾಂಶ ಹಾಗೂ ನಾವು ಹೇಗೆ ಕಾರ್ಯಾಚರಣೆ ನಡೆಸಿದೆವು ಎನ್ನುವುದು ಮಹತ್ವದ್ದು ಎಂಬುದಾಗಿ ನಾನು ಉತ್ತರಿಸಿದ್ದೆ’ ಎಂದು ಜನರಲ್ ಚೌಹಾಣ್ ಹೇಳಿದರು.

‘ನಿರಂತರ ದಾಳಿಗಳ ಮೂಲಕ ಭಾರತದಲ್ಲಿ ರಕ್ತ ಹರಿಯುವಂತೆ ಮಾಡುವ ವಿಧಾನವನ್ನೇ ಪಾಕಿಸ್ತಾನ ಅನುಸರಿಸುತ್ತಾ ಬಂದಿದೆ. ಆದರೆ, ‘ಆಪರೇಷನ್ ಸಿಂಧೂರ’ದ ಮೂಲಕ ಗಡಿಯಾಚೆಯ ಭಯೋತ್ಪಾದನೆಗೆ ಭಾರತ ಹೊಸದಾದ ಅಡ್ಡಗೋಡೆಯನ್ನೇ ನಿರ್ಮಿಸಿದೆ.’ ಎಂದು ವಿಶ್ಲೇಷಿಸಿದರು.

‘ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ನಡೆಯುವುದಕ್ಕೂ ಕೆಲವೇ ವಾರಗಳ ಮೊದಲು, ಪಾಕಿಸ್ತಾನ ಸೇನೆ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್, ಭಾರತ ಹಾಗೂ ಹಿಂದೂಗಳ ವಿರುದ್ಧ ವಿಷ ಕಾರುತ್ತಿದ್ದರು. ಭಾರತವನ್ನು ರಕ್ತಸಿಕ್ತವನ್ನಾಗಿ ಮಾಡಬೇಕು ಎಂಬ ಪಾಕಿಸ್ತಾನ ಅನುಸರಿಸುವ ವಿಧಾನವನ್ನು ಅವರ ಮಾತು ಒತ್ತಿ ಹೇಳಿದಂತಿತ್ತು’ ಎಂದು ಚೌಹಾಣ್ ಹೇಳಿದರು. ಮೇ 10ರಂದು ದಾಳಿಯನ್ನು ತೀವ್ರಗೊಳಿಸಿದಾಗ, ತಡರಾತ್ರಿ 1ರ ಸುಮಾರಿಗೆ ಭಾರತದ ಮುಂದೆ ಪಾಕಿಸ್ತಾನ ಮಂಡಿಯೂರಿ, ಮಾತುಕತೆಗೆ ಅಂಗಲಾಚಿತು’ ಎಂದು ಹೇಳಿದರು.

ವಿಶೇಷ ಅಧಿವೇಶನ: 16 ಪಕ್ಷಗಳ ಆಗ್ರಹ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ ಮತ್ತು ಆ ಬಳಿಕದ ಬೆಳವಣಿಗೆಗಳ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನವನ್ನು ತಕ್ಷಣ ಕರೆಯುವಂತೆ ‘ಇಂಡಿಯಾ’ ಮೈತ್ರಿಕೂಟದ 16 ಪಕ್ಷಗಳ ನಾಯಕರು ಪ್ರಧಾನಿ ಅವರನ್ನು ಒತ್ತಾಯಿಸಿದ್ದಾರೆ.

ರಾಹುಲ್ ಗಾಂಧಿ, ಅಖಿಲೇಶ್ ಯಾದವ್ ಮತ್ತು ಅಭಿಷೇಕ್ ಬ್ಯಾನರ್ಜಿ ಸೇರಿದಂತೆ ವಿರೋಧ ಪಕ್ಷಗಳ ನಾಯಕರು ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜಂಟಿಯಾಗಿ ಪತ್ರ ಬರೆದಿದ್ದಾರೆ.

ಮೈತ್ರಿಕೂಟದ ಐದು ಪ್ರಮುಖ ಪಕ್ಷಗಳ ನಾಯಕರು ಮಂಗಳವಾರ ಇಲ್ಲಿ ಸಭೆ ನಡೆಸಿ ಬಳಿಕ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ ಜತೆಗಿನ ಭಿನ್ನಾಭಿಪ್ರಾಯದಿಂದಾಗಿ ಎಎಪಿಯು ಸಭೆಯಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ ವಿಶೇಷ ಅಧಿವೇಶನಕ್ಕೆ ಒತ್ತಾಯಿಸಿ ಪ್ರಧಾನಿ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆಯಲು ನಿರ್ಧರಿಸಿದೆ.

‘ಇಂತಹ ‘ಸೂಕ್ಷ್ಮ’ ವಿಷಯದ ಕುರಿತು ವಿಶೇಷ ಅಧಿವೇಶನ ನಡೆಸಲು ಎನ್‌ಸಿಪಿ (ಎಸ್‌ಪಿ) ಆಕ್ಷೇಪ ವ್ಯಕ್ತಪಡಿಸಿದೆ. ಇದರಿಂದ ‘ಇಂಡಿಯಾ’ ಬಣದೊಳಗಿನ ಭಿನ್ನಾಭಿಪ್ರಾಯ ಬಹಿರಂಗವಾಗಿದೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ತೃಣಮೂಲ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಭಿಷೇಕ್, ಶಿವಸೇನಾ (ಯುಬಿಟಿ) ನಾಯಕ ಅರವಿಂದ ಸಾವಂತ್ ಹಾಗೂ ಡಿಎಂಕೆಯ ಟಿ.ಆರ್. ಬಾಲು ಅವರು ಪತ್ರಕ್ಕೆ ಸಹಿ ಹಾಕಿದ ನಾಯಕರಲ್ಲಿ ಸೇರಿದ್ದಾರೆ.

ಆರ್‌ಜೆಡಿ, ನ್ಯಾಷನಲ್ ಕಾನ್ಫರೆನ್ಸ್, ಸಿಪಿಎಂ, ಸಿಪಿಐ, ಆರ್‌ಎಸ್‌ಪಿ, ಮುಸ್ಲಿಮ್ ಲೀಗ್, ಜೆಎಂಎಂ ಮತ್ತು ಕೇರಳ ಕಾಂಗ್ರೆಸ್ ನಾಯಕರೂ ಸಹಿ ಹಾಕಿದ್ದಾರೆ.

‘ಪಾಕ್‌ಗೆ ಇನಿಂಗ್ಸ್ ಸೋಲು’

ಅನಿಲ್ ಚೌಹಾಣ್

ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿಗೆ ಪ್ರತಿಯಾಗಿ ಆರಂಭಿಸಿದ ‘ಆಪರೇಷನ್ ಸಿಂಧೂರ’ದಲ್ಲಿ, ಪಾಕಿಸ್ತಾನವನ್ನು ಭಾರತ ‘ಇನಿಂಗ್ಸ್‌ನಿಂದ ಸೋಲಿಸಿತು ಎಂದು ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಹೇಳಿದರು.

ಸಂವಾದದ ವೇಳೆ, “ಆಪರೇಷನ್ ಸಿಂಧೂರ’ ವೇಳೆ ಪಾಕಿಸ್ತಾನಕ್ಕೆ ಎಷ್ಟು ನಷ್ಟ ಉಂಟು ಮಾಡಲಾಯಿತು? ಭವಿಷ್ಯದ ಯುದ್ಧಗಳಿಗೆ ಸಂಬಂಧಿಸಿ ಯಾವ ಕಾರ್ಯತಂತ್ರ ಅನುಸರಿಸಲಾಗುತ್ತದೆ ಹಾಗೂ ಯುದ್ಧತಂತ್ರಗಳು ಹೇಗಿರಲಿವೆ’ ಎಂಬ ಪ್ರಶ್ನೆಯನ್ನು ಕೇಳಲಾಯಿತು. ಇದಕ್ಕೆ, ಅವರು ಕ್ರಿಕೆಟ್ ಹಾಗೂ ಫುಟ್ಬಾಲ್ ಕ್ರೀಡೆಗಳನ್ನು ಉದಾಹರಿಸುವ ಮೂಲಕ ಲಘುಧಾಟಿಯಲ್ಲಿ ಉತ್ತರಿಸಿದರು. ‘ಫುಟ್ಬಾಲ್ ಪಂದ್ಯದಲ್ಲಿ ನೀವು 4-2 ಗೋಲುಗಳಿಂದ ಗೆಲ್ಲುತ್ತೀರಿ ಎಂದುಕೊಳ್ಳೋಣ. ಅಂದರೆ, ಒಂದು ತಂಡ ನಾಲ್ಕು ಗೋಲುಗಳನ್ನು ಹೊಡೆದರೆ, ಮತ್ತೊಂದು ತಂಡ ಎರಡು ಗೋಲು ಹೊಡೆದಂತಾಯಿತು’

‘ಈಗ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಬರೋಣ. ನಿಮ್ಮ ತಂಡ ಎದುರಾಳಿ ತಂಡವನ್ನು ಒಂದು ಇನ್ನಿಂಗ್ಸ್‌ನಿಂದ ಪರಾಭವಗೊಳಿಸಿತು ಎಂದು ಭಾವಿಸೋಣ. ಇಂತಹ ಸನ್ನಿವೇಶದಲ್ಲಿ ಎಷ್ಟು ವಿಕೆಟ್‌ಗಳು..ಎಷ್ಟು ಚೆಂಡುಗಳು ಅಥವಾ ಎಷ್ಟು ಜನ ಆಟಗಾರರು ಎಂಬ ಪ್ರಶ್ನೆಗಳೇ ಉದ್ಭವಿಸುವುದಿಲ್ಲ’ ಎಂದು ಚೌಹಾಣ್ ವಿವರಿಸಿದಾಗ, ಸಭಾಂಗಣದಲ್ಲಿ ನಗು ಹಾಗೂ ಭಾರಿ ಚಪ್ಪಾಳೆಗಳ ಸದ್ದು ತುಂಬಿತು.

‘ಕಾರ್ಯಾಚರಣೆ 8 ತಾಸಿಗೇ ಮೊಟಕು’

‘ತಾನು ಕೈಗೊಂಡ ಮಿಲಿಟರಿ ಕಾರ್ಯಾಚರಣೆ 48 ಗಂಟೆ ನಡೆಯಲಿದೆ ಎಂದು ಪಾಕಿಸ್ತಾನ ಭಾವಿಸಿತ್ತು. ಆದರೆ, ಕಾರ್ಯಾಚರಣೆಯನ್ನು 8 ತಾಸಿಗೇ ಮೊಟಕುಗೊಳಿಸಿದ ಪಾಕಿಸ್ತಾನ, ಭಾರತದೊಂದಿಗೆ ಮಾತುಕತೆ ಬಯಸಿತು. ಅದರ ಮನವಿಗೆ ನಾವೂ ಒಪ್ಪಿದೆವು’ ಎಂದು ಅನಿಲ್ ಚೌಹಾಣ್ ತಿಳಿಸಿದರು. ‘ನಮ್ಮ ಸಶಸ್ತ್ರ ಪಡೆಗಳು ಪಾಕಿಸ್ತಾನದ ಎಷ್ಟು ಯುದ್ಧವಿಮಾನಗಳನ್ನು ಹೊಡೆದುರುಳಿಸಿವೆ, ಎಷ್ಟು ರೇಡಾರ್‌ಗಳನ್ನು ನಾಶ ಮಾಡಿವೆ ಎಂಬ ಬಗ್ಗೆ ಮಾಹಿತಿಯನ್ನು ಶೀಘ್ರದಲ್ಲಿಯೇ ದೇಶದ ಮುಂದಿಡಲಾಗುವುದು’ ಎಂದೂ ಜನರಲ್ ಚೌಹಾಣ್ ಹೇಳಿದರು.

ಅಸ್ಸಾಂ: ಪ್ರವಾಹ ಪರಿಸ್ಥಿತಿ ಉಲ್ಬಣ

20 ಜಿಲ್ಲೆಗಳ ಐದು ಲಕ್ಷಕ್ಕೂ ಅಧಿಕ ಮಂದಿಗೆ ತೊಂದರೆ

ಅಸ್ಸಾಂನ ಹೊಜಾಯ್ ಜಿಲ್ಲೆಯ ಜಮುನಾಮುಖ್‌ನಲ್ಲಿ ಪ್ರವಾಹದಿಂದ ತೊಂದರೆಗೆ ಒಳಗಾದವರು ದೋಣಿಯಲ್ಲಿ ಸುರಕ್ಷಿತ ಪ್ರದೇಶಕ್ಕೆ ತೆರಳಿದರು ಪಿಟಿಐ ಚಿತ್ರ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಮಂಗಳವಾರವೂ ಮಳೆಯ ಅಬ್ಬರ ಮುಂದುವರಿದಿದ್ದು, ಪ್ರವಾಹ ಪರಿಸ್ಥಿತಿ ಉಲ್ಬಣಗೊಂಡಿದೆ. 22 ಜಿಲ್ಲೆಗಳ 5.35 ಲಕ್ಷಕ್ಕೂ ಹೆಚ್ಚು ಜನರು ಪ್ರವಾಹದಿಂದ ತೊಂದರೆಗೀಡಾಗಿದ್ದು, ಹವಾಮಾನ ಇಲಾಖೆಯು ರಾಜ್ಯದ ಕೆಲವು ಭಾಗಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ನೀಡಿದೆ.

ಮಂಗಳವಾರ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕರೆ ಮಾಡಿ ಮಾತನಾಡಿದ್ದು, ಪ್ರವಾಹ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದಿದ್ದಾರೆ. ಕೇಂದ್ರ ಸರ್ಕಾರದ ಸಂಪೂರ್ಣ ಬೆಂಬಲದ ಭರವಸೆಯನ್ನು ಅವರು ನೀಡಿದ್ದಾರೆ.

ಹಿಮಂತ ಅವರು ಪ್ರವಾಹದಿಂದ ಅತಿ ಹೆಚ್ಚು ಹಾನಿಗೊಳಗಾದ ಪ್ರದೇಶಗಳಲ್ಲಿ ಒಂದಾಗಿರುವ ಕಛಾರ್ ಜಿಲ್ಲೆಗೆ ಭೇಟಿ ನೀಡಿ ಸಂತ್ರಸ್ತರ ಜತೆ ಮಾತುಕತೆ ನಡೆಸಿದ್ದಾರೆ.

ಗುವಾಹಟಿಯ ಪ್ರಾದೇಶಿಕ ಹವಾಮಾನ ಕೇಂದ್ರವು ಧುಬ್ರಿ, ದಕ್ಷಿಣ ಸಲ್ಮಾರ ಮನಕಚಾರ್, ಗೋಲ್‌ಪಾರಾ ಮತ್ತು ಕೊಕ್ರಝಾರ್ ಜಿಲ್ಲೆಗಳಿಗೆ ಮಂಗಳವಾರ ‘ಆರೆಂಜ್ ಅಲರ್ಟ್’ ನೀಡಿದೆ.

ಪ್ರವಾಹ ಮತ್ತು ಭೂಕುಸಿತ ಸೇರಿದಂತೆ ಮಳೆಸಂಬಂಧಿ ಅವಘಡಗಳಿಂದ ಒಟ್ಟು 11 ಮಂದಿ ಮೃತಪಟ್ಟಿದ್ದು, ಇಬ್ಬರು ನಾಪತ್ತೆಯಾಗಿದ್ದಾರೆ. ಒಟ್ಟಾರೆ ಪ್ರವಾಹ ಪರಿಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯದ ಹಲವು ಪ್ರದೇಶಗಳಲ್ಲಿ ಭಾರೀ ಮಳೆಯಿಂದಾಗಿ ರಸ್ತೆ, ರೈಲು ಮತ್ತು ದೋಣಿ ಸೇವೆಗಳು ಸ್ಥಗಿತಗೊಂಡಿವೆ.

ಸಿಕ್ಕಿಂ: ಮುಂದುವರಿದ ಶೋಧ

ಗ್ಯಾಂಗ್ಟಕ್: ಸಿಕ್ಕಿಂನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ನಾಪತ್ತೆಯಾಗಿರುವ ಆರು ಯೋಧರಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಎನ್‌ಡಿಆರ್‌ಎಫ್‌ನ 23 ಸದಸ್ಯರ ತಂಡ ಮಂಗಳವಾರ ಶೋಧ ಕಾರ್ಯಕ್ಕೆ ಕೈಜೋಡಿಸಿದೆ.

ಮಂಗನ್ ಜಿಲ್ಲೆಯ ಲಾಚೆನ್ ಪಟ್ಟಣದ ಸಮೀಪ ಛಾತೆನ್‌ನಲ್ಲಿ ಭಾನುವಾರ ರಾತ್ರಿ 7ರ ಸುಮಾರಿಗೆ ಸೇನೆಯ ಶಿಬಿರ ಇರುವ ಜಾಗದಲ್ಲಿ ಭೂಕುಸಿತ ಸಂಭವಿಸಿತ್ತು. ಘಟನೆಯಲ್ಲಿ ಮೂವರು ಯೋಧರು ಮೃತಪಟ್ಟು, ಆರು ಯೋಧರು ನಾಪತ್ತೆಯಾಗಿದ್ದಾರೆ.

ಮಣಿಪುರ: 10,477 ಮನೆಗಳಿಗೆ ಹಾನಿ

- ಮಣಿಪುರದಲ್ಲಿ ಪ್ರವಾಹದಿಂದ 56 ಸಾವಿರ ಮಂದಿ ತೊಂದರೆಗೊಳಗಾಗಿದ್ದು, 10,477 ಮನೆಗಳಿಗೆ ಹಾನಿಯಾಗಿದೆ
- ‘ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಸೋಮವಾರ ವ್ಯಕ್ತಿಯೊಬ್ಬರು ಪ್ರವಾಹದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ
- 5 ದಿನಗಳಲ್ಲಿ ರಾಜ್ಯದಾದ್ಯಂತ 93 ಭೂಕುಸಿತ ಘಟನೆಗಳು ವರದಿಯಾಗಿವೆ
- ಅರುಣಾಚಲ ಪ್ರದೇಶದಲ್ಲಿ ಮಳೆ ಸಂಬಂಧಿ ಅವಘಡಗಳಿಂದ ಒಟ್ಟು 11 ಮಂದಿ ಮೃತಪಟ್ಟಿದ್ದಾರೆ
- 23 ಜಿಲ್ಲೆಗಳ 156 ಗ್ರಾಮಗಳ ಜನರು ಪ್ರವಾಹದಿಂದ ತೊಂದರೆಗೆ ಸಿಲುಕಿದ್ದಾರೆ

ಪಾಕಿಸ್ತಾನದಿಂದ ‘ಬೆದರಿಕೆಯ ಸಂಕಥನ’: ಅಸ್ಸಾಂ ಸಿ.ಎಂ ಟೀಕೆ

ಹಿಮಂತ ಬಿಸ್ವಾ

ಗುವಾಹಟಿ(ಪಿಟಿಐ): ಭಾರತವು ಸಿಂಧೂ ಜಲ ಒಪ್ಪಂದವನ್ನು (ಐಡಬ್ಲ್ಯುಟಿ) ಅಮಾನತಿಲ್ಲಿಟ್ಟ ಬಳಿಕ, ‘ಭಾರತಕ್ಕೆ ಬ್ರಹ್ಮಪುತ್ರ ನೀರಿನ ಹರಿವನ್ನು ಚೀನಾ ತಡೆದರೆ ಏನಾಗಬಹುದು’ ಎಂಬ ಹೊಸ ‘ಬೆದರಿಕೆಯ ಸಂಕಥನ’ವನ್ನು ಪಾಕಿಸ್ತಾನ ಹುಟ್ಟುಹಾಕುತ್ತಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ಟೀಕಿಸಿದ್ದಾರೆ.

‘ಬ್ರಹ್ಮಪುತ್ರ ನೀರಿನ ಹರಿವನ್ನು ತಡೆಯುವ ಕುರಿತಂತೆ ಯಾವುದೇ ಘೋಷಣೆಯನ್ನು ಚೀನಾ ಮಾಡಿಲ್ಲ. ಒಂದು ವೇಳೆ ಇಂತಹ ಕ್ರಮಕ್ಕೆ ಚೀನಾ ಮುಂದಾದಲ್ಲಿ, ಅದು ಅಸ್ಸಾಂನಲ್ಲಿ ಪ್ರತಿ ವರ್ಷ ಸಂಭವಿಸುವ ಪ್ರವಾಹಗಳನ್ನು ದೂರ ಮಾಡಲು ನೆರವಾಗಲಿದೆ’ ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಈಶಾನ್ಯ ಭಾರತದಲ್ಲಿ ಬೀಳುವ ಮಳೆಯೇ ಬ್ರಹ್ಮಪುತ್ರ ನದಿಯಲ್ಲಿ ನೀರಿನ ಹರಿವು ಹೆಚ್ಚಳಕ್ಕೆ ಪ್ರಮುಖ ಕಾರಣ. ಬ್ರಹ್ಮಪುತ್ರದಲ್ಲಿ ಉಂಟಾಗುವ ಪ್ರವಾಹಕ್ಕೆ ಹಿಮಬಂಡೆಗಳ ಕರಗುವಿಕೆ ಹಾಗೂ ಟಿಬೆಟ್‌ನಲ್ಲಿ ಸುರಿಯುವ ಮಳೆಯ ಕೊಡುಗೆ ಶೇ 30–35 ಮಾತ್ರ’ ಎಂದಿದ್ದಾರೆ.

‘ಹಳೆಯದಾದ ಸಿಂಧೂ ಜಲ ಒಪ್ಪಂದವನ್ನು ಭಾರತ ಅಮಾನತಿನಲ್ಲಿಡುವ ನಿರ್ಧಾರ ತೆಗೆದುಕೊಂಡ ನಂತರ ಪಾಕಿಸ್ತಾನ ಇಂತಹ ಬೆದರಿಕೆಯ ಸಂಕಥನವನ್ನು ಸೃಷ್ಟಿಸುತ್ತಿದೆ. ಇಂತಹ ಸಂಕಥನಗಳಿಗೆ ನಾವು ಹೆದರಬೇಕಿಲ್ಲ. ಆದರೆ, ವಾಸ್ತವ ಸಂಗತಿಗಳು ಹಾಗೂ ಸ್ಪಷ್ಟತೆಯೊಂದಿಗೆ ಇಂತಹ ಮಿಥ್ಯೆಗಳನ್ನು ಬಯಲು ಮಾಡೋಣ’ ಎಂದಿದ್ದಾರೆ.

‘ಕಾಯ್ದೆ ರಚಿಸಿದರೆ ನ್ಯಾಯಾಂಗ ನಿಂದನೆಯಾಗದು’

ನವದೆಹಲಿ(ಪಿಟಿಐ): ಸಂಸತ್ ಅಥವಾ ರಾಜ್ಯ ವಿಧಾನಸಭೆ ಯಾವುದೇ ಕಾನೂನು ರಚಿಸಿದ ಸಂದರ್ಭದಲ್ಲಿ ಅದನ್ನು ನ್ಯಾಯಾಂಗ ನಿಂದನೆ ಎನ್ನಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕಿ ನಂದಿನಿ ಸುಂದರ್ ಹಾಗೂ ಇತರರು 2012ರಲ್ಲಿ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಗಳ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ. ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಹಾಗೂ ಸತೀಶಚಂದ್ರ ಶರ್ಮಾ ಅವರು ಇದ್ದ ಪೀಠ ಅರ್ಜಿಗಳ ವಿಚಾರಣೆ ನಡೆಸಿತು.

ನಕ್ಸಲರ ವಿರುದ್ಧದ ಹೋರಾಟಕ್ಕೆ ಬಲತುಂಬುವ ಉದ್ದೇಶದಿಂದ ಛತ್ತೀಸಗಢ ಸರ್ಕಾರವು 2011ರಲ್ಲಿ ಛತ್ತೀಸಗಢ ಮೀಸಲು ಸಶಸ್ತ್ರ ಪೊಲೀಸ್ ಪಡೆ ಕಾಯ್ದೆ ರೂಪಿಸಿತ್ತು. ಸರ್ಕಾರದ ಈ ನಡೆ ನ್ಯಾಯಾಂಗ ನಿಂದನೆ ಎಂದು ಆರೋಪಿಸಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು.

ಗೂಢಚರ್ಯೆ: ಸರ್ಕಾರಿ ನೌಕರನ ಬಂಧನ

ಜೈಪುರ (ಪಿಟಿಐ): ಪಾಕಿಸ್ತಾನದ ಪರವಾಗಿ ಗೂಢಚರ್ಯೆ ನಡೆಸುತ್ತಿದ್ದ ಆರೋಪದಡಿ ರಾಜಸ್ಥಾನದ ಸರ್ಕಾರಿ ನೌಕರರೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಜೈಸಲ್ಮೇರ್‌ನ ಜಿಲ್ಲಾ ಉದ್ಯೋಗ ಕಚೇರಿಯಲ್ಲಿ ಸಹಾಯಕ ಆಡಳಿತ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶಕೂರ್ ಖಾನ್ ಅವರು ರಹಸ್ಯ ಮಾಹಿತಿಗಳನ್ನು ಪಾಕಿಸ್ತಾನದ ಜೊತೆ ಹಂಚಿಕೊಳ್ಳುತ್ತಿದ್ದರು ಎಂದು ಪೊಲೀಸರು ಆರೋಪಿಸಿದ್ದಾರೆ.

‘ಶಕೂರ್ ಮೇಲೆ ಹಲವು ದಿನಗಳಿಂದ ನಿಗಾ ಇರಿಸಲಾಗಿತ್ತು. ಪಾಕಿಸ್ತಾನದ ಹೈಕಮಿಷನ್ ಅದರಲ್ಲೂ ಮುಖ್ಯವಾಗಿ ಹಾಸನ್-ಉರ್-ರಹೀಮ್ ಅಲಿಯಾಸ್ ಡ್ಯಾನಿಶ್ ಮತ್ತು ಸೋಹೈಲ್ ಕ್ವಾಮರ್ ಅವರ ಜೊತೆ ಶಕೂರ್ ನಿರಂತರವಾಗಿ ಸಂಪರ್ಕದಲ್ಲಿದ್ದುದು ಪತ್ತೆಯಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಅಮೆರಿಕದ ಕರೆ ಹಿಂದೆಯೇ ಮೋದಿ ಶರಣು –ರಾಹುಲ್

ಭೋಪಾಲ್ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನ ನಡುವಣ ಸೇನಾ ಸಂಘರ್ಷದ ಸಂದರ್ಭದಲ್ಲಿ ಅಮೆರಿಕದಿಂದ ದೂರವಾಣಿ ಕರೆ ಬಂದ ಹಿಂದೆಯೇ ಪ್ರಧಾನಿ ಮೋದಿ ಶರಣಾದರು’ ಎಂದು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ ಟೀಕಿಸಿದರು.

ಇಲ್ಲಿ ನಡೆದ ಪಕ್ಷದ ಸಮಾವೇಶದಲ್ಲಿ ಮಾತನಾಡಿದ ಅವರು, ‘1971ರ ಯುದ್ಧದ ಅವಧಿಯಲ್ಲಿ ಅಮೆರಿಕದಿಂದ ಒತ್ತಡ ಬಂದರೂ ಆಗಿನ ಪ್ರಧಾನಿ ಇಂದಿರಾಗಾಂಧಿ ಅವರು ಮಣಿದಿರಲಿಲ್ಲ’ ಎಂದರು. ‘ಈಗ ಟ್ರಂಪ್ ಅವರಿಂದ ಒಂದು ಕರೆ ಬಂತು. ಮೋದಿ ತಕ್ಷಣ ಶರಣಾದರು. ತಲೆಬಾಗುವುದೇ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ವ್ಯಕ್ತಿತ್ವವಾಗಿದೆ. 1971ರಲ್ಲಿ ಅಮೆರಿಕದ ಒತ್ತಡದ ನಡುವೆಯೂ ಭಾರತವು ಪಾಕಿಸ್ತಾನವನ್ನು ವಿಭಜಿಸಿತ್ತು’ ಎಂದು ಹೇಳಿದರು.

ಪಕ್ಷದ ಸಂಘಟನೆ ಸೃಜನ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸುಧಾ ಓದಿರಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ – 590018, ಕರ್ನಾಟಕ
ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.36/1027 ದಿನಾಂಕ: 02–06–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿಯಲ್ಲಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಫರ್ಮದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಜಿ. ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಪ್ರಾದೇಶಿಕ ಕಛೇರಿ ಕಲಬುರಗಿಯಲ್ಲಿ 160 KWP ಸೌರಶಕ್ತಿ ವ್ಯವಸ್ಥೆಯನ್ನು ಸ್ಥಾಪಿಸಿ ಒದಗಿಸುವ ಕಾಮಗಾರಿ ಮೊತ್ತ ರೂ. 1,61,01,695/– (ತೆರಿಗೆ ರಹಿತ)**. ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: 03–06–2025 ರಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾಸಾಸಂಇ/ಬೆಳಗಾವಿ/399/ಅಡ್ವಟೋರ್/2025–26 ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ಕರ್ನಾಟಕ ಸರ್ಕಾರ
ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ)
ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560052
ಸಂಖ್ಯೆ: ಜಿಪಿ/ಎನ್.ಸಿ.ಇ/06/ಇ–ಟೆಂಡರ್/25–26 ದಿನಾಂಕ: 02.06.2025
ಟೆಂಡರ್ ಪ್ರಕಟಣೆ
2025–26ನೇ ಸಾಲಿನ ಎನ್.ಸಿ.ಸಿ ಇಲಾಖೆಯಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಹೊರಗುತ್ತಿಗೆ/ಸೇವಾ ಒಪ್ಪಂದದ ಮೂಲಕ ಭರ್ತಿ ಮಾಡಲು ಕರ್ನಾಟಕ ಸರ್ಕಾರದ ಇ–ಟೆಂಡರ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ವಿವರಗಳು http://kppp.karnataka.gov.in ಎಂಬ ವೆಬ್‌ಸೈಟ್‌ನಲ್ಲಿ ದಿನಾಂಕ **02.06.2025** ರಿಂದ ಲಭ್ಯವಿದ್ದು, KPPP ಮೂಲಕ ಟೆಂಡರ್ ಸಲ್ಲಿಸಲು **16.06.2025** ಕೊನೆಯ ದಿನಾಂಕವಾಗಿರುತ್ತದೆ. **ಟೆಂಡರ್ ಸಂಖ್ಯೆ : NCC/2025-26/SE0004**.
ಸಹಿ/– (ಮಲ್ಲಿನಾಥ), ಆಡಳಿತಾಧಿಕಾರಿಗಳು
ವಾ.ಸಾ.ಸಂ.ಇ/ವಾಪ್ರ/1021/ಆಕಾರ್/2025–26 ಎನ್.ಸಿ.ಸಿ ಉಪಮಹಾನಿರ್ದೇಶಕರ ಪರವಾಗಿ

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500 028.
Corporate Identity Number (CIN) - L13100TG1958GOI001674
WORKS DIVISION
CONTRACTS DEPARTMENT
E-Tender Notice (Open Tender Enquiry for Domestic Bidding)
Tender Enquiry No. : HO(Works)/CONTRACTS/HPMM/KIOM/2025/1079/263
Dated 04/06/2025
NMDC Limited, A “NAVARATNA” Public Sector Company under Ministry of Steel, Govt. of India, invites **online bids** through **MSTC Portal** from experienced domestic bidders for the work of Hiring of Plant and Mining Machineries for Excavation of **258.00 LT** (+/- 20%) **of ROM** & **30 LT** (+/- 20%) of **Waste** for a period of **Three Years** i.e., @ **86 LT (+/- 20%) PER ANNUM OF ROM & 10 LT (+/- 20%) PER ANNUM OF WASTE** at KIOM.
The detailed NIT and Bid documents can be viewed and / or downloaded **from 04-06-2025 to 02-07-2025 from following website links;**
1. NMDC website – **https://nmdcportals.nmdc.co.in/nmdctender**
2. Central Public Procurement portal – **https://www.eprocure.gov.in/epublish/app** and search tender through tender enquiry number
3. MSTC Portal - portal **https://www.mstcecommerce.com/eprocn/**

For accessing the bid document from MSTC portal, bidders to visit MSTC website (use Microsoft Edge browser for compatibility) and search Tender Event No. **NMDC/Head Office/Contract/38/24-25/ET/748.**
The bidders are requested to submit their bids online through MSTC Portal. The details of submission of bid through online are given in NIT. The Bidders on regular basis are required to visit the NMDC's website / CPP Portal / MSTC Portal for corrigendum, if any, at a future date.
For further clarification, the following can be contacted -
on Thursday, the 12th June 2025 @ 2:00 p.m.

Venue: Seshadripuram Educational Trust Office, No. 27, Nagappa Street, Seshadripuram, Bengaluru – 560 020.

Eligible candidates should bring handwritten application along with resume, photos & copies of testimonials at the time of Interview.

N. R. Pandith Aradhya, President — Dr. Wooday P. Krishna, Honorary General Secretary

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

VIDYA NIKETAN SCHOOL, HEBBAL, Affiliated to I.C.S.E/ ISC /IGCSE Invites applications from well qualified experienced Science Graduate Lady teachers for the position of laboratory attendant in 1) Chemistry lab. 2) Physics lab Please apply immediately to: vidyaniketanresume @gmail.com Vidya Niketan School #30 Kempapura, Hebbal Bangalore-24. Ph:23331531 23531340

Engg/ Production Technical

Engineers Recruitment
Draftsmen: BE / Diploma Civil (3 to 4 years Experienced) - 6 Nos
Site Engineers: BE / Diploma Civil (Frehers / Experienced) - 10 Nos
Shiprama Consulting Engineers Pvt. Ltd. Bangalore.
E-mail id: shiprama888@gmail.com
Contact No: 9964339888 / 9742765165

SHIRKE®
JOIN WITH US

We are a Group of Companies with diversified activities, including specialised Civil Construction of Residential, Industrial, Commercial, Hospital, and Infrastructure projects, such as Roads, Bridges, Flyovers, etc. For **KARNATAKA** and **TAMIL NADU**, we are seeking career-minded, results-oriented individuals in the following disciplines.

Position	Qualification	Relevant Experience	Quantity
Planning Engineers	BE (Civil)	10 to 15 years	3
Quantity Surveyors	BE (Civil)	10 to 15 years	3
Asst. General Manager (MEP)	BE (Elect.)	20 +years	1
Estimate & Contracts	BE (Civil)	15 to 20 years	3
Public Health Engineers	BE (Civil) with Diploma in Public Health Engineering	10 to 15 years	2

Interested candidates should send their CVs to **bgs531@shirke.co.in** within seven (7) days, including the desired job designation and location in the subject line.

B.G. SHIRKE CONSTRUCTION TECH. PVT. LIMITED
#9, Bel-Air Drive, 3rd Floor, Next to HMT Bhavan Gangenahalli, Bengaluru - 560 032.
www.shirkegroup.com
Mob. No. 9945610012

General

WANTED IMMEDIATELY Lady RECEPTIONIST, TELE-CALLERS, CASHIERS Good Salary. Bannerghatta Road nearby candidates Call: 99000-54462

Hotel

WANTED IMMEDIATELY MANAGERS, COOKS, ASSISTANTS, CLEANERS, WAITERS, CASHIERS Very Good Salary. Gents/Ladies Walkin: UNCLE'S KITCHEN RESTAURANTS, UNCLE'S STAY HOMES Call: 99000-54462

Wanted

LADY TALLY OPERATOR, GENTS SALES MAN, English, Hindi, kannada. Salary 15-20k. Royal Interior, Exterior. HBR Layout. 8553431824.

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

Part-Time Jobs

BAND MASTER Required for School Students contact Kenmore School, Basavanagudi, Whatsapp 9901501185

ಕ್ಲಾಸಿಫೈಡ್ಸ್ ADMISSION CORNER

RV Institute of Management®
Approved by AICTE, Accredited by NAAC with 'A+' grade | Autonomous Institution Affiliated to Bengaluru City University
Go,change the world® — Autonomous Institution of Excellence

Register for **PGCET/KMAT 2025**
one week intensive coaching for **MBA** now & get admission in your dream institution..

Mode of coaching **Hybrid** (Offline in the Campus & Online platform - Zoom)
Date 13th June to 19th June 2025 (One Week)
Registration fee **Rs.500/-** (Includes certificate & study material)

Scan QR code below to register online & pay the fee

Placement Summary for 2022-2024	
Total no. of Companies	57
Total No. of Students in the college	180
Total No. of Students not opted / not eligible for Placements	12
Total No. of Students opted for Placements	168
Total No. of Students Placed	151
Percentage	90%
Highest package	11.5 L/A
Average package	6.27 L/A

SCAN ME
Time 9.00am to 2.00pm (on all days)
PGCET Code B252

Top 15 Rankers who join our institution from PGCET (within 100 Rank) will be given a merit scholarship of Rs 50,000/-.

Scholarship of Rs 50,000/- to Top 15 Academic Performers in MBA 1st year (above 7.0 CGPA)

Please call: 90089 60025 / 080 42540300, for more information
E-mail : rvimpgcet@gmail.com Website : www.rvim.edu.in

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

NOTICE
SALE OF FIRE AFFECTED STOCK, PLANT & MACHINERY & BUILDING SHED.
SALE ON AS IS WHERE IS BASIS OF FIRE AFFECTED STOCK, PLANT & MACHINERY & BUILDING SHED.
Sealed tenders are invited from buyers for disposal of fire affected stock, plant & machinery and building shed strictly on **'as is where is basis'.**
Inspection & Tender forms available at: -
M/s Plasmix Pvt. Ltd.
SY No. 107/2, Veerapura Village, Kasaba Hobali, Doddaballapura, Bangalore-561 203
Mr. Ram Sharma- 70860 14353
Inspection at site from **04.06.2025 to 12.06.2025.**
EMD Rs. 10 Lacs.
E-Auction will be conducted on https://jcbauction.procure247.com/home.
Tenders forms & DD to be submitted at: -
M/s Plasmix Pvt. Ltd.
SY No. 107/2, Veerapura Village, Kasaba Hobali, Doddaballapura, Bangalore-561 203
Mr. Ram Sharma – 70860 14353.
Tenders forms to be submitted before 5 pm on 12.06.2025.

PROPERTY CORNER

ನಿವೇಶನಗಳು ಮಾರಾಟಕ್ಕಿವೆ
LAND OWNER SHARE
ಕೆಹೆಚ್‌ಬಿ ಸೂರ್ಯ ಸಿಟಿ
ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಮತ್ತು ಬನ್ನೇರುಘಟ್ಟ ರಸ್ತೆ
ನೋಂದಣಿ ಮತ್ತು ನಿರ್ಮಾಣಕ್ಕೆ ಸಿದ್ಧವಾಗಿದೆ
ಎಸ್‌ಬಿಐ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ
ಸಂಪರ್ಕಿಸಿ: **7411554412**

REAL ESTATE SELLING

Sites

Koramangala

FOR SALE KORAMANGALA 40X60 East Facing 2 Adjacent Sites Clear Documents Suitable For Apartment & PG Building: 9845074355.

BUSINESS

Business to Business

Business

CORPORATE SALES TRAINING. Don't send them to field without giving Marketing skills. Call for a demonstration. Dr. Swamynaidu, MBA U.S.A. Vamshadhara Sales School, Bangalore. Mobile- 9342247637.

Business Offers

Finance

MSME LOANS Available for any startup company, any existing Companies avail this opportunity contact-7204995189

WANTED INVESTMENTS for Purchase of Lands in Bengaluru for Township Project. Contact 7760780309

PERSONAL

Change of Name

CHANGE OF NAME
I, **BAVANI KUMAR** W/o Aswath Kumar, Residing at # 115,2nd Main, 3rd Cross, Near Karnataka Bank, Jnanabharathi 2nd Stage, Bengaluru- 560056 have changed my name to **BAVANI** vide affidavit dated 17-02-2025 before notary H.R.Karunakara, Bengaluru. Henceforth I shall be called as **BAVANI** only

I, JINITHA Nair, D/o. T Pankajakshan Nair, Passport no. L4088353 dt. 06.08.2013, changed my name JINITHA NAIR to JINITHA T NAIR for all purposes vide affidavit no. IN-KA36064023528133X dt.20.05.2005.

DH Classifieds DECCAN HERALD
More value, more impact

Book your Educational Related Ads in DH All Karnataka + Prajavani Bengaluru City

EDUCATION

www.dhclassifieds.com
BOOK NOW

ಪ್ರಜಾವಾಣಿ
For more details contact:
+91 9731810277 | +91 9886213331
+91 9845114560 | +91 9900428036
080- 45557163 / 164
*Conditions apply

ಅದ್ಭುತ ಇನ್ನೊವೇಶನ್‌ಗಳ ರಚನೆ, ಇಂದು ಮತ್ತು ಎಂದೆಂದೂ.

75 Years of Prestige

ಸ್ವಚ್ಛ್ ಗ್ಯಾಸ್ ಸ್ಟವ್
ಲಿಫ್ಟ್ ಮತ್ತು ಲಾಕ್ ಮೆಕ್ಯಾನಿಸಮ್ ಇರುವ
ಭಾರತದ ಏಕಮಾತ್ರ ಗ್ಯಾಸ್ ಸ್ಟವ್

Prestige®

ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

ಸುಲಭ ಸ್ವಚ್ಛತೆಗಾಗಿ ಲಿಫ್ಟ್ ಅಂಡ್ ಲಾಕ್ ಮೆಕ್ಯಾನಿಸಮ್

2, 3 ಮತ್ತು 4 ಬರ್ನರ್‌ಗಳಲ್ಲಿ ಲಭ್ಯ

ಸ್ವಚ್ಛ್ ನಿಯೋ

ಸ್ವಚ್ಛ್ ಎಫಿಶಿಯಾ ಹಾಬ್



ಪ್ರೆಸ್ಟೀಜ್ ಏನನ್ನಾದರೂ ಯಾವುದಕ್ಕಾದರೂ ಎಕ್ಸ್‌ಚೇಂಜ್ ಆಫರ್*

25%-60% ರಿಯಾಯಿತಿ*

ಮೇ 1 ರಿಂದ ಜೂನ್ 30

ನಮ್ಮ ವಿನಿಮಯ ಸೇಲ್ ನಲ್ಲಿ ಹೊಸ ರೇಂಜ್ ನ ಕುಕ್ಕರ್‌ಗಳು, ಕುಕ್‌ವೇರ್ ಮತ್ತು ಕಿಚನ್ ಅಪ್ಲಾಯನ್ಸ್‌ಗಳಿಗೆ ಅಪ್ ಗ್ರೇಡ್ ಮಾಡಿಕೊಳ್ಳಿ

MADE WITH PRIDE IN INDIA | CUSTOMER CARE NO 080-60004411 | Scan to find Prestige Xclusive stores | Scan to avail exchange offer | Shop Online on shop.ttkprestige.com | ttk

*ಷರತ್ತುಗಳು ಅನ್ವಯಿಸುತ್ತವೆ. ಈ ಕೊಡುಗೆಗಳು ಕೇವಲ ಎಕ್ಸ್‌ಚೇಂಜ್‌ಗೆ ಮಾತ್ರ ಅನ್ವಯಿಸುತ್ತದೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಎಲ್ಲಾ ರಿಯಾಯಿತಿಗಳು ಸಂಬಂಧಿತ ಉತ್ಪನ್ನದ ವಿಭಾಗಕ್ಕೆ ಮಾತ್ರ ಅನ್ವಯವಾಗುತ್ತವೆ, ಉಲ್ಲೇಖಿಸಿದ ಉತ್ಪನ್ನದ ಮೇಲೆ ಅಲ್ಲ. ಆಯ್ದ ಡೀಲರ್ ಔಟ್‌ಲೆಟ್‌ಗಳಲ್ಲಿ ದಾಸ್ತಾನು ಇರುವವರೆಗೆ ಮಾತ್ರ. ಬದಲಾವಣೆ ಬೆಲೆಯು ಖರೀದಿಸಿದ ಸಾಮಾನು ಮತ್ತು ಹಿಂತಿರುಗಿಸಲಾಗುವ ಹಳೆಯ ಸಾಮಾನುಗಳನ್ನು ಅವಲಂಬಿಸಿರುತ್ತದೆ. ಯಾವುದೇ ಬ್ರ್ಯಾಂಡ್ ನ ಹಳೆಯ ಸಾಮಾನುಗಳನ್ನು ಸ್ವೀಕರಿಸಲಾಗುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಏನನ್ನಾದರೂ ಯಾವುದಕ್ಕಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯುಮಿನಿಯಮ್/ಸ್ಟೆಯನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯುಮಿನಿಯಮ್/ ಸ್ಟೆಯನ್‌ಲೆಸ್ ಸ್ಟೀಲ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರೆ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಬಾಡಿ, ಮೋಟರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್‌ಗಳನ್ನು ಒಳಗೊಂಡಿರಬೇಕು), ಇಂಡಕ್ಷನ್ ಕುಕ್‌ಟಾಪ್‌ಗಳು, ರೈಸ್ ಕುಕ್ಕರ್‌ಗಳು, ಚಿಮಣಿಗಳು, ಹಾಬ್‌ಟಾಪ್‌ಗಳು, ವೆಟ್ ಗ್ರೈಂಡರ್‌ಗಳು, ಒಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆ, ಮೈಕ್ರೊವೇವ್ ಅವೆನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ /ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ ಅಥವಾ ನಮ್ಮ ವೆಬ್‌ಸೈಟ್ https://shop.ttkprestige.com/anything-for-anything-offer ಗೆ ಭೇಟಿ ನೀಡಿ.

Prestige® Xclusive

Outer Ring Road: Hennur COFO, Ph: 7204250679; **Tumkur Rd. 8th Mile, T.Dasarahalli COFO**, Ph: 9972541116; **Koramangala COFO**, Ph:9663515616; **Tumkur COFO**, Ph:9164853121; **Bull Temple Rd, Ph:** 26609012; **Malleswaram, Ph:**9448282470; Rt Nagar Main Rd, Ph:8970150672; **Wheeler Rd, Ph:**25803080; **Vijayanagar, Ph:** 9739004750; Hsr Bda Complex, **Ph:**25726991; **Marathahalli, Ph:**42197088; **Sanjaynagar, Ph:**41258300; **Banaswadi Ring Rd, Ph:**41634115; **Jayanagar, Ph:** 9845066549; **Rajarajeshwaringr, Ph:** 28603540, 9008418800; **Kengeri Stl Town, Ph:** 28485296; **Rajajinagar, Ph:** 41731224; **B.T.M.Layout, Ph:** 40939168; **Sarjapur Rd Kaikondralli, Ph:**42038646; **Konankunte Cross, Ph: 8618207299**; **Nagharabhavi Bda Complx**, Ph:9739004750; **Begur, Ph:**8970366139; **Vidyaranayapura, Ph:** 9845518824; **Wilson Garden, Ph:** 9480010720; **Brookefield, Ph: 9980097982**, **Ramamurthynagar, Ph:** 08042049545; **Kr Puram, Ph:** 8861494277; **Cambridge Layout, Ph:**42074468; **Kaggadaspura, Ph:**7019776742; **Kammanahalli, Ph:** 41606044; **Whitefield, Ph:**40907273; **Chandapura, Ph:**9036190725; **Dommasandra: Ph: 9480360656**; **Hesarghatta Road, Ph:** 28370400; **Uttarahalli, Ph:**9986879095; **Anjananagr Magadi Rd, Ph:**23281206; **Kadugodi,** 8123042234; **Singasandra, Ph:**8050608042; **Yelahanka Newtown, Ph:** 8668034376; **Mahalakshmi Lyt, Ph:** 23572233; **Jpnagar 7th Phase, Puttenahalli,** Ph: 41465855; **Kumaraswamy Lyt, Ph:** 08026664702; **Chandra Lyt,** Ph:9739004750; **Channasandra, Ph:8660024504**; **Sheshadripuram,** 8711090976, **8970150672**; **Attibele, Ph:**9341221525; **Jigani,** Ph:8762069852; **Sarjapura Town, Ph:** 9611423555; **Hosa Rd Junction, Ph:**9845597099; **Mathikere,** Ph:6366636592; **Basaveshwaranagar, Ph:** 9739591008;**Thalagatapura, Ph:** 9964116888; **Hegganahalli, Ph:**28360289; **Gottigere, Ph:**8431241099; **Ullal, Ph:**9686646565; **Jayanagar 9th Block, Ph:**9945446335; **Nelamangala, Ph:**9632356627; **Kolar, Ph:** 9738882584; **Channapatna, Ph:**9686661294; **Madhugiri, Ph:**9611552805; **Gubbi: Ph:** 9035195120, 8095459040; **Vijayabank Colony, Bilekahalli,** 8970366139; **Whitefield,** 08040907273; **Malur** 9845028859, **Kumbalagodu** 9845014860, **Devanahalli, Ph:**9845737576; **Thanisandra, Ph:**9686340159; **Hulimavu,** 8904654433; **Electronic City 1st Phase,** Ph:9449455556; **Anekal, Ph:**8660070202; **Tiptur, Ph:**9164688773; **Bhyadarahalli, Ph:**9845982089; **Hennur Bande, Ph:**9980097982; **Tc Palya Road, Ph:**9148775224; **Chikkajaala COFO, Ph:**6360371839; **Mutthanallur, Ph:**8970736606; **Madnayakhalli, Ph:**8951515939; **Hoskote, Ph:**9845028859; **Sira, Ph:**8310660400; **Gouribidnur, Ph:**9731114656; **Kadubeesanahalli, Ph:**80508 37853; **Dodballapura, Ph:**9035349755, 9972435545. **For Franchisee Enquiry Contact:** Ayush Kumar Sahu, **Ph:**9993010283; Raveendra, **Ph:** 9844197664; Hareesh, **Ph:**8050501513; Asif, **Ph:**8861691770.

Also Available At : Jayanagar: Sarathy, **Ph:**41210047; Vishaals, **Ph:**08022447285; Royal Mart, **Ph:**8790311104; Anjana Superstores, **Ph:**41301836; Kitchenmart, Ph:26652885; Aravinda, Ph:41301989; **Bankcolony**:Vardhaman Ind, Ph:22428300; **Banashankari:** Varada Glass & Crky, Ph:9980949316; Patel Agn, Ph:26714285; Patel Kitchen Apl, Ph:9079061706;Chamundi Ind, Ph:26712633; **Bilekhalli:**Sree Pooja Ha, Ph:9036919084; **Bommanahalli:**Sri Durga Ha, Ph:9900674018;**Chamarjpet:**Vadirajstores, Ph:41517646; **Devarachikkanahalli:** Sapna Ha, Ph:9738732036; **Electronic City:** Dream Mart Hm, Ph:9148934858; **Hosa Rd:**Maharaja Kw, Ph:9036400829; **Hosakota:** Dream Mart Hm, Ph:9964744480; **Isro Layout;** Bhumi Kitchen, Ph:9916830850; **Jp Nagar**:Surya Kitchen World, Ph:9449762988; **Kanakapura Rd**: Royal Mart, Ph:28425777; **Padmanabnagar:**Royalmart, Ph:9886088993; **Uthrahalli:**Royalmart, Ph:26394114;Rme Super Market, Ph:9964228208; **Mysore Road:**The Karnataka Metal Industry, Ph:9449342727; **Ayyappanagar:**Top Mart Sm, Ph:7204448111; **Babusapalya**: Karnataka Ha, Ph:8105754544; **Basaveshwar nagar:** Bigday Hm, Ph:9972517344; Mahaveer Ha, Ph:9844173501; Modern Colln, Ph:23583440; Aadhinath Kitchen Gal, Ph:41220555; **Gayathri Ngr:**J.K.Steel, Ph:23320853; **Giri Nagar**: Vidya Ent, Ph:9449988650; Matahji Ha, Ph: 7019385120; **Bagalgunte**: Royal Mart, Ph:9538000072; **Chandra Layout:** Rajguru Kw, Ph:9513034351; Pavan Kw, Ph:8618028319; **Ganganagar:** Salemindustries, Ph:41284470; Patel Ind, Ph:8050899296; **Hesargatta Main Rd:** Royal Mart, Ph:28398200; **Horamavu:**Mamtha Ha, Ph:8880050050; **Hrbr Layout:**Bhavani Ha, Ph:9845916164; **Harlurur**: Vinayaka Ha, Ph:7760531454; **Katriguppe:**Mk Metal Mart, Ph:9035779199; **Kr Puram:**Srm Elect, Ph:9845445748; Pooja Ele And Mob, Ph:9738850503; **Boodhigere Rd**: New Royal Fresh, Ph:9538038885; **Kamanhalli:** Ramdev Steel, Ph:7259575732; Hm Traders, Ph:9964797616; **Kasavanahalli:** Mathaji Ha, Ph:8880796036; **Kunadanahalli:** New Prakash Ha, Ph:7090444111; **Kengeri**:Falcon Hm, Ph:7829999066; **Koramangala:**Sowbhagya Traders, Ph:7337733887; **Kmr Swy Layout**: Patel Ha, Ph:8951979665; **Laggere:**Top Mart, Ph:9110246047; **Lnpura:** Arihanth Ent, Ph:7899633338; **Malleshwaram:** Deviprasad Ha, Ph:23564536; Bright Novelty, Ph:23343505; **Mathikere:**M.Bhawarlals Inc, Ph:41724740; Maharaja Agency, Ph:41278050; **Kadugodi:** Little Wonder, Ph:9961224224; **Madiwala:**Surya Ha, Ph:9449635332; **Malleshpalya:** Bajrang Ha, Ph: 9449526463; New Bheru Ha, Ph:9448680738; Ramdev Ha, Ph:9035175860; Sri Bhagawathi Ha, Ph:9590575427; Maa Ambe Ha, Ph:8884198322; **Magadiroad:**Royal Mart, Ph:23584498; **Annaporneshwari Nagar:** Deepak Ha, Ph:9148912736; **M S Palya:**Royal Mart, Ph:8147014079; **B Narayanpura:**Yellow Mart, Ph:7676726487; **Rajajinagar:**Mahalakshmi Metal House, Ph:23355994; Rathna Sales, Ph:23375566; Dhanalakshmi Kitchen World, Ph:41285801;Jayalakshmi Kw, Ph:9844755146; R S Mart, Ph:6363602929; Pooja Stl Cent, Ph:23327014; **Rr Nagar:** Milan Ha, Ph:28605619; Pavan Kg, Ph:9739207043; **Tavarakere:**Mytri Mart Sm, Ph:7996598838; **T C Palya:** Rhk Super Mkt, Ph:9731668995; Big Day Sm, Ph:8867604818; Karnataka Ha, Ph:8105754544;**Tipsandra:**Pawar Ha, Ph:9980517021; Milan Ha, Ph:9986196375; Ramdev Ha, Ph:7406901545; **Ulsoor:**Aishwaryapranam Ha, Ph:9902788429; Pranam Steel Center, Ph:9448053781;**Udaynagar:** Mother India, Ph:9036189765; **Venkatapura:**Pooja Kg, Ph:9900426176; **Vijayanagar:**Vijaylaxmi Kw, Ph:9845022284; Mahendras, Ph:23141126; Maruthi Ha, Ph:8904689155; **Vidyarnapura:**Praksh Kw, Ph:8050620877; Mahalakshmi Steel House, Ph:9663375159; All Seasons Hm, Ph:9946728736; **Whitefield:** Rolla Hm, Ph:9148003448; Loyalcity, Ph:7892565797; Royal Mart, Ph:7079734574;**Yelahanka:**Royalmart, Ph:41705760; Mutha Electricals, Ph:22971920; Sai Kitchen World, Ph: 9632811797; **Btm Layout**: Patel Agencies, Ph:9482853401;**Tumkur:** N.R Metal Agency, Ph:0816-2275003; Kavitha Kitchen Ware, Ph:9538537166;Surya Metal Store, Ph:9731351050;Tumkur Trade Centre, Ph:9901432287;Dharshan Ha, Ph:9632132567;Sudha Ha, Ph:9964011253; **Gubbi**:Keerthi Gas Stove, Ph:9686004169;**Tiptur**: Sri Sai Electronics, Ph:8861432166; Srirama Ent, Ph:9880362018; Kumar And Kumar, Ph:9141609900;**Turuvekere**:Sri Sai Electronics, Ph:8861432166; **Pavgada:**Shivanagere Ha, Ph:9880768236; Meenakshi Appl, Ph:9880360326; **Sira**:Swamy Ent, Ph:9741561491;Lakshmi Sreel, Ph:9060434807; Mallikarjuna Ha, Ph:8123206930; **Madhugiri**:Akshya Ha, Ph:9141786066; Vinayaka Store, Ph:9900219291; **Kunigal:**Karnataka Metal Stores, Ph:9448550390; New Karnataka Steel Centre, Ph:08132221548; Karnataka Ha, Ph:8892197645; **Kgf**: Prakash Ha, Ph:9845113454; **Bangarpet**: Kumar Stores, Ph:9845935240; **Gauribidanur:**Sri Raju Ha, Ph:9448249527; Dhighvijaya Elec, Ph:7204757456; **Kanakapura:**Sri Kabbalamma Ha, Ph:9880835508; **Kolar**:Reddy Ele, Ph:9844472531; Rakesh Ele, Ph:9880634555; Naveenprakash Ha, Ph:9844997787; **Malur:**Srm Elec, Ph:9845445748; Reddy Ele, Ph:9844435121; **Vijayapura**: Rmcity, Ph:9845164990; Reddy Ele, Ph:9900336061; **Devanahalli**: New Sowmya Ele, Ph:9141335210; **Chintamani:**Great India Ele, Ph:9742963551; Lavanya Stores, Ph:9242498294.

Available At: Pai INTERNATIONAL

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಮ್ಮ ದೇಶಕ್ಕೆ ಶಾಪ ಎಂದರೆ ಸೋಮಾರಿತನ.

–ಸರ್ ಎಂ. ವಿಶ್ವೇಶ್ವರಯ್ಯ

ತಂಬಾಕು ಬಳಕೆಗೆ ಮೂಗುದಾರ ರಾಜ್ಯ ಸರ್ಕಾರದಿಂದ ದಿಟ್ಟ ಹೆಜ್ಜೆ

ಸಾರ್ವಜನಿಕ ಆರೋಗ್ಯ ರಕ್ಷಣೆ ಕುರಿತ ತನ್ನ ಬದ್ಧತೆಯನ್ನು ಢಾಳಾಗಿ ಪ್ರದರ್ಶಿಸಿರುವ ರಾಜ್ಯ ಸರ್ಕಾರವು ತಂಬಾಕು ಬಳಕೆಯ ಮೇಲೆ ಮತ್ತಷ್ಟು ನಿರ್ಬಂಧ ವಿಧಿಸಲು ಅನುವಾಗಿಸುವ 'ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ತಿದ್ದುಪಡಿ ಕಾಯ್ದೆ-2024' ಜಾರಿಗೊಳಿಸಿ ಅಧಿಸೂಚನೆ ಹೊರಡಿಸಿದೆ. ವಿಧಾನ ಮಂಡಲದಲ್ಲಿ ಅಂಗೀಕರಿಸಲಾಗಿದ್ದ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೇ 23ರಂದು ಅಂಕಿತ ಹಾಕಿದ್ದಾರೆ. ರಾಷ್ಟ್ರಪತಿಯವರಿಂದ ಒಪ್ಪಿಗೆ ಸಿಕ್ಕ ಬೆನ್ನಹಿಂದೆಯೇ ಅಧಿಸೂಚನೆ ಹೊರಬಿದ್ದಿದೆ. ಕಾಯ್ದೆಯಲ್ಲಿ ಹಲವು ಸುಧಾರಣೆಗಳನ್ನು ಮಾಡಲಾಗಿದ್ದು, ತಂಬಾಕು ಬಳಕೆಯಿಂದ ಆಗುವ ದುಷ್ಪರಿಣಾಮಗಳನ್ನು ಇದರಿಂದ ತಗ್ಗಿಸಲು ಸಾಧ್ಯವಾಗಲಿದೆ ಎಂದು ಆಶಿಸಲಾಗಿದೆ.

21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಬೀಡಿ- ಸಿಗರೇಟು ಮತ್ತು ತಂಬಾಕಿನ ಉತ್ಪನ್ನಗಳ ಮಾರಾಟವನ್ನು ಈ ಕಾಯ್ದೆಯು ನಿಷೇಧಿಸುತ್ತದೆ. ಅಪ್ರಾಪ್ತ ವಯಸ್ಸಿನವರಿಗೆ ತಂಬಾಕು ಉತ್ಪನ್ನ ಮಾರಾಟ ಮಾಡುವವರಿಗೆ ದಂಡದ ಪ್ರಮಾಣವನ್ನು ₹200ರಿಂದ ₹1,000ಕ್ಕೆ ಹೆಚ್ಚಿಸಲಾಗಿದೆ. ಹದಿಹರೆಯದವರಿಗೆ ತಂಬಾಕು ಉತ್ಪನ್ನ ಮಾರಾಟ ಮಾಡುವ ಹಾವಳಿಯನ್ನು ತಗ್ಗಿಸುವಲ್ಲಿ ಇದೊಂದು ಮಹತ್ವದ ಹೆಜ್ಜೆ. ಉಪಾಹಾರ ಗೃಹ, ಪಬ್, ಬಾರ್ ಅಥವಾ ರೆಸ್ಟೊರೆಂಟ್‌ಗಳಲ್ಲಿ ಹುಕ್ಕಾ ಸೇವನೆಗೆ ಅವಕಾಶ ನೀಡುವುದನ್ನೂ ಈ ಕಾಯ್ದೆ ನಿಷೇಧಿಸುತ್ತದೆ. ಈ ನಿಯಮ ಉಲ್ಲಂಘಿಸಿದವರಿಗೆ ₹50 ಸಾವಿರದಿಂದ ₹1 ಲಕ್ಷದವರೆಗೆ ದಂಡ ಮತ್ತು ಒಂದು ವರ್ಷದಿಂದ ಮೂರು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ಮಾತ್ರವಲ್ಲ, ತಂಬಾಕು-ಗುಟ್ಕಾ ಉಗುಳುವುದನ್ನು ಸಹ ನಿಷೇಧಿಸಲಾಗಿದೆ. ದೊಡ್ಡ ಹೋಟೆಲ್‌ಗಳು, ರೆಸ್ಟೊರೆಂಟ್‌ಗಳು, ವಿಮಾನ ನಿಲ್ದಾಣಗಳ 'ಧೂಮ ವಲಯ'ಗಳಲ್ಲಿ ಮಾತ್ರ ತಂಬಾಕು ಉತ್ಪನ್ನಗಳ ಬಳಕೆಗೆ ಅವಕಾಶ ನೀಡಲಾಗಿದೆ. ಸಂದೇಶ ತುಂಬಾ ಸ್ಪಷ್ಟ. 'ತಂಬಾಕಿನ ಬಳಕೆಯನ್ನು ಸಾಧ್ಯವಾದಷ್ಟು ತಗ್ಗಿಸಬೇಕು ಮತ್ತು ಯಾರೋ ಮಾಡುವ ಧೂಮಪಾನದಿಂದ ಅಮಾಯಕರು ತೊಂದರೆ ಅನುಭವಿಸುವಂತೆ ಆಗಬಾರದು' ಎನ್ನುವುದೇ ಆ ಸಂದೇಶ.

ಕಾಯ್ದೆಯ ಸಮರ್ಪಕ ಅನುಷ್ಠಾನವನ್ನು ಸರ್ಕಾರವು ಪ್ರತಿ ಹಂತದಲ್ಲೂ ಖಾತರಿಪಡಿಸಿಕೊಳ್ಳಬೇಕು

ಸಿಗರೇಟಿಗಿಂತ ಹುಕ್ಕಾ ಸೇವನೆ ಸುರಕ್ಷಿತ ಎನ್ನುವ ತಪ್ಪು ಕಲ್ಪನೆ ಬೇರೂರಿರುವಾಗ ಹುಕ್ಕಾ ಬಾರ್‌ಗಳ ಮೇಲೆ ನಿಷೇಧ ಹೇರಿರುವುದು ಮಹತ್ವದ ಹೆಜ್ಜೆ. ವಾಸ್ತವವಾಗಿ ಸಿಗರೇಟು ಸೇವನೆ ಮಾಡುವವರಿಗಿಂತ ಹುಕ್ಕಾ ಸೇವನೆ ಮಾಡುವವರು ಹೆಚ್ಚಿನ ಪ್ರಮಾಣದಲ್ಲಿ ವಿಷಕಾರಿ ರಾಸಾಯನಿಕಗಳ ಅಪಾಯಕ್ಕೆ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಾರೆ. ಅಂಥವರು ನಿಕೋಟಿನ್‌ನ ವ್ಯಸನಕ್ಕೆ ಒಳಗಾಗುವ ಅಪಾಯ ಹೆಚ್ಚಿದೆ ಮತ್ತು ಶ್ವಾಸಕೋಶದ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗೂ ಅವರು ತುತ್ತಾಗುತ್ತಾರೆ ಎಂದು ವೈದ್ಯಲೋಕ ಎಚ್ಚರಿಸುತ್ತಲೇ ಇದೆ. ಹುಕ್ಕಾವನ್ನು ಸಾಮೂಹಿಕವಾಗಿ ಸೇವನೆ ಮಾಡುವುದರಿಂದ ಕಾಯಿಲೆಯ ಸೋಂಕು ವ್ಯಕ್ತಿಯಿಂದ ವ್ಯಕ್ತಿಗೆ ಹರಡುವ ಸಾಧ್ಯತೆ ಕೂಡ ಹೆಚ್ಚಾಗಿರುತ್ತದೆ. ಹೀಗಾಗಿ, ಆರೋಗ್ಯದ ಅವಘಡಗಳಿಗೆ ಕಾರಣವಾಗುವ ಹುಕ್ಕಾ ಬಾರ್‌ಗಳ ಮೇಲೆ ನಿಷೇಧ ವಿಧಿಸುವ ರಾಜ್ಯ ಸರ್ಕಾರದ ನಿರ್ಧಾರ ಸಾರ್ವಜನಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವಂಥದ್ದಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಕಾಯಿಲೆ ಬರದಂತೆ ಮಾಡುವ ದಿಸೆಯಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳುತ್ತಿರುವುದು ಸ್ತುತ್ಯರ್ಹ. ತಂಬಾಕು ಬಳಕೆ ನಿಯಂತ್ರಣ ಮಾತ್ರವಲ್ಲ, ಆಹಾರದಲ್ಲಿ ಕೃತಕ ಬಣ್ಣಗಳ ಬಳಕೆಗೆ ನಿಷೇಧ, ಕಳಪೆ ಗುಣಮಟ್ಟದ ನೀರು ಹಾಗೂ ಪನೀರ್ ಮಾರಾಟದ ಮೇಲೆ ನಿರ್ಬಂಧದಂತಹ ಕ್ರಮಗಳಿಗೂ ಅವರು ಕಾರಣರಾಗಿದ್ದಾರೆ. ಕಾಯ್ದೆ ಎಷ್ಟೇ ಬಿಗುವಾಗಿದ್ದರೂ ಅದರ ಯಶಸ್ಸು, ಆ ಕಾಯ್ದೆಯನ್ನು ಹೇಗೆ ಜಾರಿಗೊಳಿಸಲಾಗುತ್ತದೆ ಎಂಬುದರ ಮೇಲೆ ಅವಲಂಬನೆಯಾಗಿದೆ. ಪ್ರತ್ಯೇಕ 'ಧೂಮ ವಲಯ'ದ ವ್ಯವಸ್ಥೆ ಮಾಡಬೇಕೆಂಬ ನಿಯಮವನ್ನು ಬಹುಪಾಲು ಹೋಟೆಲ್‌ಗಳಲ್ಲಿ ಅನುಷ್ಠಾನಕ್ಕೆ ತರಲಾಗಿಲ್ಲ. ಎಲ್ಲೆಂದರಲ್ಲಿ ಸಿಗರೇಟುಗಳ ಮಾರಾಟವೂ ಎಗ್ಗಿಲ್ಲದೆ ನಡೆದಿದೆ. ಇದು, ಕಾಯ್ದೆಯೇ ಇಲ್ಲದಿರುವ ಸಮಸ್ಯೆ ಅಲ್ಲ, ಕಾಯ್ದೆ ಅನುಷ್ಠಾನದ ಹಂತದಲ್ಲಿ ಆಗಿರುವ ಲೋಪಗಳ ಸಮಸ್ಯೆ. ಹರಿತಗೊಂಡ ಕಾಯ್ದೆಯು ಸಮರ್ಪಕವಾಗಿ ಅನುಷ್ಠಾನಗೊಂಡಿದೆ ಎಂಬುದನ್ನು ಸರ್ಕಾರವು ಪ್ರತಿ ಹಂತದಲ್ಲೂ ಖಾತರಿ ಪಡಿಸಿಕೊಳ್ಳಬೇಕು. ತಪ್ಪು ಮಾಡಿದವರನ್ನು ದಂಡನೆಗೆ ಗುರಿ ಮಾಡುವ ಕೆಲಸ ನಿರಂತರವಾಗಿ ನಡೆಯಬೇಕು. ಸಮುದಾಯದ ಹಂತದಲ್ಲಿ, ಶಾಲಾ- ಕಾಲೇಜುಗಳಲ್ಲಿ ಜಾಗೃತಿ ಕಾರ್ಯಾಗಾರಗಳನ್ನೂ ಹಮ್ಮಿಕೊಳ್ಳಬೇಕು. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರ ಇಚ್ಛಾಶಕ್ತಿ ತೋರಬೇಕು.

ದಿನದ ಟ್ವೀಟ್

ನೈಜ ಚಿತ್ರಣ...

ಉತ್ತರ ಪ್ರದೇಶದ ಅಮೇಠಿ ಬಳಿ ತೈಲ ಸಾಗಿಸುತ್ತಿದ್ದ ಟ್ಯಾಂಕರ್‌ವೊಂದು ಕೆಸರಿನಲ್ಲಿ ಉರುಳಿ ಬಿದ್ದಿತ್ತು. ಅಲ್ಲಿನ ಸ್ಥಳೀಯರು ಚಾಲಕನಿಗೆ ಸಹಾಯ ಮಾಡುವ ಬದಲು ಕೆಸರಿನಲ್ಲಿ ತೇಲುತ್ತಿದ್ದ ತೈಲವನ್ನು ಸಂಗ್ರಹಿಸಲು ಮುಗಿಬಿದ್ದಿದ್ದರು. ಇದು ಭಾರತದ ಆರ್ಥಿಕತೆಯ ನೈಜ ಚಿತ್ರಣ. ಕಾಗದದಲ್ಲಷ್ಟೇ ಈಗ ಭಾರತವು ಜಪಾನ್ ಅನ್ನು ಹಿಂದಿಕ್ಕಿ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ.

ತರುಣ್ ಗೌತಮ್

ಕಿಡಿನುಡಿ

ನಟ ಕಮಲ್ ಹಾಸನ್ ಅವರು ಇತಿಹಾಸ, ಭಾಷಾಶಾಸ್ತ್ರ ತಜ್ಞರಲ್ಲ. ಕನ್ನಡ ಭಾಷೆ ಬಗ್ಗೆ ಸಂವೇದನಾರಹಿತವಾಗಿ ಮಾತನಾಡಿರುವುದು ಖಂಡನಾರ್ಹ. ಅಭಿಪ್ರಾಯ ಮಂಡನೆ ಭರದಲ್ಲಿ ಕೋಟ್ಯಂತರ ಕನ್ನಡಿಗರ ಭಾವನೆಗಳಿಗೆ ಗಾಸಿ ಮಾಡಿದ್ದಾರೆ. ಗೌರವಯುತವಾಗಿ ಕನ್ನಡಿಗರ ಕ್ಷಮೆ ಕೇಳಲೇಬೇಕು. ಕ್ಷಮೆ ಕೇಳುವುದರಿಂದ ಯಾರೂ ಸಣ್ಣವರಾಗುವುದಿಲ್ಲ. ದುರಹಂಕಾರದಿಂದ ಯಾರೂ ದೊಡ್ಡವರಾಗುವುದಿಲ್ಲ.

ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಭಾನುವಾರ, 4-6-2000

• **ವಂಚನೆ: ನಟ ಅಶೋಕ್ ಪತ್ನಿ ಜೈಲಿಗೆ**

ಬೆಂಗಳೂರು, ಜೂನ್ 3– ಚಲನಚಿತ್ರ ನಟ ಹಾಗೂ ಚಿತ್ರ ಕಾರ್ಮಿಕ ಸಂಘಟನೆಯ ಮುಖಂಡ ಅಶೋಕ್ ಅವರ ಪತ್ನಿ ಎ.ಸಿ. ಕಲ್ಪನಾ ಅವರನ್ನು ವಂಚನೆ ಆರೋಪದ ಮೇಲೆ ಆರ್.ಟಿ. ನಗರ ಪೊಲೀಸರು ಇಂದು ಬಂಧಿಸಿ ಜೈಲಿಗೆ ಕಳುಹಿಸಿದರು.

1995ರಲ್ಲಿ ಆರ್.ಟಿ. ನಗರದ ಜಯ ಎಂಬುವರಿಂದ 19.30 ಲಕ್ಷ ರೂಪಾಯಿ ಸಾಲ ಪಡೆದು, ವಂಚಿಸಿದ್ದ ಆರೋಪದ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟ್ ಕಲ್ಪನಾ ಅವರನ್ನು ಬಂಧಿಸುವಂತೆ ಆದೇಶ ನೀಡಿತ್ತು. ಕಳೆದ ಫೆಬ್ರುವರಿ 11ರಂದು ಹೈಕೋರ್ಟ್ ಆದೇಶ ನೀಡಿ, 3 ತಿಂಗಳೊಳಗೆ ಹಣ ವಾಪಸ್ ಮಾಡುವಂತೆ ಕಲ್ಪನಾ ಅವರಿಗೆ ಸೂಚಿಸಿತ್ತು. 3 ತಿಂಗಳಾದರೂ ಹಣ ಕೊಡದಿದ್ದಾಗ ಅಂತಿಮವಾಗಿ ಇಂದು ಬೆಳಿಗ್ಗೆ ಆರ್.ಟಿ. ನಗರ ಪೊಲೀಸರು ಬನಶಂಕರಿಯಲ್ಲಿರುವ ಕಲ್ಪನಾ ಮನೆಗೆ ತೆರಳಿ ಅವರನ್ನು ಬಂಧಿಸಿ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದರು.

• **ಟಿಟಾನಸ್ ರೋಗಕ್ಕೆ ನಗರದಲ್ಲಿ ಪರಿಹಾರ**

ಬೆಂಗಳೂರು, ಜೂನ್ 3– ನಗರದ ಹಿಂದೂಸ್ತಾನ್ ವಿಮಾನ ನಿಲ್ದಾಣದ ಬಳಿ ಇರುವ ವೈಮಾನಿಕ ವೈದ್ಯಕೀಯ ಇನ್‌ಸ್ಟಿಟ್ಯೂಟ್‌ನಲ್ಲಿ ಇರುವ ಗ್ಯಾಂಗ್ರೀನ್, ಟಿಟಾನಸ್ ಚಿಕಿತ್ಸಾ ಸೌಲಭ್ಯವನ್ನು ಸಾರ್ವಜನಿಕರೂ ಪಡೆಯಬಹುದು. ಅಪಘಾತಗಳಲ್ಲಿ ಏಟು ಬಿದ್ದು ರಕ್ತ ವಿಷಪೂರಿತವಾದಾಗ ಗ್ಯಾಂಗ್ರೀನ್ ಮತ್ತು ಟಿಟಾನಸ್ ರೋಗ ಉಂಟಾಗುತ್ತದೆ. ಇದರ ಸೌಲಭ್ಯ ಪಡೆಯಬಯಸುವವರು ನಗರದಲ್ಲಿನ ವಾಯು ಪಡೆ ಆಸ್ಪತ್ರೆಯಲ್ಲಿ ವಿಚಾರಿಸಬೇಕು.

50 ವರ್ಷಗಳ ಹಿಂದೆ

ಬುಧವಾರ, 4-6-1975

• **ಭೂ ಒಡೆತನದ ಜೊತೆ ಕೃಷಿ ಸೌಲಭ್ಯ: ರಾಜ್ಯದ ಯೋಜನೆ**

ಬೆಂಗಳೂರು, ಜೂನ್ 3– ಭೂ ಒಡೆಯರು ಆಗಲಿರುವ ಹರಿಜನ, ಗಿರಿಜನರಿಗೆ ಭೂಮಿಯೊಂದು ಫಲಪ್ರದವಾದ ಆಧಾರವಾಗುವಂತೆ ಮಾಡಲು ಕರ್ನಾಟಕ ಸರ್ಕಾರ ಸೂಚನೆಯೊಂದನ್ನು ಕೇಂದ್ರದ ಮುಂದಿಟ್ಟಿದೆ.

ಕಂದಾಯ ಮಂತ್ರಿ ಎನ್. ಹುಚ್ಚಮಾಸ್ತಿ ಗೌಡ ಅವರು ಮುಂದಿಟ್ಟಿರುವ ಬೇಡಿಕೆಗೆ ಕೇಂದ್ರದ ಒಪ್ಪಿಗೆ ದೊರೆಯುವ ಸಂಭವವಿದ್ದು, ಒಪ್ಪಿಗೆ ದೊರೆತಾಗ ಹರಿಜನ, ಗಿರಿಜನರು ಭೂಮಿಯ ಜೊತೆಗೆ ಅದನ್ನು ನಿರ್ವಹಿಸಲು ಅಗತ್ಯವಾದ ಸಾಧನಗಳನ್ನೂ ಪಡೆಯಲಿದ್ದಾರೆ.

ಭೂ ಸುಧಾರಣೆ ಶಾಸನದಂತೆ ಭೂಮಿ ನೀಡಿಕೆಯು ಭೂಹೀನರ ಬಹಳ ಕಾಲದ ಒಂದು ನಿರೀಕ್ಷೆಯನ್ನು ಈಡೇರಿಸುತ್ತದೆ. ಒಡೆತನದ ಆಸೆಯನ್ನು ಪೂರೈಸುತ್ತದೆ. ಭಾವನಾತ್ಮಕವಾಗಿ ಇದು ಒಂದು ದೊಡ್ಡ ಸಾಧನೆಯಾದರೂ ಆರ್ಥಿಕವಾಗಿ ಸಹಾಯವಾಗಬೇಕಾದರೆ ಕೇವಲ ಭೂಮಿಯಷ್ಟೇ ಸಾಲದೆಂಬುದು ಹುಚ್ಚಮಾಸ್ತಿ ಗೌಡರ ಮತ.

• **ನಾರಾಯಣನ್ ಸ್ವದೇಶಕ್ಕೆ**

ನವದೆಹಲಿ, ಜೂನ್ 3 (ಪಿಟಿಐ)– ಭಾರತದ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರು ತಮ್ಮ ಒಂದು ವಾರದ ಚೀನಾ ಪ್ರವಾಸದ ಬಳಿಕ ಇಂದು ಸ್ವದೇಶಕ್ಕೆ ಹಿಂದಿರುಗಿದರು.

ನಾರಾಯಣನ್ ಮತ್ತು ಅವರ ಪತ್ನಿ ಉಷಾ ಅವರನ್ನು ಇಂದಿರಾ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಉಪ ರಾಷ್ಟ್ರಪತಿ ಕೃಷ್ಣಕಾಂತ್, ಕೇಂದ್ರ ಸಚಿವರಾದ ಎಲ್.ಕೆ. ಅಡ್ವಾಣಿ, ಜಗ್‌ಮೋಹನ್ ಮತ್ತು ಹಿರಿಯ ಅಧಿಕಾರಿಗಳು ಸ್ವಾಗತಿಸಿದರು.

ಆಪರೇಷನ್ ಸಿಂಧೂರ: ಯಶಸ್ಸಿನೊಂದಿಗೆ ಕಲಿಯಬೇಕಾದ ಪಾಠಗಳೂ ಇವೆ

ಪಹಲ್ಗಾಮ್: ಪ್ರಶ್ನೆ ಮತ್ತು ಪಾಠ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಮೇಲೆ ಭಯೋತ್ಪಾದಕ ದಾಳಿ ನಡೆದು ತಿಂಗಳು ಕಳೆದಿದೆ. ಆ ದಾಳಿಗೆ ಪ್ರತಿಯಾಗಿ ಭಾರತ ರಾಜತಾಂತ್ರಿಕ ಕ್ರಮಗಳನ್ನೂ 'ಆಪರೇಷನ್ ಸಿಂಧೂರ'ದ ಮೂಲಕ ಸೇನಾ ಕಾರ್ಯಾಚರಣೆಯನ್ನೂ ನಡೆಸಿದ್ದೂ ಆಗಿದೆ. ಇಷ್ಟಾದರೂ ಒಂದಿಷ್ಟು ಅಸ್ಪಷ್ಟತೆ ಹಾಗೂ ಪ್ರಶ್ನೆಗಳು ಉಳಿದುಹೋಗಿವೆ.

ಸಾಮಾನ್ಯವಾಗಿ ಸೇನಾ ಕಾರ್ಯಾಚರಣೆಯ ಕುರಿತು ಸಂಪೂರ್ಣ ಮಾಹಿತಿ ಹೊರಬೀಳಲು ಒಂದಷ್ಟು ಸಮಯ ಬೇಕು. ಯಾವ ಹಂತದಲ್ಲಿ ಯಾವ ಮಾಹಿತಿಯನ್ನು ಎಷ್ಟು ಬಹಿರಂಗಗೊಳಿಸಬೇಕು, ಅದರಿಂದ ಆಗುವ ಪರಿಣಾಮ ಏನು ಎಂದು ಪರಿಶೀಲಿಸಲಾಗುತ್ತದೆ. ಸೇನೆಯ ಆತ್ಮಸ್ಥೈರ್ಯ ಹಾಗೂ ದೇಶದ ಭದ್ರತೆಗೆ ಹಾನಿಯಾಗದು, ಸರ್ಕಾರದ ಪ್ರತಿಷ್ಠೆ ಮುಕ್ಕಾಗದು ಎಂದಾಗ ಮಾತ್ರ ಅಂತಹ ಮಾಹಿತಿಗಳು ತಕ್ಷಣಕ್ಕೆ ಹೊರಬೀಳುತ್ತವೆ. ಉಳಿದ ಸತ್ಯಗಳು ಗೋಪ್ಯ ಕಡತಗಳಲ್ಲಿ ಅಡಗಿ ಕೂರುತ್ತವೆ.

'ಆಪರೇಷನ್ ಸಿಂಧೂರ'ದ ಮೂಲಕ ಭಾರತದ ಸೇನೆ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ಪ್ರಚುರಪಡಿಸಿದೆ. ಭಾರತ ಕುರಿತ ತನ್ನ ವಿದೇಶಾಂಗ ನೀತಿಯ ಅಲಿಖಿತ ನಿಯಮವಾಗಿ ಭಯೋತ್ಪಾದನೆಯನ್ನು ಅಳವಡಿಸಿಕೊಂಡಿರುವ ಪಾಕಿಸ್ತಾನಕ್ಕೆ ತಕ್ಕ ಉತ್ತರವನ್ನು ಹಾಗೂ ಎಚ್ಚರಿಕೆಯನ್ನು ಭಾರತದ ಸೇನೆ ನೀಡಿದೆ. ದೇಶೀಯ ಶಸ್ತ್ರಾಸ್ತ್ರಗಳ ಬಲ ಹಾಗೂ ಕಾರ್ಯಕ್ಷಮತೆ ಈ ಕಾರ್ಯಾಚರಣೆಯ ಮೂಲಕ ಸಾಬೀತಾಗಿದೆ. ಆದರೆ, ನಾಲ್ಕು ದಿನಗಳ ಉದ್ವಿಗ್ನ ಸ್ಥಿತಿ 'ಕದನ ವಿರಾಮ'ದ ಮೂಲಕ ಶಮನವಾದಾಗ, ಅದು ಅನೇಕ ಪ್ರಶ್ನೆಗಳನ್ನು ಕೂಡ ಹುಟ್ಟುಹಾಕಿದೆ!

ಮೇ 10ರ ಶನಿವಾರ ಸಂಜೆಯ ಹೊತ್ತಿಗೆ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ 'ಅಮೆರಿಕದ ಮಧ್ಯಸ್ಥಿಕೆಯಲ್ಲಿ ರಾತ್ರಿಯಿಡೀ ನಡೆದ ಸುದೀರ್ಘ ಮಾತುಕತೆಯ ನಂತರ, ಭಾರತ ಮತ್ತು ಪಾಕಿಸ್ತಾನವು ಪೂರ್ಣ ಮತ್ತು ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ' ಎಂದು ಪ್ರಕಟಿಸಿದರು. ನಂತರ ಭಾರತ ಸರ್ಕಾರ ಕದನ ವಿರಾಮದ ನಿರ್ಧಾರವನ್ನು ಅನುಮೋದಿಸಿತು. ಪಾಕಿಸ್ತಾನದ ಸೇನಾ ವರಿಷ್ಠರ ಮೂಲಕ ಈ ಪ್ರಸ್ತಾಪ ಭಾರತದ ಸೇನಾ ವರಿಷ್ಠರಿಗೆ ಬಂತು. ಕದನ ವಿರಾಮ ಈ ಸಂಜೆಯಿಂದಲೇ ಜಾರಿಗೆ ಬರಲಿದೆ ಎಂದು ತಿಳಿಸಲಾಯಿತು. ಅತ್ತ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಏನನ್ನೋ ಗೆದ್ದ ಹುಮ್ಮಸ್ಸಿನಲ್ಲಿಯೇ ಅಮೆರಿಕಕ್ಕೆ ಧನ್ಯವಾದ ಅರ್ಪಿಸಿದರು!

ಮೇ 12ರಂದು ದೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಾರತೀಯ ಸೇನೆಯ ಪರಾಕ್ರಮ ಹಾಗೂ 'ಆಪರೇಷನ್ ಸಿಂಧೂರ'ದ ಯಶಸ್ಸಿನ ಕುರಿತು ಮಾತನಾಡಿದರು. 'ಉಗ್ರವಾದಕ್ಕೆ ನವಭಾರತದ ಉತ್ತರ ಆಪರೇಷನ್ ಸಿಂಧೂರ ಆಗಿರಲಿದೆ. ಯಾವುದೇ ಭಯೋತ್ಪಾದನೆಯ ದಾಳಿಯನ್ನು ಯುದ್ಧ ಎಂದು ಪರಿಗಣಿಸಲಾಗುತ್ತದೆ' ಎಂದರು. ಆದರೆ, ಕದನ ವಿರಾಮದಲ್ಲಿ ಅಮೆರಿಕದ ಪಾತ್ರವಿತ್ತೇ ಎಂಬುದರ ಕುರಿತು ಹೇಳಲಿಲ್ಲ. ವಿದೇಶಾಂಗ ಸಚಿವರ ಹೇಳಿಕೆಯೂ ನೇರವಾಗಿ ಇರಲಿಲ್ಲ.

'ಆಪರೇಷನ್ ಸಿಂಧೂರ' ಆರಂಭವಾದಾಗ, 'ಭಾರತ- ಪಾಕಿಸ್ತಾನದ ಸಂಘರ್ಷಕ್ಕೂ ನಮಗೂ ಸಂಬಂಧವಿಲ್ಲ' (None of our business) ಎಂದಿದ್ದ ಅಮೆರಿಕ, ನಂತರ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿರಬಹುದು ಎಂದೇ ಭಾವಿಸಿದರೂ ಅದಕ್ಕೆ ಕಾರಣವಿತ್ತೇ? ಪಾಕಿಸ್ತಾನ ಮತ್ತು ಚೀನಾದ ಸಂಬಂಧ ಈಗಾಗಲೇ ಒಂದು ಹಂತಕ್ಕೆ ಗಟ್ಟಿಗೊಂಡಿದೆ. ಚೀನಾದ 'ಬೆಲ್ಟ್ ಆ್ಯಂಡ್ ರೋಡ್' ಯೋಜನೆ ಅದಕ್ಕೆ ಮುಖ್ಯ ಕಾರಣ ಎನಿಸಿದರೂ ಭಾರತವನ್ನು ಕಟ್ಟಿಹಾಕಲು, ಪಾಕಿಸ್ತಾನವನ್ನು ಬಳಸಬಹುದು ಎನ್ನುವ ದುರುದ್ದೇಶವೂ ಚೀನಾಕ್ಕಿದೆ. ಅಂತೆಯೇ ಒಂದು ಕಾಲದಲ್ಲಿ ತನ್ನ ಅಣತಿಗೆ ಕುಣಿಯುತ್ತಿದ್ದ ಪಾಕಿಸ್ತಾನ, ಇದೀಗ ಚೀನಾದ ಕೈದಾಳ ಆಗುವುದು ಅಮೆರಿಕಕ್ಕೆ ಬೇಕಿಲ್ಲ. ತಾನು ಪಾಕಿಸ್ತಾನವನ್ನು ಇತರ ದೇಶಗಳ ವಿರುದ್ಧ ಬಳಸಿದಂತೆಯೇ, ಚೀನಾ ಕೂಡ ಪಾಕಿಸ್ತಾವನ್ನು ತನ್ನ ವಿರುದ್ಧವೇ ಬಳಸಬಹುದು ಎಂಬ ದಿಗಿಲು ಕೂಡ ಅಮೆರಿಕಕ್ಕೆ ಇದ್ದಂತಿದೆ. ಪಾಕಿಸ್ತಾನವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಅಮೆರಿಕ ಎಲ್ಲ ರೀತಿಯ ಪ್ರಯತ್ನವನ್ನೂ ಮಾಡುತ್ತಿದೆ.

'ಭಾರತ ಮತ್ತು ಪಾಕಿಸ್ತಾನ ನಡುವಿನ ಕದನವನ್ನು ನಾನು ಬಗೆಹರಿಸಿದೆ' ಎಂದು ಟ್ರಂಪ್ ಪದೇ ಪದೇ ಹೇಳುತ್ತಿರುವುದಕ್ಕೆ ಮತ್ತೊಂದು ಮಗ್ಗುಲು ಕೂಡ ಇರಬಹುದು. ಉಕ್ರೇನ್ ಮತ್ತು ರಷ್ಯಾದ ಯುದ್ಧವನ್ನು ತಾನು ಅಧಿಕಾರಕ್ಕೆ ಬಂದ ಮರುದಿನವೇ ಕೊನೆಗಾಣಿಸುವುದಾಗಿ ಟ್ರಂಪ್ ಹೇಳಿದ್ದರು. ಇದೀಗ ಅಧಿಕಾರಕ್ಕೆ ಬಂದು ನೂರು ದಿನಗಳು ಕಳೆದರೂ ಉಕ್ರೇನ್ ಅಧ್ಯಕ್ಷರ ವಿರುದ್ಧ ಚತುರೋಪಾಯ ಬಳಸಿದರೂ ಆ ಯುದ್ಧಕ್ಕೆ ಕೊನೆ ಹಾಡಲು ಸಾಧ್ಯವಾಗಿಲ್ಲ. ಆ ಕಾರಣದಿಂದ ಅಮೆರಿಕದ ಒಳಗೆ ಮತ್ತು ಜಾಗತಿಕ ಚಾವಡಿಯಲ್ಲಿ ಟ್ರಂಪ್ ಅವರಿಗೆ ಮುಖಭಂಗವಾಗಿದೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ಅವರು ತಮ್ಮ ವಿರುದ್ಧದ ಟೀಕೆಗೆ ಗುರಾಣಿಯಾಗಿ ಹಿಡಿಯುತ್ತಿದ್ದಾರೆ.

ಕಳೆದ ವಾರ (ಮೇ 30) ಟ್ರಂಪ್ ಮತ್ತೊಮ್ಮೆ ಈ ಕುರಿತು ಮಾತನಾಡಿದ್ದಾರೆ. ಅಮೆರಿಕದ ಅಧ್ಯಕ್ಷ ಸ್ಥಾನದಂತಹ ಪ್ರತಿಷ್ಠಿತ, ಜವಾಬ್ದಾರಿಯುತ ಹುದ್ದೆಯಲ್ಲಿರುವ ಟ್ರಂಪ್ ಹೀಗೆ ಪದೇ ಪದೇ ತಮ್ಮ ಪಾತ್ರ ಇರದ ವಿಷಯದ ಕುರಿತು ಮಾತನಾಡಿಯಾರೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಒಂದೊಮ್ಮೆ ಅಮೆರಿಕದ ಮಧ್ಯಸ್ಥಿಕೆಯಲ್ಲಿ ಕದನ ವಿರಾಮದ ನಿಲುವು ತೆಗೆದುಕೊಳ್ಳಲಾಯಿತು ಎಂದರೆ, ಉಭಯ ದೇಶಗಳ ಸರ್ಕಾರದ ಹಂತದಲ್ಲಿ ಈ ಚರ್ಚೆ ನಡೆದಿದೆ ಎಂದಾಗುತ್ತದೆ. ಯಾವುದೇ ಷರತ್ತು ಇಲ್ಲದೇ ಕದನ ವಿರಾಮಕ್ಕೆ ಕೂಡಲೇ ಒಪ್ಪಿಕೊಳ್ಳುವ ಜರೂರು ಭಾರತಕ್ಕೆ ಇತ್ತೇ ಎಂಬ ಉಪಪ್ರಶ್ನೆಯೂ ಮೊಳೆಯುತ್ತದೆ.

ಟ್ರಂಪ್ 'ವ್ಯಾಪಾರ ಮತ್ತು ಸುಂಕದ ಅಸ್ತ್ರವನ್ನು ಈ ಸಂದರ್ಭದಲ್ಲಿ ನಾನು ಬಳಸಿದೆ' ಎನ್ನುತ್ತಿದ್ದಾರೆ. ಭಾರತ ಯುದ್ಧಮೋಹಿ ರಾಷ್ಟ್ರವಲ್ಲದ ಕಾರಣ, ಆರ್ಥಿಕತೆಯನ್ನು ಬಲಪಡಿಸುವುದು ಮತ್ತು ಅಭಿವೃದ್ಧಿಯತ್ತ ದಾಪುಗಾಲು ಹಾಕುವುದು ಭಾರತದ ಆದ್ಯತೆಯಾದ ಕಾರಣ, ಅಮೆರಿಕದ ಸಲಹೆಯನ್ನು ಪುರಸ್ಕರಿಸಿರುವ ಸಾಧ್ಯತೆ ಇದೆ. ಜೊತೆಗೆ ಉಕ್ರೇನ್- ರಷ್ಯಾ ನಡುವಿನ ಸಂಘರ್ಷವನ್ನು ಬಗೆಹರಿಸುವಲ್ಲಿ ಪ್ರಮುಖ ಪಾತ್ರವಹಿಸುವ ಕೆಲಸವನ್ನು ಭಾರತ ಈ ಹಿಂದೆ ಮಾಡಿತ್ತು. ರಷ್ಯಾದ ಪುಟಿನ್ ಅವರ ಎದುರು 'ಇದು ಯುದ್ಧಕ್ಕೆ ಕಾಲವಲ್ಲ' ಎಂಬ ಮಾತನ್ನು ಪ್ರಧಾನಿ ಮೋದಿ ಆಡಿದ್ದರು. ಮೋದಿ ಅವರ ಮಾತನ್ನು ಜಗತ್ತು ಪ್ರಶಂಸಿಸಿತ್ತು. ಪಾಕಿಸ್ತಾನದ ವಿಷಯದಲ್ಲಿ ಆ ಮಾತು ಭಾರತದ ಕೈ ಕಟ್ಟಿತೇ?

ಬಿಡಿ, ಪಾಕಿಸ್ತಾನ ತನ್ನ ಮೀಸೆ ಮಣ್ಣಾಗಿಲ್ಲ ಎಂದೇ ವಾದಿಸುತ್ತಿದೆ. ಪಾಕಿಸ್ತಾನದ ಸೇನಾ ವರಿಷ್ಠ ಮುನೀರ್ ಅವರಿಗೆ ಬಡ್ತಿ ನೀಡಿ ಫೀಲ್ಡ್ ಮಾರ್ಷಲ್ ಹುದ್ದೆಗೆ ಏರಿಸಲಾಗಿದೆ. 'ಆಪರೇಷನ್ ಸಿಂಧೂರ'ವನ್ನು ಭಾರತದ ಆಕ್ರಮಣ ಎಂದು ಬಿಂಬಿಸಲು ಪಾಕಿಸ್ತಾನ ಪ್ರಯಾಸ ಪಡುತ್ತಿದೆ. ಜಾಗತಿಕ ವೇದಿಕೆಗಳಲ್ಲಿ ಭಯೋತ್ಪಾದನೆಯ ಪೋಷಣೆ ಸೇರಿದಂತೆ ಪಾಕಿಸ್ತಾನಕ್ಕೆ ಮುಜುಗರ ಆಗುವ ವಿಷಯ ಬಂದಾಗಲೆಲ್ಲಾ ಚೀನಾ ಅದಕ್ಕೆ ಬೆಂಬಲವಾಗಿ ನಿಲ್ಲುತ್ತಿದೆ. ಹಾಗಾಗಿ, ಪಾಕಿಸ್ತಾನದ ನೈಜ ಬಣ್ಣವನ್ನು ಇತರ ದೇಶಗಳಿಗೆ ಮನವರಿಕೆ ಮಾಡಿಕೊಡುವ ಕೆಲಸಕ್ಕೆ ಭಾರತ ಚಾಲನೆ ಕೊಟ್ಟಿದೆ.

'ಕ್ವಾಡ್' ಸದಸ್ಯ ರಾಷ್ಟ್ರವಾಗಿದ್ದರೂ ಪಾಕಿಸ್ತಾನ ಹಾಗೂ ಚೀನಾದ ಜೊತೆಗೆ ಸಂಘರ್ಷ ಏರ್ಪಟ್ಟರೆ ಭಾರತದ ಬೆನ್ನಿಗೆ ಅಮೆರಿಕ ನಿಲ್ಲುವುದಿಲ್ಲ ಎನ್ನುವುದು ಇದೀಗ ಸಾಬೀತಾಗಿದೆ. ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸಬೇಕಿದೆ. ಇಂದಿನ ಯುದ್ಧಗಳಲ್ಲಿ ಆಧುನಿಕ ತಂತ್ರಜ್ಞಾನ ಪ್ರಮುಖ ಪಾತ್ರವಹಿಸುತ್ತದೆ. ಯುದ್ಧೋಪಕರಣಗಳಲ್ಲಿ ತಾಂತ್ರಿಕ ಶ್ರೇಷ್ಠತೆಯನ್ನು ಸಾಧಿಸಿದ ರಾಷ್ಟ್ರ ಮೇಲುಗೈ ಸಾಧಿಸುತ್ತದೆ. ಇದೀಗ ಭಾರತ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 1.9ರಷ್ಟನ್ನು ರಕ್ಷಣಾ ವೆಚ್ಚವಾಗಿ ಬಳಸುತ್ತಿದೆ. ಇದನ್ನು ಹೆಚ್ಚಿಸುವ ಅಗತ್ಯವಿದೆ.

'ಆಪರೇಷನ್ ಸಿಂಧೂರ' ಕುರಿತ ಇನ್ನಷ್ಟು ಮಾಹಿತಿ, ಕದನ ವಿರಾಮಕ್ಕೆ ಪೂರಕವಾಗಿ ತೆರೆಯ ಹಿಂದೆ ನಡೆದ ಮಾತುಕತೆಯ ವಿವರಗಳು ತಕ್ಷಣಕ್ಕೆ ಅಲ್ಲದಿದ್ದರೂ ಮುಂದಿನ ದಿನಗಳಲ್ಲಿ ಬಹಿರಂಗಗೊಳ್ಳಬಹುದು. ಸೇನೆಯ ಸಾಮರ್ಥ್ಯ ಕುರಿತು ಹೆಮ್ಮೆ ಇಟ್ಟುಕೊಳ್ಳುವುದರ ಜೊತೆಗೆ, ಭದ್ರತೆಯಲ್ಲಿ ಆದ ಲೋಪ ಹಾಗೂ ಸೇನಾ ಕಾರ್ಯಾಚರಣೆಯ ವಿಷಯದಲ್ಲಿ ಕಲಿಯಬೇಕಾದ ಪಾಠಗಳ ಕುರಿತು ನಾವು ಗಂಭೀರವಾಗಿ ಯೋಚಿಸಬೇಕಿದೆ.

ಚುರುಮುರಿ

ಕ್ಲಾಸ್‌ರೂಮ್ ಕೆಮ್ಮಿಸ್ಟ್ರಿ

• ಮಣ್ಣೆ ರಾಜು

'ಕ್ಲಾಸಿನಲ್ಲಿ ನಿಮ್ಮ ಮಗಳು ಕೆಮ್ಮಿದಳು, ಸೀನಿದಳು, ಮನೆಗೆ ಕರೆದುಕೊಂಡು ಹೋಗಿ' ಎಂದು ಸ್ಕೂಲ್ ಟೀಚರ್ ಫೋನ್ ಮಾಡಿದ್ದರು. ಶಂಕ್ರಿ ಮಗಳನ್ನು ಮನೆಗೆ ಕರೆತಂದಿದ್ದ.

'ಕೊರೊನಾ ಹಿನ್ನೆಲೆಯಲ್ಲಿ ಮಕ್ಕಳಲ್ಲಿ ಜ್ವರ, ಕೆಮ್ಮು, ಸೀನು ಕಂಡುಬಂದರೆ ರಜೆ ಕೊಟ್ಟು ಮನೆಗೆ ಕಳುಹಿಸಿ' ಎಂದು ಶಾಲೆಗಳಿಗೆ ಸರ್ಕಾರ ಸೂಚನೆ ನೀಡಿದ್ದರ ಪರಿಣಾಮ ಇದು.

ಮಧ್ಯಾಹ್ನ ಸುಮಿಗೆ ಟೀಚರ್ ಫೋನ್ ಮಾಡಿ, 'ನಿಮ್ಮ ಮಗಳ ಕೆಮ್ಮು, ಸೀನು ಹೇಗಿದೆ? ಡಾಕ್ಟರ್‌ಗೆ ತೋರಿಸಿದ್ರಾ?' ಎಂದು ಕೇಳಿದರು.

'ಇಲ್ಲಾ ಟೀಚರ್, ಮನೆಗೆ ಬಂದಾಗಿನಿಂದ ಮಗಳು ಒಮ್ಮೆಯೂ ಕೆಮ್ಮಲಿಲ್ಲ, ಸೀನಲಿಲ್ಲ' ಅಂದಳು ಸುಮಿ.

'ನೆಗ್ಲೆಕ್ಟ್ ಮಾಡ್ಬೇಡಿ, ಹೆಲ್ತ್ ಚೆಕಪ್ ಮಾಡಿಸಿ. ಹುಷಾರಾದ ಮೇಲೆ ವರ್ಕ್ ಫ್ರಮ್ ಹೋಮ್ ಮಾಡಿಸಿ'.

'ವರ್ಕ್ ಫ್ರಮ್ ಹೋಮಾ?!'

'ಕೆಮ್ಮು-ಸೀನುಗಳ ಸೀಜನ್‌ನಲ್ಲಿ ಹೋಮ್ ವರ್ಕ್ ಅನ್ನು ವರ್ಕ್ ಫ್ರಮ್ ಹೋಮ್ ಅಂತೀವಿ... ನಿಮ್ಮ ಮಗಳು ಸೈನ್ಸ್ ಕ್ಲಾಸ್‌ನಲ್ಲಿ ಮೂರು ಬಾರಿ ಸೀನಿದಳು, ಆರು ಬಾರಿ ಕೆಮ್ಮಿದಳು. ಇಂಗ್ಲಿಷ್ ಕ್ಲಾಸ್‌ನಲ್ಲಿ ನಾಲ್ಕು ಸಲ ಕೆಮ್ಮಿದಳು. ಮ್ಯಾಥ್ಸ್ ಕ್ಲಾಸ್‌ನಲ್ಲಿ ಎಂಟು ಸಲ ಕೆಮ್ಮಿದಳು' ಮಗಳ ಕ್ಲಾಸ್ ರೂಮ್ ಕೆಮ್ಮಿಸ್ಟ್ರಿ ಹೇಳಿದರು ಟೀಚರ್.

'ಬೇರೆ ಮಕ್ಕಳು ಕೆಮ್ಮಲಿಲ್ವಾ?'

'ಕೆಮ್ಮಿದ, ಸೀನಿದ ಹನ್ನೆರಡು ಮಕ್ಕಳಿಗೆ ರಜೆ ಕೊಟ್ಟು ಮನೆಗೆ ಕಳಿಸಿದ್ವಿ. ಆ ಮಕ್ಕಳನ್ನು ಮನೆಗೆ ಕಳಿಸಿದ ಮೇಲೆ ಕ್ಲಾಸಿನ ಎಲ್ಲಾ ಮಕ್ಕಳೂ ಸೀನಲು, ಕೆಮ್ಮಲು ಶುರು ಮಾಡಿದರು. ನಮಗೆ ಗಾಬರಿಯಾಯ್ತು. ಹೆಚ್ಚೆಂಗೆ ಕಂಪ್ಲೇಂಟ್ ಮಾಡಿದ್ವಿ?'

'ಹೆಚ್ಚೆಂ ಏನಂದ್ರು?'

'ನಾಳೆ ಸ್ಕೂಲಿಗೆ ಡಾಕ್ಟರನ್ನು ಕರೆಸಿ ಕೆಮ್ಮುವ, ಸೀನುವ ಮಕ್ಕಳಿಗೆ ಇಂಜೆಕ್ಷನ್ ಹಾಕಿಸೋಣ ಅಂದರು. ಹಾಗೆ ಹೇಳಿದ ನಂತರ ಯಾವ ಮಕ್ಕಳೂ ಸೀನಲೂ ಇಲ್ಲ, ಕೆಮ್ಮಲೂ ಇಲ್ಲ...' ಎಂದು ಟೀಚರ್ ಫೋನ್ ಕಟ್ ಮಾಡಿದರು.

ಸಂಗತ

'ಎದೆಯ ಹಣತೆ'ಯಲ್ಲಿ ಮೂಡಲಿ ಸಾಮರಸ್ಯ

'ಜಾತಿ ಎಲ್ಲಿದೆ?' ಎಂದು ಹೇಳುವುದು ಆತ್ಮವಂಚನೆಯ ಮಾತು

• ರೇವಣ್ಣ ಎಂ.ಜಿ.

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಹಿರಿಯ ವಿದ್ಯಾರ್ಥಿಯೊಬ್ಬರು ಎರಡು ದಿನಗಳ ಹಿಂದೆ ಕರೆ ಮಾಡಿದರು. 'ಬಾನು ಮುಷ್ತಾಕ್ ಅವರ 'ಎದೆಯ ಹಣತೆ' (ಹಾರ್ಟ್ ಲ್ಯಾಂಪ್) ಕೃತಿಗೇನೊ ಬುಕರ್ ಬಂತು. ಆದರೆ, ನಮ್ಮಗಳ ಎದೆಯ ಹಣತೆಯಲ್ಲಿ ಸಮಾನತೆ, ಸಾಮರಸ್ಯದ ಬೆಳಕು ಮೂಡುವುದು ಯಾವಾಗ?' ಎಂದು ಪ್ರಶ್ನಿಸಿದರು. 'ಪರಿಶಿಷ್ಟರಿಗೆ ಜಾತಿ ಹೇಳಿಕೊಳ್ಳಲು ಇಕ್ಕಟ್ಟು' ಎಂಬ ಪತ್ರಿಕಾ ವರದಿಯನ್ನು ನೋಡಿ ಈ ರೀತಿ ಕೇಳುತ್ತಿದ್ದಾರೆಂದು ತಕ್ಷಣ ಅರ್ಥವಾಯಿತು.

ಮೀಸಲಾತಿ ಕಸಿಯಲು ಕೆಲವರು ಪ್ರಯತ್ನಿಸುತ್ತಿದ್ದಾರೆ ಎಂಬ ಆರೋಪಗಳ ನಡುವೆ ಗಣತಿಯಲ್ಲಿ ಜಾತಿ ಹೇಳಿಕೊಳ್ಳಲಾಗದೆ ಪರಿಶಿಷ್ಟರು ಸಂಕಟದಿಂದ ಕುಸಿಯುವಂತಾಗಿದೆ ಎಂಬ ಸುದ್ದಿ, ಮಾನವ ಸಮಾಜ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿಲ್ಲ ಎನ್ನುವುದಕ್ಕೆ ಸಾಕ್ಷಿಯಂತಿದೆ. ಸಂವಿಧಾನ ಜಾರಿಯಾಗಿ 75 ವರ್ಷಗಳೇ ಕಳೆದಿದ್ದರೂ ವ್ಯಕ್ತಿ ಗೌರವ, ಭ್ರಾತೃತ್ವದ ಆಶಯಗಳು ಕನ್ನಡಿಯೊಳಗಿನ ಗಂಟಿನಂತೆ ಭಾಸವಾಗುತ್ತಿವೆ.

ವಿದ್ಯಾವಂತರೇ ಹೆಚ್ಚಿರುವ ನಗರಗಳಲ್ಲಿಯೂ ಮನೆಗಳನ್ನು ಬಾಡಿಗೆಗೆ ಕೊಡಲು ಜಾತಿಯನ್ನು ಕೇಳುವ ಸಂಗತಿ, ವಿಜ್ಞಾನ- ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಿರುವ ಮಾನವನ ಮತಿ ಅಧೋಗತಿಯತ್ತ ಸಾಗುತ್ತಿರುವ ಸೂಚಕದಂತಿದೆ. ಜಾತೀಯತೆಯ ಪ್ರದರ್ಶನ ಬಹಿರಂಗವಾಗಿ ಕಡಿಮೆಯಾಗಿದ್ದರೂ ಜನರ ಮನೆ- ಮನಗಳಲ್ಲಿ ಇನ್ನೂ ಜೀವಂತವಾಗಿರುವುದರ ಬಗ್ಗೆ ನಾಗರಿಕ ಸಮಾಜ ಚಿಂತಿಸಬೇಕಿದೆ.

ಸಾಂಸ್ಕೃತಿಕ ನಾಯಕ ಬಸವಣ್ಣ ಹಾಗೂ 'ವಿಶ್ವಮಾನವ ಸಂದೇಶ' ಸಾರಿದ ಕುವೆಂಪು ಅವರ ಜಯಂತಿಗಳನ್ನು ಪ್ರತಿವರ್ಷ ನಾಡಿನ ಉದ್ದಗಲಕ್ಕೂ ಆಚರಿಸುತ್ತೇವೆ. ಆದರೆ, ಈ ಆಚರಣೆಗಳನ್ನು ಅಣಕಿಸುವ ಘಟನೆಗಳು ನಡೆಯುತ್ತಲೇ ಇವೆ. ಜಾತಿ ಕಾರಣಕ್ಕೆ ಊರಿಂದ ಬಹಿಷ್ಕಾರ ಹಾಕುವ, ದೇಗುಲ ಪ್ರವೇಶ ಹಾಗೂ ಸಹಪಂಕ್ತಿ ಭೋಜನವನ್ನು ನಿರಾಕರಿಸುವ, ಕುಡಿಯುವ ನೀರಿಗೂ ಅಡ್ಡಿಪಡಿಸುವ ಅಮಾನವೀಯ ಘಟನೆಗಳು ಅಲ್ಲಲ್ಲಿ ನಡೆಯುತ್ತಿವೆ. ಇಷ್ಟಿದ್ದರೂ 'ಜಾತಿ ಎಲ್ಲಿದೆ? ಅದೆಲ್ಲವೂ ಇತಿಹಾಸ' ಎಂದು ಹೇಳುವುದು ಆತ್ಮವಂಚನೆಯ ಮಾತೇ ಸರಿ.

ಭಾರತ ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆಯನ್ನು ನಿಷೇಧಿಸಿದೆ. ಸಂವಿಧಾನದ 23ನೇ ವಿಧಿಯು ವ್ಯಕ್ತಿಯ ಘನತೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವ ಭರವಸೆ ನೀಡಿದೆ. ಆದರೆ, ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಜಾತಿಯ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ನೋಡುವ ಮೌಢ್ಯ ಮತ್ತು ಜಾತಿ ಕಾರಣದಿಂದಾಗಿ ನಡೆಯುವ ಶೋಷಣೆ ಕೊನೆಗೊಂಡಿಲ್ಲ.

'ಸಂಪೂರ್ಣ ಸಮಾನತೆ ಎನ್ನುವುದು ಕಲ್ಪನೆಯೇ ಇರಬಹುದು. ಆದರೆ, ಅದನ್ನು ಆಡಳಿತ ತತ್ವವಾಗಿ ಅಂಗೀಕರಿಸಲೇಬೇಕು. ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯದೇ ಹೋದರೆ ಕಾನೂನಾತ್ಮಕವಾಗಿ ಎಂತಹ ಸ್ವಾತಂತ್ರ್ಯವನ್ನು ಪಡೆದರೂ ಉಪಯೋಗವಿಲ್ಲ' ಎಂಬ ಬಾಬಾಸಾಹೇಬರ ಮಾತು ಈ ದಿಸೆಯಲ್ಲಿ ಗಮನಾರ್ಹ.

ಶರಣರ, ಸಂತರ, ಸಮಾಜ ಸುಧಾರಕರ ತ್ಯಾಗ, ಬಲಿದಾನಗಳ ಫಲವೋ ದಮನಿತ ಸಮುದಾಯಗಳಲ್ಲಿನ ಜಾಗೃತಿಯ ಕಾರಣಕ್ಕೋ ಅಥವಾ ಕಾನೂನಿನ ಭಯದಿಂದಲೋ ಇಂದು ಜಾತಿ ಪದ್ಧತಿಯ ಕಬಂಧಬಾಹುಗಳು ಸಡಿಲಗೊಂಡಂತೆ ಗೋಚರಿಸುತ್ತಿವೆ. ಇದಕ್ಕೆ ಇನ್ನೊಂದು ತುದಿಯಲ್ಲಿ, ಜಾತಿಯನ್ನು ಸದೃಢಗೊಳಿಸಿ ಪೋಷಿಸುವ ಬಾಹುಗಳು ಬಲಿಷ್ಠವಾಗುತ್ತಿರುವ ಸೂಚನೆಗಳೂ ಕಾಣಿಸುತ್ತಿವೆ. ಇದು ದುರದೃಷ್ಟಕರ. ಸಾಮರಸ್ಯದ ಬದುಕು ಸಾಧ್ಯವಾಗಬೇಕಾದರೆ 'ಬರು ಸಟಗನ ಭಕ್ತಿ ದಿಟವೆಂದು ನಚ್ಚಲು ಬೇಡ, ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ' ಎನ್ನುವ ವಚನಕಾರ ಜೇಡರ ದಾಸಿಮಯ್ಯನ ಮಾತನ್ನು ಅರ್ಥೈಸಿಕೊಂಡು, ಎಚ್ಚರಿಕೆ ಮತ್ತು ತಿಳಿವಳಿಕೆಯ ಹೆಜ್ಜೆಗಳನ್ನಿಡಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು.

ಜಾಗತೀಕರಣದೊಂದಿಗೆ ನಗರೀಕರಣ ತೀವ್ರಗೊಂಡಂತೆ ನಮ್ಮ ಅಂತಃಕರಣವು ಸೊರಗುತ್ತಿದೆ. ಈ ಹೊತ್ತಿನಲ್ಲಿ ಮೌಢ್ಯಗಳ ವಿರುದ್ಧ ವೈಚಾರಿಕ ಕ್ರಾಂತಿಯ ಕಿಡಿ ಹೊತ್ತಿಸುವ, ಮಹನೀಯರು ಹಚ್ಚಿ ಹೋದ ಅರಿವಿನ ಹಣತೆಗೆ ಬತ್ತಿ ಹೊಸೆದು ಬೆಳಗಿಸುವ, ಅವರು ನಿಲ್ಲಿಸಿದ ರಥವನ್ನು ಮುನ್ನಡೆಸುವ ನವಪೀಳಿಗೆಯನ್ನು ಸಜ್ಜುಗೊಳಿಸುವ ತುರ್ತು ನಮ್ಮ ಮುಂದಿದೆ. ಸಮಾಜಕ್ಕೆ ಅಂಟಿರುವ ಜಾತಿ ರೋಗವನ್ನು ಗುಣಪಡಿಸುವ ವೈದ್ಯರಾಗಿ ಚಿಕಿತ್ಸೆ ನೀಡುವ ಹೊಣೆಯನ್ನು ಯುವಪೀಳಿಗೆ ಹೊರಬೇಕಾಗಿದೆ.

ಮೇಲರಿಮೆ ಮತ್ತು ಕೀಳರಿಮೆಯ ಎರಡೂ ರೋಗಗಳಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ, 'ಸಮಾಜವು ಸಮಾನತೆಯನ್ನು ಹುಟ್ಟು ಹಾಕುವುದಕ್ಕೆ ಹೆಚ್ಚು ಒತ್ತು ನೀಡಬೇಕು... ಬುದ್ಧನ ಮಾರ್ಗ ಅನುಸರಣೆಯಿಂದ ಮಾತ್ರ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯ ಉಳಿಯಲು ಸಾಧ್ಯ' ಎಂಬ ಬಾಬಾಸಾಹೇಬರ ಮಾತುಗಳನ್ನು ಪಾಲಿಸಬೇಕಿದೆ. ಆ ಮೂಲಕ, ಬಾಹ್ಯಾಕಾಶದಲ್ಲಿ ಬೆಳೆ ಬೆಳೆಯಲು ಹೊರಡುವ ನಮಗೆ ಮನದ ಕೊಳೆಯನ್ನು ತೊಳೆಯುವುದು ಅಸಾಧ್ಯವೇನೂ ಅಲ್ಲವೆಂಬ ಅರಿವನ್ನು ಸಮಾಜದಲ್ಲಿ ಮೂಡಿಸಬೇಕಿದೆ.

ಅಸ್ಪೃಶ್ಯತೆ ಮತ್ತು ಅನಿಷ್ಟ ಪದ್ಧತಿಗಳನ್ನು ತೊಲಗಿಸಲು ಸರ್ಕಾರ ಜಾರಿ ಮಾಡಿರುವ 'ವಿನಯ ಸಾಮರಸ್ಯ ಯೋಜನೆ'ಯನ್ನು ಹೆಚ್ಚು ಹೆಚ್ಚು ಪ್ರಚುರಪಡಿಸಬೇಕು. ಜೊತೆಗೆ 'ದೇಶವೆಂದರೆ ಮಣ್ಣಲ್ಲ, ಮನುಷ್ಯರು' ಎಂಬ ತೆಲುಗು ಕವಿ ಗುರಜಾಡ ಅಪ್ಪಾರಾವ್ ಅವರ ಮಾತುಗಳನ್ನು ನಮ್ಮೆಲ್ಲರ ಎದೆಗಿಳಿಸಿಕೊಳ್ಳಬೇಕು. ಪ್ರತಿಯೊಬ್ಬರಲ್ಲೂ ಮನುಷ್ಯ ಪ್ರಜ್ಞೆ ಜಾಗೃತಗೊಂಡಾಗ ಮಾತ್ರ ಸಮಾನತೆಯ ಸಮಾಜ ಸಾಕಾರಗೊಳ್ಳಲು ಸಾಧ್ಯ.

ವಾಚಕರ ವಾಣಿ

ಬಿಬಿಎಂಪಿ ಇ-ಖಾತಾ ಸೌಲಭ್ಯ ಸ್ವಾಗತಾರ್ಹ

ಬೆಂಗಳೂರಿನ ನಿವಾಸಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಸಿಹಿ ಸುದ್ದಿ ನೀಡಿದೆ. ಮನೆ ಬಾಗಿಲಿಗೆ ಇ-ಖಾತೆ ನೀಡುವ ವ್ಯವಸ್ಥೆ ಮಾಡಿದೆ. ಇಂತಿಷ್ಟು ಶುಲ್ಕ ವಿಧಿಸಿ ಈ ಸೌಲಭ್ಯ ನೀಡಲು ನಿರ್ಧರಿಸಿರುವ ಈ ಕ್ರಮ ಸ್ವಾಗತಾರ್ಹ. ಅಲ್ಲದೆ, 'ಬಿ' ಖಾತೆದಾರರಿಗೂ 'ಎ' ಖಾತೆದಾರರಿಗೆ ಲಭಿಸುವ ಸವಲತ್ತು ನೀಡುವ ಚಿಂತನೆ ಕೂಡ ಒಳ್ಳೆಯದು.

ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳಲ್ಲಿನ ಸೆಟ್‌ಬ್ಯಾಕ್ ಉಲ್ಲಂಘನೆಯನ್ನು ಶೇ 15ರವರೆಗೆ ಸಕ್ರಮಗೊಳಿಸುವ ಪ್ರಸ್ತಾವ ಸೇರಿ ನೆಲ ಅಂತಸ್ತನ್ನು ಕಡ್ಡಾಯವಾಗಿ ಪಾರ್ಕಿಂಗ್‌ಗೆ ಬಳಸಲೇಬೇಕು ಎಂಬ ನಿಯಮವು ಕಟ್ಟುನಿಟ್ಟಾಗಿ ಜಾರಿಯಾಗಬೇಕು. ಪಾರ್ಕಿಂಗ್‌ಗೆ ಬಳಸಿದ ಅಂತಸ್ತಿಗೆ ಬದಲಾಗಿ ಇನ್ನೊಂದು ಅಂತಸ್ತು ನಿರ್ಮಾಣ ಮಾಡಿಕೊಳ್ಳಲು ಅವಕಾಶ ನೀಡಿರುವುದು ಜನರಿಗೆ ತುಸು ನೆಮ್ಮದಿ, ಖುಷಿ ನೀಡಿದೆ.

ಅಕ್ರಮ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುವುದಿಲ್ಲ ಎಂದು ರಾಜ್ಯ ಸರ್ಕಾರ ಇತ್ತೀಚೆಗೆ ಘೋಷಿಸಿತ್ತು. ಇದರಿಂದ ಸಾವಿರಾರು ಅಪಾರ್ಟ್‌ಮೆಂಟ್‌ಗಳು, ಮನೆಗಳು ಹಾಗೂ ಬಾಡಿಗೆಗೆ ನೀಡಲೆಂದೇ ಮನೆ ಕಟ್ಟಿರುವವರಿಗೆ ತುಂಬ ತೊಂದರೆಯಾಗಿದೆ. ಈ ನಿಯಮಾವಳಿಯು ಮುಂದೆ ನಿರ್ಮಿಸಲಿರುವ ಮನೆಗಳಿಗೆ ಅನ್ವಯವಾದರೆ ಒಳ್ಳೆಯದು. ಈಗಾಗಲೇ ಪೂರ್ಣಗೊಂಡಿರುವ, ಅರ್ಧಕ್ಕೆ ನಿಂತಿರುವ ಕಟ್ಟಡಗಳಿಗೆ ಒಂದಿಷ್ಟು ಶುಲ್ಕ ನಿಗದಿಪಡಿಸಿ ವಿನಾಯಿತಿ ನೀಡುವ ಬಗ್ಗೆ ಬಿಬಿಎಂಪಿ ಚಿಂತನೆ ನಡೆಸಬೇಕಿದೆ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಜನೌಷಧ ಕೇಂದ್ರ ತೆರವುಗೊಳಿಸುವುದು ಬೇಡ

ರಾಜ್ಯ ಸರ್ಕಾರವು ಇತ್ತೀಚೆಗೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಪ್ರಧಾನ ಮಂತ್ರಿ ಜನೌಷಧ ಕೇಂದ್ರಗಳ ತೆರವಿಗೆ ಆದೇಶಿಸಿದೆ. ಇದು ಜನಸಾಮಾನ್ಯರಿಗೆ ಆಘಾತಕಾರಿಯಾದ ಸಂಗತಿ. ಈ ಕೇಂದ್ರಗಳಲ್ಲಿ ಸಿಗುವ ಔಷಧಗಳು ಉತ್ತಮ ಗುಣಮಟ್ಟದಿಂದ ಕೂಡಿವೆ ಮತ್ತು ಬೆಲೆ ಕೂಡ ಕಡಿಮೆ.

ಸರ್ಕಾರ ಏನೇ ಹೇಳಿದರೂ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವ ಔಷಧ, ಚಿಕಿತ್ಸೆ ಬಗ್ಗೆ ಜನಸಾಮಾನ್ಯರಿಗೆ ನಂಬಿಕೆಯೇ ಹೊರಟು ಹೋಗಿದೆ. ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಮುಕ್ತವಾಗಿ ಔಷಧ ಸಿಗುವುದಿಲ್ಲ. ಇನ್ನೂ ಹಲವಾರು ಸಮಸ್ಯೆಗಳಿವೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧ ಕೇಂದ್ರಗಳನ್ನು ಹಾಗೇ ಉಳಿಸಿಕೊಳ್ಳಬೇಕು.

ಶಾಂತವೀರ ಎಸ್., ಚಿತ್ರದುರ್ಗ

ಅಂಗಾಂಗ ದಾನಕ್ಕೆ ಅರಿವಿನ ಕೊರತೆ

ಅಂಗಾಂಗ ದಾನಿಗಳ ಕೊರತೆಗೆ (ಪ್ರ.ವಾ., ಜೂನ್ 2) ಅರಿವು ಇಲ್ಲದ್ದು ಪ್ರಮುಖ ಕಾರಣ. ಜಾಗೃತಿ ಮೂಡಿಸಲು ಆರೋಗ್ಯ ಇಲಾಖೆಯು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ. ಇದಕ್ಕೆ ವೈದ್ಯಕೀಯ ಕ್ಷೇತ್ರದಲ್ಲಿ ಇರುವ ಎಲ್ಲರ ಸಹಕಾರ ಕೂಡ ಅವಶ್ಯಕ.

ಅನಿಲಕುಮಾರ ಮುಗಳಿ, ಧಾರವಾಡ

ಪಿಯು ವಿಷಯವಾರು ಸಂಯೋಜನೆ: ಅರಿವು ಮೂಡಿಸಿ

ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ಈ ವರ್ಷದ ಪ್ರವೇಶಾತಿ ಪ್ರಕ್ರಿಯೆ ಆರಂಭಗೊಂಡಿದೆ. ವಿಷಯವಾರು ಸಂಯೋಜನೆ ಆಯ್ಕೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿರುವ ಗೊಂದಲವನ್ನು ಗಮನಿಸಿದ್ದೇನೆ. ತಾನು ಆಯ್ಕೆ ಮಾಡುತ್ತಿರುವ ವಿಭಾಗ ಯಾವುದು? ಯಾಕಾಗಿ? ಆ ಸಂಯೋಜನೆಯಲ್ಲಿ ಕಲಿಯಬೇಕಾದ ವಿಷಯಗಳಾವುವು? ಈ ಯಾವುದರ ಬಗ್ಗೆಯೂ ಸ್ಪಷ್ಟ ತಿಳಿವಳಿಕೆ ಇಲ್ಲದಿರುವುದೇ ಸಂಯೋಜನೆ ಆಯ್ಕೆಯಲ್ಲಿ ಗೊಂದಲಕ್ಕೆ ಕಾರಣ.

ಪದವಿಪೂರ್ವ ಹಂತದಲ್ಲಿರುವ ವಿಷಯವಾರು ಸಂಯೋಜನೆ ವಿಭಾಗಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅದರಲ್ಲೂ ಗ್ರಾಮೀಣರಲ್ಲಿ ಮಾಹಿತಿ ಕೊರತೆ ಇದೆ. ಪ್ರಾಥಮಿಕ ಶಾಲಾ ಹಂತದಿಂದ ಪ್ರೌಢಶಾಲಾ ಹಂತದವರೆಗೆ ಹೆದ್ದಾರಿಯ ರೀತಿ ಒಂದೇ ಪಠ್ಯಕ್ರಮದ ವಿನ್ಯಾಸವಿದೆ. ಪದವಿಪೂರ್ವ ಹಂತದಲ್ಲಿ ಅದು ಕವಲುದಾರಿಗಳ ಹಾಗೆ ಕಾಣುತ್ತದೆ.

ಈ ಸಮಸ್ಯೆಗೆ ಸೂಕ್ತ ಪರಿಹಾರವೆಂದರೆ ಪ್ರೌಢ ಶಾಲಾ ಹಂತದ ಕೊನೆಯಲ್ಲಿ ಶಿಕ್ಷಕರು ಪದವಿಪೂರ್ವ ಹಂತದಲ್ಲಿರುವ ಭಿನ್ನ ವಿಷಯಗಳ ಸಂಯೋಜನೆ, ಅದರಿಂದಾಗುವ ಪ್ರಯೋಜನ ಕುರಿತು ವಿವರವಾಗಿ ತಿಳಿಸುವ ಅಗತ್ಯವಿದೆ. ಆಗ ವಿದ್ಯಾರ್ಥಿಗಳು ತಮ್ಮ ಆಸಕ್ತಿ, ಅಭಿರುಚಿಗೆ ತಕ್ಕಂತೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಶಕ್ತರಾಗಬಲ್ಲರು. ಈ ಕುರಿತು ಅರಿವು ಮೂಡಿಸುವುದು ಇಲಾಖೆಯ ಜವಾಬ್ದಾರಿ ಕೂಡ ಆಗಿದೆ.

ನಾಗರಾಜ ಮಗ್ಗದ, ಕೊಟ್ಟೂರು

ನಗರ ಬದುಕನ್ನು ಸಹನೀಯವಾಗಿಸಿ

ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರವು ನರಕಸದೃಶವಾಗುತ್ತಿದೆ. ವಾಹನ ದಟ್ಟಣೆ ವಿಪರೀತ ಹೆಚ್ಚಿದೆ. ರಸ್ತೆಗಳನ್ನು ಎಲ್ಲೆಂದರಲ್ಲಿ ಅಗೆದು ಇಟ್ಟಿದ್ದಾರೆ. ಕಾಮಗಾರಿಗಳ ಪ್ರಗತಿ ಆಮೆನಡಿಗೆಯಾಗಿದೆ. ಪಾದಚಾರಿ ಮಾರ್ಗಗಳ ಸ್ಥಿತಿ ಶೋಚನೀಯವಾಗಿದೆ. ಕಸದ ರಾಶಿ ಕಂಡಕಂಡಲ್ಲಿ ಕಣ್ಣಿಗೆ ಬೀಳುತ್ತದೆ. ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲ. ವಾರ್ಡ್‌ಗಳನ್ನು ಪ್ರತಿನಿಧಿಸುವ ಸದಸ್ಯರು ಇಲ್ಲದೇ ಇರುವುದರಿಂದ ಜನರಲ್ಲಿ ಅನಾಥ ಪ್ರಜ್ಞೆ ಆವರಿಸಿದೆ. ಶಾಸಕರಲ್ಲಿ ಕೆಲವರು ಇದ್ದರೂ ಇಲ್ಲದಂತಿದ್ದಾರೆ.

ರಾಜ್ಯ ಸರ್ಕಾರವು ಉದಾರವಾಗಿ ಅನುದಾನ ಒದಗಿಸಿದರೂ ಬೆಂಗಳೂರೆಂಬ ಬಕಾಸುರನ ಹೊಟ್ಟೆಗೆ ಅದು ಸಾಕಾಗುತ್ತಿಲ್ಲ. ಅದರ ಫಲ ನಗರ ನಿವಾಸಿಗಳ ಜೀವನಮಟ್ಟ ಸುಧಾರಣೆಯಲ್ಲಿ ಕಾಣುತ್ತಿಲ್ಲ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ಲಾಸ್ಟಿಕ್ ಎಂಬ ಭಸ್ಮಾಸುರ

ನಮ್ಮ ಬದುಕಿನ ಅವಿಭಾಜ್ಯ ಅಂಗವೇ ಆಗಿಹೋಗಿರುವ ಪ್ಲಾಸ್ಟಿಕ್ ಈಗ ಭೂಮಿ, ಸಾಗರ, ನಾವು ಸೇವಿಸುವ ಆಹಾರ, ನಮ್ಮ ಮಿದುಳು, ದೇಹದಲ್ಲಿ ಹರಿದಾಡುವ ರಕ್ತ, ಅಷ್ಟೇ ಏಕೆ, ನವಜಾತ ಶಿಶುಗಳ ಮಾಸುವಿನಲ್ಲಿಯೂ ಸೇರಿಕೊಂಡಿದೆ. ಕನಿಷ್ಠ ಪ್ರಮಾಣದಲ್ಲಿ ಪ್ಲಾಸ್ಟಿಕ್ ಬಳಸುವವನೂ ಪ್ಲಾಸ್ಟಿಕ್ ಉಂಟುಮಾಡುತ್ತಿರುವ ಪರಿಣಾಮವನ್ನು ಅನುಭವಿಸುವಂತಾಗಿದೆ. ನಮ್ಮ ನಡುವೆ ಇರುವ ಹೆಚ್ಚು ಸವಲತ್ತು ಹೊಂದಿರುವವರು ಪ್ಲಾಸ್ಟಿಕ್ ತರಲಿರುವ ವಿಪತ್ತನ್ನು ತಪ್ಪಿಸಲು ಮುಂದಾಗುತ್ತಾರೆಯೇ ಎನ್ನುವ ಪ್ರಶ್ನೆ ಈಗ ಮುಖ್ಯವಾಗಿದೆ

• ಪ್ರಜ್ಞಾರಾಜ್ ಸಿಂಗ್, ಶ್ರುತಕೀರ್ತಿ ಶ್ರೀರಾಮ್, ವೆಂಕಟೇಶ್ ರಾಘವೇಂದ್ರ

ಬೆಂಗಳೂರಿನ ಜನದಟ್ಟಣೆಯ ರಸ್ತೆಯಲ್ಲಿ ಬೀದಿ ವ್ಯಾಪಾರಿಯೊಬ್ಬರು ಎಂದಿನಂತೆ ರುಚಿಕರವಾದ ಚಾಟ್ ಅನ್ನು ಉದ್ದದ ಸಾಲಿನಲ್ಲಿ ನಿಂತಿರುವ ಗ್ರಾಹಕರಿಗೆ ಸರಬರಾಜು ಮಾಡುವುದನ್ನು ಊಹಿಸಿಕೊಳ್ಳಿ. ಅಲ್ಲಿ ಹಿಂದಿನಂತೆ ಪ್ಲಾಸ್ಟಿಕ್ ಚಮಚಗಳ ಬದಲಿಗೆ ಮಣ್ಣಿನಲ್ಲಿ ಕೊಳೆಯುವ ಗುಣವುಳ್ಳ ಚಮಚಗಳನ್ನು ಬಳಸುವುದನ್ನು ಕಾಣಬಹುದು. ಏಕಬಳಕೆ ಪ್ಲಾಸ್ಟಿಕ್ ನಿಷೇಧಿಸುವ ಸರ್ಕಾರದ ನಿರ್ಧಾರವೇ ಈ ಬದಲಾವಣೆಗೆ ಕಾರಣ.

ಆದರೆ, ಈ ಬದಲಾವಣೆಯಿಂದ ಬೀದಿ ವ್ಯಾಪಾರಿಯ ಜೇಬಿಗೆ ಹೆಚ್ಚು ಹೊರೆಯಾಗುತ್ತಿದೆ. ಈ ಹಿಂದೆ ಒಂದು ಚಮಚಕ್ಕೆ 20 ಪೈಸೆ ಖರ್ಚು ಮಾಡುತ್ತಿದ್ದ ಜಾಗದಲ್ಲಿ ಈಗ ₹1 ಖರ್ಚು ಮಾಡಬೇಕಾಗಿದೆ. ಇದರಿಂದ ದಿನಕ್ಕೆ ₹100ಯಂತೆ ತಿಂಗಳಿಗೆ ₹3,000 ಹೆಚ್ಚುವರಿ ವೆಚ್ಚ ಭರಿಸಬೇಕಾಗಿದೆ. ಸೂಕ್ತ ಸಾಂಸ್ಥಿಕ ನೆರವು ಒದಗಿಸದೇ ಈ ಬದಲಾವಣೆ ತಂದಿರುವುದರಿಂದ ಒಬ್ಬ ಸಣ್ಣ ವ್ಯಾಪಾರಿಗೆ ಇದು ಸುಸ್ಥಿರತೆಯೆಡೆಗಿನ ಹೆಜ್ಜೆ ಎನ್ನುವುದಕ್ಕಿಂತಲೂ ಆರ್ಥಿಕ ಹೊರೆಯಾಗಿಯೇ ಕಾಣುತ್ತದೆ.

ಉತ್ತರದಾಯಿತ್ವ ಯಾರದ್ದು?

ಪ್ಲಾಸ್ಟಿಕ್‌ಗೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ನಡೆಯುತ್ತಿರುವ ಬಹುತೇಕ ಚರ್ಚೆಗಳು ನಾವು ಪ್ಲಾಸ್ಟಿಕ್ ಬಳಸುವುದು, ಎಸೆಯುವುದು ಅಥವಾ ಬಳಸದೇ ಇರುವಂತಹ, ನಮಗೆ ಕಾಣುವ ವಿಚಾರಗಳನ್ನೇ ಕೇಂದ್ರೀಕರಿಸಿವೆ. ಇದಷ್ಟೇ ಅಲ್ಲ, ಪ್ಲಾಸ್ಟಿಕ್ ತಯಾರಕರ ಕುರಿತೂ ಗಮನ ಹರಿಸುವುದು ಮುಖ್ಯ. ಪ್ಲಾಸ್ಟಿಕ್‌ನ ಜೀವನ-ಚಕ್ರದಲ್ಲಿ ಬಹುಹಂತದ ಪ್ಯಾಕೇಜಿಂಗ್‌ಗೆ ಬಳಸುವ ಪ್ಲಾಸ್ಟಿಕ್ ಮತ್ತು ಹೆಚ್ಚು ಬೇಡಿಕೆ ಇರುವ ಸರಕುಗಳನ್ನು ತಯಾರಿಸುವ ಕಂಪನಿಗಳು ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ, ನಾವು ಪ್ಲಾಸ್ಟಿಕ್ ತಯಾರಕರ ಮೇಲೆ ಉತ್ತರದಾಯಿತ್ವ ನಿಗದಿಪಡಿಸುವ ಬಗ್ಗೆ ಚರ್ಚಿಸಬಹುದು.

ಭಾರತದಲ್ಲಿ ತಯಾರಕರ ವಿಸ್ತೃತ ಜವಾಬ್ದಾರಿ (ಇಪಿಆರ್) ಚೌಕಟ್ಟು ಜಾರಿಯಲ್ಲಿದೆ. ಗ್ರಾಹಕರು ಬಳಸಿದ ಪ್ಲಾಸ್ಟಿಕ್ ಅನ್ನು ಸಂಗ್ರಹಿಸುವುದು ಮತ್ತು ಅದರ ಸಂಸ್ಕರಣೆ ಮಾಡುವ ಜವಾಬ್ದಾರಿಯನ್ನು ತಯಾರಕರಿಗೇ ವಹಿಸುವುದರ ಮೂಲಕ ಈಗ ಇರುವ ಅಸಮತೋಲನವನ್ನು ಸರಿಪಡಿಸುವ ಉದ್ದೇಶವನ್ನು ಇದು ಹೊಂದಿದೆ.

ಇದೊಂದು ಭರವಸೆದಾಯಕ ಯೋಚನೆ. ಒಂದು ವೇಳೆ ಅದನ್ನು ಸಮರ್ಥವಾಗಿ ಜಾರಿಗೆ ತಂದರೆ ಉತ್ತರದಾಯಿತ್ವವು ಗ್ರಾಹಕರಿಗೆ ಸರಕು ಮತ್ತು ಸೇವೆಗಳನ್ನು ಪೂರೈಸುವ ವ್ಯವಸ್ಥೆಗೆ (ಕಂಪನಿಗಳಿಗೆ) ವರ್ಗಾವಣೆಯಾಗಲಿದೆ. ಆದರೆ, ವಾಸ್ತವದಲ್ಲಿ 'ಇಪಿಆರ್' ಹಲವು ಅಡೆತಡೆಗಳನ್ನು ಎದುರಿಸುತ್ತಿದೆ. ಇವುಗಳ ಮೇಲೆ ನಿಗಾ ವ್ಯವಸ್ಥೆ ಸಮರ್ಪಕವಾಗಿಲ್ಲ. ದತ್ತಾಂಶಗಳ ದಾಖಲೀಕರಣವೂ ಸರಿಯಾಗಿ ಆಗುತ್ತಿಲ್ಲ. ನಿಯಮಗಳ ಅನುಸರಣೆಯ ಬಗ್ಗೆ ಸ್ಪಷ್ಟತೆಯೇ ಇಲ್ಲ.

ಜೊತೆಗೆ, ಅಗ್ಗದ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳು ಅನಧಿಕೃತ ಮಾರ್ಗಗಳು ಮತ್ತು ಸಮರ್ಪಕ ಮೇಲ್ವಿಚಾರಣೆ ಇಲ್ಲದ ಪೂರೈಕೆ ಸರಪಳಿಗಳ ಮೂಲಕ ಭಾರತಕ್ಕೆ ಬರುತ್ತಿರುವುದು ಮುಂದುವರಿದಿದೆ. ದೇಶೀಯವಾಗಿ ನಡೆಯುತ್ತಿರುವ ಪ್ಲಾಸ್ಟಿಕ್ ತಯಾರಿಕೆ ಮತ್ತು ಆಮದು ಮೇಲೆ ನಿಯಂತ್ರಣ ಹೇರಲು ರಾಷ್ಟ್ರೀಯ ಮಟ್ಟದಲ್ಲಿ ಏಕರೂಪದ ರಾಷ್ಟ್ರೀಯ ಚೌಕಟ್ಟು ಇಲ್ಲದೇ ಇದ್ದರೆ ಪ್ಲಾಸ್ಟಿಕ್ ಮೇಲೆ ನಿಯಂತ್ರಣ ಹೇರುವ ಪ್ರಯತ್ನ ಅಪೂರ್ಣವಾಗಲಿದೆ.

ವಾಸ್ತವ ಚಿತ್ರಣ

ಪ್ಲಾಸ್ಟಿಕ್ ಮಾಲಿನ್ಯ ಎನ್ನುವುದು ಇಂದು ಬಹುತೇಕ ಜಾಗತಿಕ ಸಮಸ್ಯೆಯಾಗಿದೆ. ಜಾಗತಿಕವಾಗಿ ಪ್ರತಿವರ್ಷ 40 ಕೋಟಿ ಟನ್ ಪ್ಲಾಸ್ಟಿಕ್ ತ್ಯಾಜ್ಯವು ಸೃಷ್ಟಿಯಾಗುತ್ತಿದೆ ಮತ್ತು 2050ರ ವೇಳೆಗೆ ಮೂಲ ಪ್ಲಾಸ್ಟಿಕ್ ಉತ್ಪಾದನೆಯ ಪ್ರಮಾಣವು 110 ಕೋಟಿ ಟನ್‌ಗಳಿಗೆ ತಲುಪಲಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಹೆಚ್ಚಿನ ಪ್ರಮಾಣವನ್ನು ಅಲ್ಪಾವಧಿಯ ಬಳಕೆಗೆ ತಕ್ಕಂತೆ ರೂಪಿಸುತ್ತಿರುವುದರಿಂದ ಕೆಲವೇ ವಾರಗಳಲ್ಲಿ ಎಲ್ಲವೂ ತ್ಯಾಜ್ಯವಾಗಿ ಸಮುದ್ರ ಸೇರುತ್ತಿದೆ ಇಲ್ಲವೇ ಅದನ್ನು ಸುಡಲಾಗುತ್ತಿದೆ. ಮೈಕ್ರೊಪ್ಲಾಸ್ಟಿಕ್‌ಗಳು ಕುಡಿಯುವ ನೀರು, ಮನುಷ್ಯನ ರಕ್ತ ಮತ್ತು ನವಜಾತ ಶಿಶುಗಳ ಮಾಸುವಿನಲ್ಲೂ ಕಂಡುಬಂದಿವೆ.

ಭಾರತವೂ ಇಂಥದ್ದೇ ಬಿಕ್ಕಟ್ಟನ್ನು ಎದುರಿಸುತ್ತಿದೆ. ದೇಶದಲ್ಲಿ ಪ್ಲಾಸ್ಟಿಕ್ ಬಳಕೆಯ ಪ್ರಮಾಣವು ವರ್ಷದಿಂದ ವರ್ಷಕ್ಕೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗುತ್ತಲೇ ಇದ್ದು, ಪ್ರಸ್ತುತ ಈ ಪ್ರಮಾಣವು 2 ಕೋಟಿ ಟನ್‌ಗಳಷ್ಟಿದೆ. ಇದಕ್ಕೆ ತಕ್ಕಂತೆ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣವೂ ಹೆಚ್ಚಾಗಿದೆ. ದೇಶದಲ್ಲಿ 2023ರಲ್ಲಿ 35 ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಯಾಗಿದೆ; ಈ ಪೈಕಿ, ಚಿಂದಿ ಆಯುವವರಿಂದ ಮತ್ತು ತ್ಯಾಜ್ಯ ವಿಂಗಡಿಸುವವರಂಥ ಅಸಂಘಟಿತ ವಲಯಗಳಿಂದ ಶೇ 30ರಷ್ಟು ಮಾತ್ರ ಮರುಬಳಕೆಯಾಗಿದೆ.

ಏನಾದರೂ ಬದಲಾಗಿದೆಯೇ?

ಪ್ಲಾಸ್ಟಿಕ್ ಮಾಲಿನ್ಯದ ಬಿಕ್ಕಟ್ಟು ತೀವ್ರಗೊಂಡ ಪರಿಣಾಮ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯವು 2022ರಲ್ಲಿ ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಿಸಿತು. ಇದು ಮಹತ್ವಾಕಾಂಕ್ಷಿ ಹೆಜ್ಜೆಯಾಗಿತ್ತು. ನಿಷೇಧದ ಹೊರತಾಗಿಯೂ ಜಾರಿಯಲ್ಲಿನ ಸವಾಲುಗಳು, ಪ್ರಭಾವದಲ್ಲಿನ ವ್ಯತ್ಯಾಸಗಳು ಮತ್ತು ಮೂಲಸೌಕರ್ಯಗಳ ಕೊರತೆಯಿಂದ ಅದು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿಲ್ಲ.

ಆರಂಭದಲ್ಲಿ ನಿಯಮದ ಬಗ್ಗೆ ಅತ್ಯುತ್ಸಾಹ ಇತ್ತು. 2022ರ ಜುಲೈನಲ್ಲಿ ತಿಂಗಳು ಪೂರ್ತಿ ಏಕಬಳಕೆಯ ಪ್ಲಾಸ್ಟಿಕ್ 'ಉತ್ಪಾದನೆ, ಆಮದು, ದಾಸ್ತಾನು, ವಿತರಣೆ, ಮಾರಾಟ ಮತ್ತು ಬಳಕೆ' ಅನ್ನು ಗುರಿಯಾಗಿಸಿಕೊಂಡು ಪ್ರಚಾರಾಂದೋಲನ ನಡೆಸಲಾಯಿತು. ಈ ವೇಳೆ, ಅಧಿಕಾರಿಗಳು 775 ಟನ್ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ಜಪ್ತಿ ಮಾಡಿ, ನಿಯಮ ಉಲ್ಲಂಘಿಸಿದವರಿಗೆ ₹5.8 ಕೋಟಿ ದಂಡ ವಿಧಿಸಿದ್ದರು. ಕಾಲ ಸರಿದಂತೆ, ಆರಂಭದಲ್ಲಿ ಇದ್ದ ಬಿಗಿ ಸಡಿಲವಾಯಿತು. ಇಂದು, ವಿಶೇಷವಾಗಿ ಸಣ್ಣ ಪಟ್ಟಣಗಳಲ್ಲಿ ಮತ್ತು ಸರ್ಕಾರದ ನಿಯಂತ್ರಣ ಅಷ್ಟಾಗಿ ಇಲ್ಲದ ಮಾರುಕಟ್ಟೆಗಳಲ್ಲಿ, ನಿಷೇಧಿತ ಏಕಬಳಕೆಯ ಪ್ಲಾಸ್ಟಿಕ್‌ನ ಅನೇಕ ವಸ್ತುಗಳನ್ನು ಮತ್ತೆ ಬಳಸಲಾಗುತ್ತಿದೆ. ದೊಡ್ಡ ನಗರಗಳಲ್ಲಿಯೂ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು ಪ್ಯಾಕೇಜಿಂಗ್, ಚಿಲ್ಲರೆ ಅಂಗಡಿ ಮತ್ತು ಡೆಲಿವರಿ ಸೇವೆಗಳಲ್ಲಿ ಬಳಸಲಾಗುತ್ತಿದೆ. ಸಂವಹನದಲ್ಲಿನ ಲೋಪ ಮತ್ತು ಅಸ್ಪಷ್ಟ ಪರ್ಯಾಯಗಳು ಈ ಕುರಿತ ಗೊಂದಲಕ್ಕೆ ಅರ್ಧ ಮಟ್ಟಿಗೆ ಕಾರಣವಾಗಿವೆ. ಕಾರ್ಪೊರೇಟ್‌ನಂಥ ಕೆಲವು ವಲಯಗಳಲ್ಲಿ ಬದಲಾವಣೆ ಆಗಿದ್ದರೂ ಪ್ಲಾಸ್ಟಿಕ್ ಬಳಕೆಯ ವಿಚಾರದಲ್ಲಿ ಗ್ರಾಹಕರ ವರ್ತನೆ ಬಹುತೇಕ ಹಿಂದಿನಂತೆಯೇ ಇದೆ.

ಈ ಪೈಕಿ ದೊಡ್ಡ ಸವಾಲು ಎಂದರೆ, ವಿವಿಧ ರಾಜ್ಯಗಳಲ್ಲಿ ಮತ್ತು ನಗರಗಳಲ್ಲಿ ಇರುವ ಭಿನ್ನ ಭಿನ್ನ ಅನುಷ್ಠಾನ ವಿಧಾನಗಳು. ಮಹಾರಾಷ್ಟ್ರ ಮತ್ತು ತಮಿಳುನಾಡುನಂಥ ರಾಜ್ಯಗಳಲ್ಲಿ ಸುಸ್ಥಿರ ಮಾದರಿಗಳನ್ನು ಅನುಸರಿಸುತ್ತಿದ್ದರೆ, ಇತರ ಬಹುತೇಕ ರಾಜ್ಯಗಳು ನಿರ್ದಿಷ್ಟ ದಾಳಿಗಳಿಗೆ ಮಾತ್ರ ಸೀಮಿತವಾಗಿ, ನಂತರ ಅದರ ಪರಿಣಾಮಗಳತ್ತ ಗಮನಹರಿಸುತ್ತಿಲ್ಲ. ಮೇಲಾಗಿ, ನಿಯಮ ಉಲ್ಲಂಘನೆಯ ಪ್ರಕರಣಗಳು, ವಸೂಲಾದ ದಂಡಗಳು ಅಥವಾ ಪುನರಾವರ್ತಿತ ತಪ್ಪು ಎಸಗಿದವರಿಗೆ ವಿಧಿಸಲಾದ ಶಿಕ್ಷೆಯ ಮಾಹಿತಿ ಇರುವ ಕೇಂದ್ರೀಕೃತ ದತ್ತಾಂಶವೇ ಲಭ್ಯವಿಲ್ಲ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನಾಗರಿಕರೇ ದೂರು ನೀಡಲು ಅನುಕೂಲವಾಗುವಂತೆ ಎಸ್‌ಯುಪಿ-ಸಿಪಿಸಿಬಿ ಮೊಬೈಲ್ ಆ್ಯಪ್ ರೂಪಿಸಿದ್ದರೂ ಅದರ ಬಗ್ಗೆ ಹೆಚ್ಚಿನವರಿಗೆ ಮಾಹಿತಿ ಇಲ್ಲ. ಹೀಗಾಗಿ, ತಂತ್ರಜ್ಞಾನದ ಬಳಕೆಯಲ್ಲಿ ಮುಂದಿರುವ ನಗರಗಳಲ್ಲೂ ಈ ಆ್ಯಪ್ ಬಳಕೆಯ ಪ್ರಮಾಣ ಸೀಮಿತವಾಗಿದೆ. ಪ್ಲಾಸ್ಟಿಕ್ ತ್ಯಾಜ್ಯದಲ್ಲಿ ಹೆಚ್ಚಿನ ಪಾಲು ನಗರಗಳಲ್ಲಿಯೇ ಸೃಷ್ಟಿಯಾಗುತ್ತಿದೆ. ಭಾರತದಲ್ಲಿ 2030ರ ಹೊತ್ತಿಗೆ ನಗರಗಳ ಜನಸಂಖ್ಯೆ ಶೇ 40ಕ್ಕೂ ಹೆಚ್ಚಾಗಲಿದ್ದು, 2036ರ ಹೊತ್ತಿಗೆ 60 ಕೋಟಿ ಆಗಲಿದೆ ಎಂದು ಅಂದಾಜಿಸಲಾಗಿದೆ.

ಯಾರಿಗೆ ತಾಗಲಿದೆ ಬಿಸಿ?

ಪ್ಲಾಸ್ಟಿಕ್ ನಿಷೇಧದ ವಿಚಾರದಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎನ್ನುವ ವಿಚಾರದಲ್ಲಿನ ಅಸಮತೋಲನವು ಆತಂಕಕ್ಕೆ ಕಾರಣವಾಗಿದೆ. ಪ್ಲಾಸ್ಟಿಕ್ ನಿಷೇಧದಿಂದ ಅಸಂಘಟಿತ ವಲಯವು, ಮುಖ್ಯವಾಗಿ ಗ್ರಾಹಕರಿಗೆ ಸೇವೆ ನೀಡಲು ಕಡಿಮೆ ಬೆಲೆಯ ಪ್ಲಾಸ್ಟಿಕ್ ವಸ್ತುಗಳನ್ನು ಅವಲಂಬಿಸಿರುವ ಕಿರು ಉದ್ದಿಮೆದಾರರು, ಸಣ್ಣ ವ್ಯಾಪಾರಿಗಳು, ಬೀದಿಬದಿ ವ್ಯಾಪಾರಿಗಳು ಮತ್ತು ಆಹಾರ ಮಳಿಗೆಗಳ ಮಾಲೀಕರು ಹೆಚ್ಚು ಹೊರೆ ಹೊರಬೇಕಾಗಿದೆ. ಪ್ಲಾಸ್ಟಿಕ್ ಬದಲಿಗೆ ಸುಸ್ಥಿರವಾದ ಪರ್ಯಾಯಗಳ ಬಳಕೆಗೆ ಅಗತ್ಯವಾದ ಸಂಪನ್ಮೂಲಗಳು ಈ ವರ್ಗದ ಜನರಲ್ಲಿ ಇಲ್ಲ. ಇವರಿಗೆ ಪರಿಸರಸ್ನೇಹಿ ವಸ್ತುಗಳ ಬಳಕೆಯು ಆಯ್ಕೆಯ ಪ್ರಶ್ನೆಯಾಗಿರದೇ ವೆಚ್ಚದ ಪ್ರಶ್ನೆಯಾಗಿದೆ. ಸ್ಟಾರ್ಚ್ (ಪಿಷ್ಟ) ಆಧಾರಿತ ಪರ್ಯಾಯಗಳು ಪರಿಸರಸ್ನೇಹಿ ಆಗಿದ್ದರೂ ಪ್ಲಾಸ್ಟಿಕ್‌ಗಿಂತ ಶೇ 30ರಷ್ಟು ದುಬಾರಿ ಮತ್ತು ಅವು ದೊಡ್ಡ ನಗರಗಳ ಸಗಟು ವ್ಯಾಪಾರಿಗಳ ಬಳಿ ಮಾತ್ರ ಸಿಗುತ್ತವೆ. ಸಣ್ಣಪಟ್ಟಣಗಳಲ್ಲಿರುವ ವ್ಯಾಪಾರಿಗಳಿಗೆ ಇವುಗಳ ಸಾಗಣೆಯೂ ಭಾರಿ ಪ್ರಯಾಸದ ಕೆಲಸವಾಗಿದೆ.

ಪ್ಲಾಸ್ಟಿಕ್ ಪೂರೈಕೆ ಸರಪಳಿಯಲ್ಲಿ ಪ್ರಮುಖ ಪಾಲುದಾರರಾದ ಉತ್ಪಾದಕರು, ವಿತರಕರು ಮತ್ತು ಎಫ್‌ಎಂಜಿಜಿ ಬ್ರ್ಯಾಂಡ್‌ಗಳು ಯಾವುದೇ ತೊಂದರೆ ಇಲ್ಲದೇ ಕಾರ್ಯಾಚರಣೆ ಮಾಡುತ್ತಿರುತ್ತವೆ. ಆದರೆ, ಅಧಿಕಾರಿಗಳು ಕೆಳಹಂತದ ಬಳಕೆದಾರರಾದ ಬೀದಿ ವ್ಯಾಪಾರಿಗಳು, ಸಣ್ಣ ಅಂಗಡಿಗಳು ಮತ್ತು ಅಸಂಘಟಿತ ವ್ಯಾಪಾರಿಗಳ ಮೇಲೆ ಹೆಚ್ಚು ಗಮನ ಹರಿಸುತ್ತಿದ್ದು, ಅವರು ಸರ್ಕಾರದ ನಿಯಮಗಳ ಅಸಮಂಜಸ ಹಾಗೂ ಸ್ವೇಚ್ಛಾನುಸಾರ ಜಾರಿಗೆ ಗುರಿಯಾಗುತ್ತಿದ್ದಾರೆ.

ಬೇಕಿದೆ ಸುಧಾರಿತ ವ್ಯವಸ್ಥೆ

ಅತ್ಯುತ್ತಮ ನೀತಿಗಳು ಯಶಸ್ವಿಯಾಗಬೇಕಾದರೆ ಅದಕ್ಕೆ ಪೂರಕವಾದ ವ್ಯವಸ್ಥೆ ಬೇಕು. ಭಾರತದ ಪ್ಲಾಸ್ಟಿಕ್ ನಿಷೇಧದ ವಿಚಾರದಲ್ಲಿ ಪೂರಕ ವ್ಯವಸ್ಥೆ ಎಂದರೆ, ತ್ಯಾಜ್ಯ ನಿರ್ವಹಣಾ ಮೂಲಸೌಕರ್ಯಗಳು. ಅಂದಾಜಿನ ಪ್ರಕಾರ, ದೇಶದಲ್ಲಿ ಶೇ 60ರಷ್ಟು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಲಾಗುತ್ತದೆ. ಆದರೆ, ಅದರಲ್ಲಿ ಮರುಬಳಕೆ ಮಾಡಲಾಗುತ್ತಿರುವ ಪ್ಲಾಸ್ಟಿಕ್ ಪ್ರಮಾಣ ಅರ್ಧಕ್ಕೂ ಕಡಿಮೆ. ಪ್ಲಾಸ್ಟಿಕ್ ಮರುಬಳಕೆ ಯತ್ನಕ್ಕೆ ಹೆಚ್ಚು ಕೊಡುಗೆ ನೀಡುತ್ತಿರುವವರು ತ್ಯಾಜ್ಯ ಸಂಗ್ರಾಹಕರು ಮತ್ತು ಕಸ ಬೇರ್ಪಡಿಸುವಂತಹ ಅಸಂಘಟಿತ ಕಾರ್ಮಿಕರು. ಈ ವಿಚಾರದಲ್ಲಿ ಅವರು ನಿರ್ವಹಿಸುತ್ತಿರುವ ಪಾತ್ರ ನಿರ್ಣಾಯಕವಾದರೂ ಅವರ ಕೆಲಸವನ್ನು ಕಡೆಗಣಿಸಲಾಗುತ್ತಿದೆ. ಅವರಿಗೆ ಬೆಂಬಲವೂ ಸಿಗುತ್ತಿಲ್ಲ.

ದೇಶದಲ್ಲಿ ತ್ಯಾಜ್ಯ ವಿಂಗಡಣೆ ಮತ್ತು ಸಂಸ್ಕರಣೆ ಸೌಲಭ್ಯಗಳಲ್ಲಿ ಕೊರತೆ ಇದೆ. ಇಂದೋರ್ ಮತ್ತು ಪುಣೆಯಂತಹ ನಗರಗಳು ಕಸ ಸಂಗ್ರಹಣೆಯಲ್ಲಿ ವಿಕೇಂದ್ರೀಕರಣ, ನಾಗರಿಕರ ತೊಡಗಿಸಿಕೊಳ್ಳುವಿಕೆ ಮತ್ತು ಜಾಗೃತಿ ಕಾರ್ಯಕ್ರಮಗಳಿಗೆ ಹೂಡಿಕೆ ಮಾಡುವ ಮೂಲಕ ಗಮನಾರ್ಹ ಸಾಧನೆ ಮಾಡಿವೆ. ಆದರೆ, ಇಂತಹ ಉದಾಹರಣೆಗಳು ಒಂದು ನಿಯಮವಾಗಿ ರೂಪುಗೊಳ್ಳುವುದರ ಬದಲು ಅಪವಾದವಾಗಿ ಉಳಿದಿವೆ. ದೇಶದ ಸಣ್ಣ ಪಟ್ಟಣಗಳು, ಅರೆ ನಗರ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತಗಳು ಅನುದಾನದ ಕೊರತೆ, ಸಾಗಣೆ ಸವಾಲುಗಳು ಹಾಗೂ ತರಬೇತಿ ಮತ್ತು ಮೂಲಸೌಕರ್ಯಗಳ ಕೊರತೆ ಎದುರಿಸುತ್ತಿವೆ.

ಇವುಗಳ ಪರಿಣಾಮವನ್ನು ನಾವು ದೇಶದಾದ್ಯಂತ ಕಾಣುತ್ತಿದ್ದೇವೆ. ನದಿಗೆ ಪ್ಲಾಸ್ಟಿಕ್ ಎಸೆಯುವುದು ಅಥವಾ ದಡದಲ್ಲಿ ಪ್ಲಾಸ್ಟಿಕ್‌ಗೆ ಬೆಂಕಿ ಹಚ್ಚುವುದನ್ನು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ನಿಷೇಧಿಸಿದ್ದರೂ ಸಮರ್ಪಕವಾಗಿ ನಿರ್ವಹಿಸಿದ ಪ್ಲಾಸ್ಟಿಕ್ ತ್ಯಾಜ್ಯವನ್ನು ಚೆನ್ನೈನ ಅಡ್ಯಾರ್ ನದಿ ತೀರದಲ್ಲಿ ಎಸೆಯುವುದು, ಬೆಂಕಿ ಹಚ್ಚುವುದನ್ನು ನಿರಂತರವಾಗಿ ಮಾಡಲಾಗುತ್ತಿದೆ.

ಭರವಸೆದಾಯಕ ಪ್ರಯತ್ನಗಳು

ಈ ಎಲ್ಲ ಸಂಕೀರ್ಣತೆಗಳ ನಡುವೆಯೂ ದೇಶದಾದ್ಯಂತ ವಿವಿಧ ನಗರಗಳು ಮತ್ತು ಸಮುದಾಯಗಳಲ್ಲಿ ಸದ್ದುಗದ್ದಲವಿಲ್ಲದೆ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಆಶಾದಾಯಕ ಬೆಳವಣಿಗೆಗಳು ನಡೆಯುತ್ತಿವೆ.

ಗುಜರಾತ್‌ನ ವಡೋದರಾದಲ್ಲಿ ವಿಶ್ವಮಿತ್ರಿ ನದಿಯ ಪುನಶ್ಚೇತನ ಕಾರ್ಯ ನಡೆಯುತ್ತಿದೆ. ಈ ಪ್ರಯತ್ನದ ಭಾಗವಾಗಿ ನದಿಯಿಂದ ಪ್ಲಾಸ್ಟಿಕ್ ತೆರವುಗೊಳಿಸುವ ಕಾರ್ಯದಲ್ಲಿ ಸ್ಥಳೀಯ ಸ್ವಚ್ಛತಾ ಕಾರ್ಮಿಕರು ಮತ್ತು ಚಿಂದಿ ಆಯುವವರನ್ನು ಸೇರಿಸಿಕೊಳ್ಳಲಾಗಿದೆ. ತಳಮಟ್ಟದ ಈ ಸಹಭಾಗಿತ್ವವು ನದಿಯ ಪರಿಸರ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸುವುದರ ಜೊತೆಗೆ ಅಸಂಘಟಿತ ಕಾರ್ಮಿಕರಿಗೂ ಮನ್ನಣೆ ಮತ್ತು ಘನತೆಯನ್ನು ತಂದುಕೊಡುತ್ತದೆ. ಉತ್ಪಾದನೆಯಾಗುವ ತ್ಯಾಜ್ಯವನ್ನು ಸ್ಥಳೀಯವಾಗಿಯೇ ಸಂಸ್ಕರಣೆ ಮಾಡುವ ಉದ್ದೇಶದಿಂದ ಪಂಚಾಯಿತಿ ಮಟ್ಟದಲ್ಲಿ ಪ್ಲಾಸ್ಟಿಕ್ ಕತ್ತರಿಸುವ ಸರಳ ಸಾಧನಗಳನ್ನು ಕೇರಳದಲ್ಲಿ ಸಣ್ಣ ಗ್ರಾಮಗಳು ಅಳವಡಿಸಿಕೊಳ್ಳಲು ಆರಂಭಿಸಿವೆ. ದೇಶದ ವಿವಿಧ ನಗರ ಪಾಲಿಕೆಗಳು ಕೂಡ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಭುವನೇಶ್ವರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಅಡಿಯಲ್ಲಿ ಭಿನ್ನವಾದ ಮಾದರಿ ಕ್ರಮವೊಂದನ್ನು ಜಾರಿಗೆ ತರಲಾಗಿದೆ. ಪ್ಲಾಸ್ಟಿಕ್ ಬಳಕೆಗಾಗಿ ವ್ಯಾಪಾರಿಗಳಿಗೆ ದಂಡ ವಿಧಿಸಿದಾಗ, ಆ ದಂಡಕ್ಕೆ ಸರಿಸಮಾನದ ಮೌಲ್ಯದ ವಸ್ತ್ರದ ಚೀಲಗಳನ್ನು ವ್ಯಾಪಾರಿಗಳಿಗೆ ನೀಡಲಾಗುತ್ತಿದೆ.

ಪರಿಹಾರ ಏನು?

ಈ ಸಮಸ್ಯೆಗೆ ಸರಳವಾದ, ಏಕಪರಿಹಾರದ ದಾರಿ ಇಲ್ಲ. ಸಂಬಂಧಿಸಿದ ಪಾಲುದಾರರೆಲ್ಲರೂ ಒಟ್ಟಾಗಿ, ಪರಸ್ಪರ ಸಮನ್ವಯದಿಂದ ಕ್ರಮ ಕೈಗೊಳ್ಳಬೇಕಿದೆ.

ನಿಯಂತ್ರಣ ಕ್ರಮಗಳು ಗ್ರಾಹಕ ಬಳಕೆಗೆ ಸೀಮಿತವಾಗದೆ ಅದರ ಆಚೆಗೂ ಇರಬೇಕು ಎಂಬ ಅಭಿಪ್ರಾಯ ನೀತಿ ನಿರೂಪಣೆಯ ಹಂತದಲ್ಲಿ ಮನ್ನಣೆ ಗಳಿಸುತ್ತಿದೆ. ತಯಾರಕರ ವಿಸ್ತೃತ ಜವಾಬ್ದಾರಿಗಳನ್ನು ಇನ್ನಷ್ಟು ಬಲಪಡಿಸುವುದು ಮತ್ತು ರಾಜ್ಯ ಮಟ್ಟದ ಕ್ರಮಗಳನ್ನು ರಾಷ್ಟ್ರೀಯ ಗುರಿಗಳೊಂದಿಗೆ ಜೋಡಿಸುವುದರಿಂದ ಹೆಚ್ಚಿನ ಉತ್ತರದಾಯಿತ್ವವನ್ನು ನಿಗದಿಪಡಿಸುವುದಕ್ಕೆ ಸಾಧ್ಯ. ಸಣ್ಣ ಉದ್ದಿಮೆಗಳು ಏಕ ಬಳಕೆ ಪ್ಲಾಸ್ಟಿಕ್‌ರಹಿತವಾಗಿ ವಹಿವಾಟು ನಡೆಸುವುದನ್ನು ಹೆಚ್ಚು ಪ್ರಾಯೋಗಿಕವಾಗಿ ಜಾರಿಗೆ ತರಬೇಕು. ಆರ್ಥಿಕ ಪ್ರೋತ್ಸಾಹ, ಸುಸ್ಥಿರ ಪ್ಯಾಕೇಜಿಂಗ್ ವಸ್ತುಗಳ ಸಗಟು ಖರೀದಿ ಮತ್ತು ಪೂರೈಕೆ ಸರಪಳಿಗಳಲ್ಲಿ ಬಂಡವಾಳ ಹೂಡಿಕೆ ಮಾಡುವುದು ಅಗತ್ಯವಾಗಿದೆ.

ಈ ದಾರಿಯಲ್ಲಿ ಭಾರತವು ಏಕಾಂಗಿಯಾಗಿ ನಡೆಯಬೇಕಾಗಿಲ್ಲ. ಜಾಗತಿಕ ಪ್ಲಾಸ್ಟಿಕ್ ಒಪ್ಪಂದದ ಕುರಿತಾಗಿ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಚರ್ಚೆ ವೇಗ ಪಡೆಯುತ್ತಿರುವ ಈ ಹೊತ್ತಿನಲ್ಲಿ ಭಾರತವು ತನ್ನ ವಿಶಿಷ್ಟ ಅಭಿವೃದ್ಧಿ ಮಾದರಿ ಸೃಷ್ಟಿಸುವುದು, ಪರಿಸರಕ್ಕೆ ಸಂಬಂಧಿಸಿದ ನಾಯಕತ್ವ ವಹಿಸುವುದು, ದೇಶೀಯ ಪ್ರಯತ್ನಗಳನ್ನು ಅಂತರರಾಷ್ಟ್ರೀಯ ಸಹಕಾರದೊಂದಿಗೆ ಜೋಡಿಸುವುದರ ಮೂಲಕ ಈ ಚೌಕಟ್ಟುಗಳಿಗೆ ರೂಪ ನೀಡಲು ಭಾರತ ನೆರವಾಗಬಹುದು.

ಲೇಖಕರಾದ ವೆಂಕಟೇಶ್ ರಾಘವೇಂದ್ರ ಅವರ ಜಾಗತಿಕ ಮಟ್ಟದ ಸಾಮಾಜಿಕ ಉದ್ಯಮಿ. ಪ್ರಜ್ಞಾರಾಜ್ ಸಿಂಗ್ ಅವರು ನೀತಿ ನಿರೂಪಣೆ, ಸಮುದಾಯ ಆಧಾರಿತ ಚಟುವಟಿಕೆಗಳ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಅಭಿವೃದ್ಧಿ ವೃತ್ತಿಪರರಾಗಿದ್ದಾರೆ. ಶ್ರುತಕೀರ್ತಿ ಶ್ರೀರಾಮ್ ಅವರು ವಕೀಲರು ಮತ್ತು ಸಾರ್ವಜನಿಕ ನೀತಿ ನಿರೂಪಕ.

ರಾಷ್ಟ್ರೀಯ

ಅಯೋಧ್ಯೆ: 2ನೇ ಪ್ರಾಣ ಪ್ರತಿಷ್ಠಾಪನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯ ರಾಮ ಮಂದಿರ ಸಂಕೀರ್ಣದಲ್ಲಿರುವ ಎಂಟು ದೇವಾಲಯಗಳಲ್ಲಿನ ಎರಡನೇ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ಕೆ ಗಣೇಶ ಪೂಜೆ ನೆರವೇರಿಸುವುದರೊಂದಿಗೆ ಮಂಗಳವಾರ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

ಧಾರ್ಮಿಕ ವಿಧಿಗಳು ಮೂರು ದಿನ ನೆರವೇರಲಿದ್ದು, ಪೂಜೆ, ಭೋಗ ಮತ್ತು ಆರತಿಯೊಂದಿಗೆ ಪ್ರಾಣ ಪ್ರತಿಷ್ಠಾಪನೆ ಗುರುವಾರ ಮುಕ್ತಾಯ-ವಾಗಲಿದೆ. ರಾಮ ಮಂದಿರವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸ-ಲಾಗಿದ್ದು, ಕಣ್ಮನ ಸೆಳೆಯುತ್ತಿದೆ.

ಸರಯೂ ನದಿಯ ಪವಿತ್ರ ಜಲ ತುಂಬಿದ ಕಲಶಗಳ ಮೆರವಣಿಗೆಗೆ ನದಿಯ ಪೂರ್ವ ತೀರದಲ್ಲಿ ಸೋಮವಾರ ಚಾಲನೆ ನೀಡಲಾಗಿತ್ತು. ಕಲಶಗಳ ಮೆರವಣಿಗೆ ಯಜ್ಞಶಾಲೆ ತಲುಪಿದ್ದು, ಈ ಪವಿತ್ರ ಜಲವನ್ನು ಮೂರು ದಿನಗಳ ಕಾಲ ನಡೆಯುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ಕೆ ಬಳಸಲಾಗುತ್ತದೆ ಎಂದು ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪದಾಧಿಕಾರಿಗಳು ಹೇಳಿದ್ದಾರೆ.

ಆಗ ಬಾಲ ರಾಮ–ಈಗ ರಾಜನ ರೂಪ: ಕಳೆದ ವರ್ಷ ಜನವರಿ 22ರಂದು ನಡೆದಿದ್ದ ಕಾರ್ಯಕ್ರಮದಲ್ಲಿ ಬಾಲ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯನ್ನು ನೆರವೇರಿಸಲಾಗಿತ್ತು. ಈಗ ನಡೆಯುವ ಕಾರ್ಯಕ್ರಮದಲ್ಲಿ ರಾಜನಾಗಿ ಪಟ್ಟವೇರಿದ ರಾಮ ದೇವರ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಾಗುತ್ತದೆ ಎಂದು ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ.

ದೇವಸ್ಥಾನದ ಮೊದಲ ಮಹಡಿಯಲ್ಲಿ ರಾಮ ದೇವರ ರಾಜಾಂಗಣ ಇರಲಿದೆ. ಇಲ್ಲಿ, ರಾಮ ದೇವರ ಸಹೋದರರಾದ ಲಕ್ಷ್ಮಣ, ಭರತ ಮತ್ತು ಶತ್ರುಘ್ನ ಹಾಗೂ ಹನುಮಂತ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುವುದು ಎಂದು ಹೇಳಿದ್ದಾರೆ.

ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ 108 ವೇದ ವಿದ್ವಾಂಸರು ಧಾರ್ಮಿಕ ವಿಧಿಗಳನ್ನು ನಡೆಸಿಕೊಡಲಿದ್ದು, ವಾರಾಣಸಿಯ ಪಂಡಿತ ಜೈಪ್ರಕಾಶ ನೇತೃತ್ವ ವಹಿಸುವರು.

'ದೇಶದ ವಿವಿಧ ಭಾಗಗಳ ಲಕ್ಷಾಂತರ ಭಕ್ತರು ಈ ಮೂರು ದಿನ ನಡೆಯುವ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಇದೊಂದು ಐತಿಹಾಸಿಕ ಕಾರ್ಯ-ಕ್ರಮವಾಗಲಿದೆ' ಎಂದು ಟ್ರಸ್ಟ್ ಪದಾಧಿಕಾರಿಗಳು ಹೇಳಿದ್ದಾರೆ.

ತೀವ್ರ ಕಟ್ಟೆಚ್ಚರ

ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಕಾರಣ, ಅಯೋಧ್ಯೆಯಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಭಾರಿ ಬಂದೋಬಸ್ತ್ ಏರ್ಪ-ಡಿಸಲಾಗಿದೆ. ಭದ್ರತೆಗಾಗಿ ಭಯೋತ್ಪಾದಕ ನಿಗ್ರಹ ದಳದ ಕಮಾಂಡೊಗಳನ್ನು ನಿಯೋಜನೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಮೂರು ದಿನ, ಮೊದಲ ಮಹಡಿ ಪ್ರವೇಶಿಸುವುದರ ಮೇಲೆ ನಿರ್ಬಂಧ ವಿಧಿಸಲಾಗಿದೆ ಎಂದೂ ತಿಳಿಸಿವೆ.

ಪೋಕ್ಸೊ: ಸಮುದಾಯ ಸೇವೆ ಮಾಡಲು ಆರೋಪಿಗೆ ಸೂಚನೆ

ನವದೆಹಲಿ (ಪಿಟಿಐ): ಪೋಕ್ಸೊ ಪ್ರಕರಣವೊಂದರ ಆರೋಪಿ ಮೇಲಿನ ಎಫ್‌ಐಆರ್ ರದ್ದುಗೊಳಿಸಿರುವ ದೆಹಲಿ ಹೈಕೋರ್ಟ್, ಆರೋಪಿಯು ಲೋಕ ನಾಯಕ ಜೈ ಪ್ರಕಾಶ್ ನಾರಾಯಣ್ ಆಸ್ಪತ್ರೆಯಲ್ಲಿ 1 ತಿಂಗಳವರೆಗೆ ಸಮುದಾಯ ಸೇವೆ ಸಲ್ಲಿಸಬೇಕು. ಜೊತೆಗೆ ಗಾಯಗೊಂಡ ಸೈನಿಕರ ಅಭಿವೃದ್ಧಿ ನಿಧಿಗೆ ₹50 ಸಾವಿರ ನೀಡಬೇಕು ಎಂದು ನಿರ್ದೇಶಿಸಿದೆ.

ಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಯಾಗಿದ್ದ ಆರೋಪಿಯು ಮತ್ತು ಸಂತ್ರಸ್ತೆಯು ಪ್ರೇಮಿಸುತ್ತಿದ್ದರು. '₹6 ಸಾವಿರ ನೀಡು, ಇಲ್ಲವಾದಲ್ಲಿ ನಿನ್ನ ಖಾಸಗಿ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತೇನೆ ಎಂದು ಆರೋಪಿಯು ಸಂತ್ರಸ್ತೆಗೆ-ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ' ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿತ್ತು.

'ಪ್ರೇಮ ಸಂಬಂಧದಲ್ಲಿ ಖಾಸಗಿ ಫೋಟೊಗಳನ್ನು ವಿನಿಮಯ ಮಾಡಿಕೊಳ್ಳುವುದು ಸಾಮಾನ್ಯ' ಎಂದು ವಿಚಾರಣೆಯ ವೇಳೆ ಆರೋಪಿಯು ಹೇಳಿದ್ದರು.

2017ರಲ್ಲಿ ಈ ಘಟನೆ ನಡೆದಿತ್ತು. 2018ರಿಂದ ಬೆದರಿಕೆ ಒಡ್ಡುತ್ತಾ, ಹಲವು ತಿಂಗಳ ಕಾಲ ಆರೋಪಿಯು ಹಣ ಪಡೆದುಕೊಂಡಿದ್ದರು. ಕೆಲವು ತಿಂಗಳ ಬಳಿಕ ಆತನ ಸ್ನೇಹಿತರೂ ಸಂತ್ರಸ್ತೆಗೆ ಬ್ಲ್ಯಾಕ್‌ಮೇಲ್ ಮಾಡಿದ್ದರು. ಭಯದ ಕಾರಣ, ಸಂತ್ರಸ್ತೆ ಇವರಿಗೂ ಹಣ ನೀಡಿದ್ದಾರೆ. 2019ರಲ್ಲಿ ಆರೋಪಿಯ ಮೇಲೆ ಎಫ್‌ಐಆರ್ ದಾಖಲಾಗಿತ್ತು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 4, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ನವಮಿ ಗಂ. 23-55 ನಕ್ಷತ್ರ: ಉತ್ತರ ಫಲ್ಗುಣಿ ಗಂ. 27-36 ಯೋಗ: ವಜ್ರ ಗಂ. 8-29 ಕರಣ: ಬಾಲವ ಗಂ. 10-52, ವೃಷಭ ಮಾಸದ 21 ನೇ ದಿನ.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 06-06 ಸೂರ್ಯಾಸ್ತ: 06-51

ಮುಸ್ಲಿಂ ದಿನಾಂಕ: 07 ಜುಲ್‌ಹಿಜಾ

ಅದೃಷ್ಟ ಸಂಖ್ಯೆ: 3, 7

ಮೇಷ: ಹೆಚ್ಚಿನ ಕಡೆ ಜಗಳವನ್ನು ತಣಿಸಲು ಪ್ರಯೋಜನವಾಗುವ ಹಾಸ್ಯಪ್ರವೃತ್ತಿಯು ಕೈ ಬಿಡುವ ಸಾಧ್ಯತೆ ಇದೆ. ಹಾಸ್ಯದ ಮಾತು ಗಾಯದ ಮೇಲೆ ಪುನಃ ಬರೆ ಎಳೆದಂತೆ ಆಗಬಹುದು.

ವೃಷಭ: ಸಹೋದರ ಸಹೋದರಿಯರ ಬೇಜವಾಬ್ದಾರಿಯಿಂದ ಮನೆಯಲ್ಲಿ ಸಣ್ಣ-ಪುಟ್ಟ ನಷ್ಟ ಸಂಭವಿಸುವ ಲಕ್ಷಣವಿದೆ. ಬರಹಗಾರರಂಥ ಕ್ರಿಯಾತ್ಮಕ ಕೆಲಸಗಳಲ್ಲಿ ಇರುವವರಿಗೆ ಉತ್ತಮ ಅವಕಾಶಗಳು ಅರಸಿಕೊಂಡು ಬರುತ್ತವೆ.

ಮಿಥುನ: ಹಿರಿಯರ ಆಶೀರ್ವಾದದೊಂದಿಗೆ ಕಾರ್ಯವನ್ನು ಆರಂಭಿಸಿ. ಒಳ್ಳೆಯದಾಗುತ್ತದೆ. ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಲು ಪ್ರಯತ್ನಿಸುವಿರಿ. ಸ್ವಉದ್ಯೋಗಿಗಳಿಗೆ ಪರಿಶ್ರಮದಿಂದ ಅಧಿಕ ಸಂಪಾದನೆ ಇರುವುದು.

ಕರ್ಕಾಟಕ: ಅಧ್ಯಯನ ಪೂರ್ಣಗೊಳಿಸಿದ ವೈದ್ಯಕೀಯ ವಿದ್ಯಾರ್ಥಿಗಳು ಧೈರ್ಯದಿಂದ ಮತ್ತು ಅಧಿಕ ಪ್ರಯತ್ನ ಬಲದಿಂದ ಕಾರ್ಯದಲ್ಲಿ ಮುನ್ನುಗ್ಗಿ. ಮಕ್ಕಳ ವಿದ್ಯಾಭ್ಯಾಸ ಉತ್ತಮವಾಗಿರುವುದು. ಶುಭ ಸುದ್ದಿ ಕೇಳುವಿರಿ.

ಸಿಂಹ: ಉದ್ಯೋಗದಲ್ಲಿ ಬದಲಾವಣೆಯ ಸಂಭವವಿದೆ. ಜನಸಂಪರ್ಕದ ಮತ್ತು ಆರ್ಥಿಕ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯುವುದು. ದುರ್ಗಾದೇವಿಯಲ್ಲಿ ಶರಣಾಗುವುದರಿಂದ ಶುಭ ಸಂತೋಷ ಪ್ರಾಪ್ತಿ.

ಕನ್ಯಾ: ಅವಿವಾಹಿತರಿಗೆ ಮಾತೃವರ್ಗದ ಕಡೆಯಿಂದ ಅಪೇಕ್ಷಿಸಿದ ರೀತಿಯಲ್ಲಿಯೇ ಸಂಬಂಧ ಅರಸಿ ಬರುವುದು. ಪರಿಶ್ರಮಕ್ಕೆ ತಕ್ಕ ಫಲವನ್ನು ನಿರೀಕ್ಷಿಸಬಹುದು. ಸಾಧುಸಂತರ ದರ್ಶನದಿಂದ ಶುಭವಾಗುವುದು.

ತುಲಾ: ಪರಿಶ್ರಮವಿದ್ದರೂ, ಅನುಭವವಿದ್ದರೂ ರಾಜಕೀಯ ಭವಿಷ್ಯಕ್ಕೆ ತೊಂದರೆಯಾಗುವ ಲಕ್ಷಣವಿದೆ. ಕಾರ್ಯವೈಖರಿ ಕುದೃಷ್ಟಿದೋಷಕ್ಕೆ ಕಾರಣವಾಗಬಹುದು. ಆಸ್ತಿಗೆ ಸಂಬಧಿಸಿದ ನಿರ್ಧಾರಗಳನ್ನು ಸರಿಯಾಗಿ ತೆಗೆದುಕೊಳ್ಳಿ.

ವೃಶ್ಚಿಕ: ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದರೂ ಅದು ಅಷ್ಟು ಸುಲಭವಾಗಿ ಬಿಡುವುದಿಲ್ಲ. ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗುವ ಸಂದರ್ಭದ ಜತೆ ದೂರ ಪ್ರಯಾಣದ ಯೋಗವಿದೆ.

ಧನು: ಕೌಟುಂಬಿಕ ಸಮಸ್ಯೆಗೆ ಧಾರ್ಮಿಕವಾಗಿ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಡೆಸಿ. ಜೀವನಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದುಕೊಳ್ಳುವ ಸನ್ನಿವೇಶ ಬರಲಿದೆ. ಕೆಂಪು ಉಡುಪು ಶುಭದಾಯಕ.

ಮಕರ: ವೃತ್ತಿಯ ಕೆಲಸವನ್ನು ಆಲಸ್ಯದಿಂದಾಗಲಿ ಅಥವಾ ತಾಂತ್ರಿಕ ದೋಷದಿಂದಾಗಲಿ ಮುಂದೂಡುವುದು ಸರಿಯಲ್ಲ. ವಾತಾವರಣದ ಬದಲಾವಣೆಯಿಂದಾಗಿ ಅನಾರೋಗ್ಯ ಸ್ಥಿತಿ ಎದುರಾಗಬಹುದು.

ಕುಂಭ: ಯಶಸ್ಸನ್ನು ಹೊಂದಲು ನೀವು ಅನುಸರಿಸುತ್ತಿರುವ ಹಳೆ ದಾರಿಯನ್ನು ಬಿಟ್ಟು ಉತ್ತಮ ಹಾಗೂ ಹೊಸಮಾರ್ಗವನ್ನು ಕಂಡು ಹಿಡಿದುಕೊಳ್ಳಬೇಕು. ಒಡಹುಟ್ಟಿದವರನ್ನು ಹೊರಗಿನವರಂತೆ ಕಾಣುವುದು ಸರಿಯಲ್ಲ.

ಮೀನ: ಮೈಮರೆಯುವಿಕೆಯಿಂದ ಕೆಲವು ವಿಷಯಗಳ ಮೇಲೆ ಗಮನ ಕಡಿಮೆಯಾಗಿ ಎಡವಟ್ಟುಗಳು ಆಗಬಹುದು. ವಿವಾದಾತ್ಮಕ ವಿಷಯದಲ್ಲಿ ಮಧ್ಯಪ್ರವೇಶ ಮಾಡದಿರಿ. ಕೆಟ್ಟವರಾಗಲು ಕಡಿಮೆ ಸಮಯ ಸಾಕು.

ರೆಕ್ಕೆ ಇದ್ದರೂ ಸಾಕು

ನುಡಿ ಬೆಳಗು — ವಾಸುದೇವ ನಾಡಿಗ್

ಎರಡು ಹಕ್ಕಿಗಳು ಬಾದಾಮಿ ಮರದ ದಟ್ಟವಾದ ಎಲೆಗಳ ಮಧ್ಯದ ರೆಂಬೆಯ ಮೇಲೆ ಗೂಡು ಕಟ್ಟಿದ್ದವು. ತಮ್ಮದೇ ಬಿಂಬದ ಹಾಗೆ ಒಡಲು ಕೂಡಿ ಒಡ ಮೂಡಲಿರುವ ಮರಿಗಳಿಗಾಗಿ ಆ ಮನೆ ಹೆಣಿಗೆ. ತಾಯಿ ಹಕ್ಕಿ ಮೊಟ್ಟೆ ಇಟ್ಟ ಗಳಿಗೆಯಿಂದ ತಂದೆ ಹಕ್ಕಿಗೆ ನಿಮಿಷಕ್ಕೆ ಒಮ್ಮೆ ಬಂದು ಬಂದು ಇಣುಕಿ ನೋಡುವ ಪರಿಪಾಟ. ಪರ್‍ರಂತ ಆಹಾರಕ್ಕಾಗಿ ಎಲ್ಲೇ ಹಾರಿಹೋದರೂ ಕೊಕ್ಕಿನಲ್ಲಿ ಒಂದೆರಡು ಹುಲ್ಲು ಗರಿ ತಂದು ಹೊದಿಸುವ ಸಡಗರ. ತಾಯಿಹಕ್ಕಿ ಅಲ್ಲೇ ಕೂತು ಮುಗುಳ್ನಗು. ಈ ಪರಿಯ ಕಾಳಜಿಯನ್ನು ಕಂಡು ಕಿಸಕ್ಕನೆ ನಗುತ್ತಿತ್ತು.

ಹುಲ್ಲಿನ ಗೂಡಾಗಲಿ ಇಟ್ಟಿಗೆ ಮನೆಯಾಗಲಿ ಬದಲಾವಣೆ ತಪ್ಪಿದ್ದಲ್ಲ ಅಲ್ಲವೆ? ರೂಪಗಳು ಬೇರೆ ಇರಬಹುದು. ತುಡಿತ ಭವ ಭಾವ ಸಂವೇದನೆ ಒಂದೇ. ಕಳ್ಳ ಬೆಕ್ಕಿನಿಂದ ಮೊಟ್ಟೆ ಮರಿಗಳನ್ನು, ಅವಘಡಗಳಿಂದ ಸಂತಾನವನ್ನು ರಕ್ಷಿಸಲೇಬೇಕಿತ್ತು. ಬಾದಾಮಿ ಮರವಿರಲಿ, ಸಂಪಿಗೆ ಮರವಿರಲಿ ಸಂತಾನದ ತೊಟ್ಟಿಲು ಹೇಗಿದ್ದರೂ ಬೆಕ್ಕಿನ ರೂಪದಲ್ಲಿ ಬರುವ ಬೇಟೆಗಾರ ಮತ್ತು ಸಾವಿನ ಭಯ ತಪ್ಪಿದ್ದಲ್ಲ. ಹಾಗಂತ ಹೆದರಿ ಜಾಲಿ ಮುಳ್ಳ ಮೇಲೆ ಗೂಡು ಕಟ್ಟಲಾಗದು. ಸಾವು ನೋವಿಗೆ ಹೆದರಿ ಬಾಳಿನ ನಿರಂತರತೆಯೂ ನಿಲ್ಲಬಾರದು.

ವಾಸ್ತವವೂ ಹೀಗೆಯೇ ಇರುತ್ತದೆ. ಮೊಟ್ಟೆ ಒಡೆದು ಹೊರಬರುವ ತನಕದ ತವಕ ಅನಂತರ ಮೊಟ್ಟೆಯೊಡೆದು ಹೊರಬರುವ ಜೀವ ಧ್ವನಿಗಳ ಪೊರೆಯುವುದು. ಹಾವು ಬೆಕ್ಕು ಗಾಳಿ ಮಳೆ ಬೆಂಕಿ ಏನೇ ಇರಲಿ ಕಾಯುವ ಒಂದು ಹಾಜರಾತಿ ಮತ್ತು 'ಕುಶಲವೇ' ಎಂಬ ಒಂದು ಇಣುಕು ನೋಟ. ಅಷ್ಟಕ್ಕೂ ಬೆಕ್ಕು ಮರ ಏರಿ ಬಂದರೆ ಯುದ್ಧ ಹೂಡಿ ಎದುರಿಸುವ ಛಾತಿ ಹಕ್ಕಿಗಳಿಗೆ ಇದೆಯೆ? ಒಂದೊಮ್ಮೆ ಅನಾಹುತ ಸಂಭವಿಸಿದರೆ ಕೂಡಾ ಬಾಳಿನ ಕ್ರಮ ನಿಲ್ಲದಲ್ಲವೆ? ಅಪ್ಪನ ಕಾವಲುಗಾರಿಕೆ ಮತ್ತು ಅಮ್ಮನ ಅಪ್ಪುಗೆಗಳ ಮಧ್ಯೆ ರೆಕ್ಕೆ ಬಲಿತ ಮೇಲೆ ಆಕಾಶಕ್ಕೆ ಚಿಮ್ಮಲೇ ಬೇಕು. ಬೆಕ್ಕಿನ ಭಯ ಇಲ್ಲದಿದ್ದರೆ ಕೂಡಾ ಅಸ್ತಿತ್ವಕ್ಕಾಗಿ ಹೋರಾಡುವ ಬೇರೆ ಬೇರೆ ಮಗ್ಗಲುಗಳನ್ನು ದಾಟಲೇಬೇಕು. ಕನಸುಗಳೂ ಹೀಗೆಯೇ... ಅರಮನೆ, ಗುಡಿಸಲು, ಬೀದಿ, ಬಯಲು... ಯಾವ ಮಿತಿಯೂ ಇಲ್ಲ. ಕನಸುಗಳು ಎಲ್ಲರ ಸ್ವತ್ತು. ಅದನ್ನು ಪೊರೆಯಬೇಕು. ಮೊಟ್ಟೆಯ ಮೈ ಸೀಳಿ ಹೊರಬರಲು ಅನೇಕ ಸವಾಲುಗಳು. ಹೊರಬಂದ ಮೇಲೂ ಹಲವು ಬಗೆಯ ಸಿಕ್ಕುಗಳು. ಭರವಸೆಯನ್ನು ಹೊತ್ತು ಸಾಗುವ ರೆಕ್ಕೆಗಳು ನಿತ್ಯದ ಬೆಳಗಿಗಾಗಿ ಕಾಯುತ್ತವೆ. ಹಕ್ಕಿಗಳೇ ಆಗಲಿ ಮನುಷ್ಯರೇ ಆಗಲಿ ಇಕ್ಕಟ್ಟಿನ ಗೂಡಿನಲ್ಲಿ ಚಿಗುರಿ ಅಂಬರಕ್ಕೆ ಹಾತೊರೆಯುತ್ತಲೇ ಇರುವುದೇ ಬದುಕು.

ಪದಬಂಧ 6063

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜೇನನ್ನು ಹಿಡಿದಿಟ್ಟ ತಿಂಗಳು (4)
3.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
5.ಸಿರಿತನವಲ್ಲ! ದುಡ್ಡಿಲ್ಲದಿರುವಿಕೆ! (4)
7.ಸಂಕ್ರಾಂತಿಯ ಸಂಧಿಕಾಲ (4)
9.ವನವನ್ನು ಪಾಲನೆ ಮಾಡುವವನು (5)
12.ಕೊಬ್ಬಿದ ಆನೆಯಿದು (4)
13.ನವ ದೇವಸ್ಥಾನದ ಸಭಾಮಂಟಪ (4)
15.ಹದ್ದು ಕುಳಿತಿರುವ ಎಲ್ಲೆ! (4)
16.ಈತ ಗುರುತುಳ್ಳವನು (4)

ಮೇಲಿಂದ ಕೆಳಕ್ಕೆ

1.ಮನಸ್ಸಿನ ಶಕ್ತಿ (4)
2.ಈತ ಆನೆ ನಡೆಸುವವನು (3)
4. ನೀರಿನ ಅಧಿದೇವತೆ (3)
6.ನಯನಕ್ಕೆ ಕಂಡದ್ದು ಬಲು ಹೊಸತು (3)
8.ಮುದುಕನ ಹತ್ತಿರವಿರುವ ಅಡಕೆ (3)
9.ವರ್ತಮಾನ ತಿಳಿಸಿದ ವ್ಯಾಪಾರಿ (3)
10.ಶುನಕ ಮೂಸುತ್ತಿರುವ ಬೆಳ್ಳುಳ್ಳಿ (3)
11.ಅಜಗಜಾಂತರದಲ್ಲೇ ಮನ್ಮಥನ ಹೆಸರು ಹುಡುಕಿ (4)
12.ಏರು ತಗ್ಗಿಲ್ಲದಿರುವುದು (3)
14.ಯಾರೀಕೆ? ಬಲು ಬಿಂಕ ತೋರುತ್ತಿಹಳಲ್ಲಾ? (3)

1		2		■	3			4
	■		■	■	■	■	■	
5			6	■	7	8		
	■	■		■	■		■	■
■	■	9			10		■	■
■	■		■	■		■	■	11
12				■	13	14		
	■	■	■	■	■		■	
15				■	16			

6062ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಗಸ 4.ಹೊಡೆತ 6.ಮರಣಕಾಲ 7.ನಪುಂಸಕ 9.ಉಪಕಾರಿ 10.ಅಹವಾಲು 11.ದುರಾಚಾರಿ 13.ಕರತಾಡನ 16.ರಕ್ಕಸ 17.ವದಂತಿ

ಮೇಲಿಂದ ಕೆಳಕ್ಕೆ:
1.ಅನುಮಾನ 2.ಸಮ 3.ಜಾಣ 4.ಹೊಲ 5.ತರಕಾರಿ 8.ಕಡಲು 9.ಉಮೇದು 10.ಅನಾದರ 12.ರಿಯಾಯಿತಿ 13.ಕಸ 14.ತಾರೆ 15.ನವ

ಸುಡೊಕು 6447

	8			5				
1			6		4		7	3
	5			7			2	
5		8	9					
						7	5	2
4		7			6		8	
2		5		9			3	
	6		3		5	2		7
3		9		6			4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6446 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಷೇರುಪೇಟೆ ವಹಿವಾಟು 636



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,716
ಇಂದಿನ ಅಂತ್ಯ	24,542
▼	174
ದಿನದ ಕನಿಷ್ಠ	24,502

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ.ಜಿ)	₹240-562
ದ್ವಿತಳಿ (ಪ್ರ.ಕೆ.ಜಿ)	₹333-688

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹190
ಲಾಟ್	₹181

(ಪ್ರತಿ ಕೆ.ಜಿಗೆ)

ಇನ್ವೆಸ್ಟ್ ಕರ್ನಾಟಕ–2025 ಘೋಷಣೆಗಳ ಸಾಕಾರ: ಎಂ.ಬಿ. ಪಾಟೀಲ

₹3.35 ಲಕ್ಷ ಕೋಟಿ ಹೂಡಿಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: '2025ರ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಒಟ್ಟು ₹10.27 ಲಕ್ಷ ಕೋಟಿ ಹೂಡಿಕೆ ಘೋಷಣೆಯಾಗಿತ್ತು. ಅದರಲ್ಲಿ ಈಗಾಗಲೇ ₹3.35 ಲಕ್ಷ ಕೋಟಿ ಮೊತ್ತದ ಪ್ರಸ್ತಾವಗಳಿಗೆ ಎಲ್ಲ ರೀತಿಯ ಅನುಮೋದನೆಗಳು ಸಿಕ್ಕಿವೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

'ಸಮಾವೇಶದಲ್ಲಿ ₹6.23 ಲಕ್ಷ ಕೋಟಿ ಹೂಡಿಕೆ ಸಂಬಂಧ 98 ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಜತೆಗೆ ಇನ್ನೂ ₹4.03 ಲಕ್ಷ ಕೋಟಿ ಮೊತ್ತದ ಹೂಡಿಕೆಗೆ ಕಂಪನಿಗಳು ಆಸಕ್ತಿ ತೋರಿಸಿದ್ದವು. ಇವುಗಳಲ್ಲಿ ಈಗಾಗಲೇ ₹4.26 ಲಕ್ಷ ಕೋಟಿ ಹೂಡಿಕೆಗಾಗಿ ಕಂಪನಿಗಳು ಏಕಗವಾಕ್ಷಿ ವ್ಯವಸ್ಥೆಯಲ್ಲಿ ಪ್ರಸ್ತಾವಗಳನ್ನು ಸಲ್ಲಿಸಿವೆ' ಎಂದಿದ್ದಾರೆ.

'₹4.26 ಲಕ್ಷ ಕೋಟಿ ಮೊತ್ತದ ಪ್ರಸ್ತಾವಗಳಲ್ಲಿ ₹3.35 ಲಕ್ಷ ಕೋಟಿ ಮೊತ್ತದ ಪ್ರಸ್ತಾವಗಳಿಗೆ ಎಲ್ಲ ರೀತಿಯ ಅನುಮತಿ ಮತ್ತು ಅನುಮೋದನೆ ದೊರೆತಿದೆ. ಇನ್ನೂ ₹90,779 ಕೋಟಿ ಮೊತ್ತದ ಪ್ರಸ್ತಾವಗಳು ಅನುಮೋದನೆಯ ವಿವಿಧ ಹಂತಗಳಲ್ಲಿ ಇವೆ. ₹12,236 ಕೋಟಿಯ ಹೂಡಿಕೆಗಳಿಗೆ ಅಂತಿಮ ಅನುಮೋದನೆ ನೀಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಫೆಬ್ರುವರಿಯಲ್ಲಿ ನಡೆದ 'ಇನ್ವೆಸ್ಟ್ ಕರ್ನಾಟಕ-2025' ಜಾಗತಿಕ ಹೂಡಿಕೆದಾರರ ಸಮಾವೇಶದ ನಂತರ ಎಮ್ವೀ ಎನರ್ಜಿ ಲಿಮಿಟೆಡ್ ₹5,000 ಕೋಟಿ, ದಾಲ್ಮಿಯಾ ಸಿಮೆಂಟ್ ₹3,000 ಕೋಟಿ, ಶ್ರೀ ಸಿಮೆಂಟ್ ₹2,500 ಕೋಟಿ, ಜಾನ್ ಡಿಸ್ಟಿಲರೀಸ್ ₹500 ಕೋಟಿ, ಕಾರ್ಲ್‌ಬರ್ಗ್ ₹350 ಕೋಟಿ, ಸಂವರ್ಧನ ಮದರ್‌ಸನ್ ₹490 ಕೋಟಿ ಹೂಡಿಕೆಗೆ ಅನುಮೋದನೆ ದೊರೆತಿದೆ' ಎಂದು ಇಲಾಖೆ ತಿಳಿಸಿದೆ.

'ಕರ್ನಾಟಕದಲ್ಲಿ ಹೂಡಿಕೆಗೆ ಆಸಕ್ತಿ ಹೆಚ್ಚಾಗಿದೆ'

'ಇನ್ವೆಸ್ಟ್ ಕರ್ನಾಟಕ-2025 ನಂತರ ಕರ್ನಾಟಕದಲ್ಲಿ ಹೂಡಿಕೆಗೆ ಉದ್ಯಮಿಗಳು ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ. ಕರ್ನಾಟಕವನ್ನು ದೇಶದ ಪ್ರಮುಖ ತಯಾರಿಕಾ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಭೂಸ್ವಾಧೀನ, ಕೈಗಾರಿಕಾ ನಿವೇಶನ ಹಂಚಿಕೆ, ಹಣಕಾಸು ನೆರವು-ರಿಯಾಯಿತಿ ಮತ್ತು ಎಲ್ಲ ಅನುಮತಿಗಳನ್ನು ತ್ವರಿತಗತಿಯಲ್ಲಿ ದೊರಕಿಸಿಕೊಡಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದು ಎಂ.ಬಿ.ಪಾಟೀಲ ಅವರು ಹೇಳಿದ್ದಾರೆ.

'ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಹೂಡಿಕೆದಾರರ ಸಮಾವೇಶದಲ್ಲಿ ಆಗಿದ್ದ ಘೋಷಣೆಗಳಲ್ಲಿ ₹4.09 ಲಕ್ಷ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವಗಳಿಗೆ ಈಗ ಅನುಮತಿ ದೊರೆತಿದೆ. ಬಹುತೇಕ ಪ್ರಕ್ರಿಯೆಗಳು ನಮ್ಮ ಸರ್ಕಾರದ ಅವಧಿಯಲ್ಲಿ ಆಗಿವೆ. ಈ ಎಲ್ಲ ಪ್ರಕ್ರಿಯೆಗಳನ್ನು ರಾಜ್ಯ ಸರ್ಕಾರದ ಏಕಗವಾಕ್ಷಿ ವ್ಯವಸ್ಥೆ ಮೂಲಕವೇ ಪೂರ್ಣಗೊಳಿಸಲಾಗಿದೆ. ಅನುಮತಿ ದೊರೆತಿರುವ ₹4.09 ಲಕ್ಷ ಕೋಟಿ ಪ್ರಸ್ತಾವಗಳಲ್ಲಿ, ಸುಮಾರು ₹1.87 ಲಕ್ಷ ಕೋಟಿ ಮೊತ್ತದ ಹೂಡಿಕೆಗಳ ಕೆಲಸಗಳು ಆರಂಭವಾಗಿವೆ' ಎಂದು ಸಚಿವ ಪಾಟೀಲ ಅವರು ತಿಳಿಸಿದ್ದಾರೆ.

ಆ.3ಕ್ಕೆ ನೀಟ್–ಪಿಜಿ ಸಾಧ್ಯತೆ

ನವದೆಹಲಿ: 'ನೀಟ್ -ಪಿಜಿ' ಅನ್ನು ಆಗಸ್ಟ್ 3ರಂದು ಒಂದೇ ಪಾಳಿಯಲ್ಲಿ ನಡೆಸಲು ವೇಳಾಪಟ್ಟಿ ಪರಿಷ್ಕರಿಸಲು ಅನುಮತಿ ನೀಡಬೇಕು ಎಂದು ಎನ್‌ಬಿಇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ತಾಂತ್ರಿಕ ಪಾಲುದಾರರಾದ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ನ ದತ್ತಾಂಶಗಳ ಅನುಸಾರ ಇದು ಆದಷ್ಟು ಶೀಘ್ರ ಪರೀಕ್ಷೆ ನಡೆಸಬಹುದಾದ ದಿನಾಂಕ ಎಂದು ಎನ್‌ಬಿಇ ತಿಳಿಸಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಸವಿನೆನಪು

ವಿ. ಕಲ್ಯಾಣಮ್ಮ

ಕೆ. ಎ. ವೆಂಕಟೇಶ ರೆಡ್ಡಿ ಅವರ ಧರ್ಮಪತ್ನಿ

4–6–2002

ನಿಮ್ಮ ನೆನಪು ಸದಾ ಹಸಿರು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ

ಕೆ. ಎ. ವೆಂಕಟೇಶ ರೆಡ್ಡಿ

ಕುಡ್ಲು, ಬೆಂಗಳೂರು

Class - I 'A' K.P.W.D. Contractor

ಮತ್ತು ಮಕ್ಕಳು

S.B.W. Asphalts & Co.

ಬಿತ್ತನೆ ಬೀಜಕ್ಕೆ ಮುಗಿಬಿದ್ದ ಆಂಧ್ರ ರೈತರು

ತೊಗರಿ, ಜೋಳ, ಸಜ್ಜೆ ಬೀಜಕ್ಕೆ ಬೇಡಿಕೆ: ಖರೀದಿಗೆ ನಸುಕಿನಿಂದಲೇ ಸಾಲು

● ಹರಿಶಂಕರ್ ಆರ್.

ಬಳ್ಳಾರಿ: ಆಂಧ್ರ ಪ್ರದೇಶದ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲೂ ಈ ಬಾರಿ ಪೂರ್ವ ಮುಂಗಾರು ಮಳೆ ಉತ್ತಮವಾಗಿದ್ದು, ಕೃಷಿ ಚಟುವಟಿಕೆ ಕೈಗೊಂಡ ಅಲ್ಲಿನ ರೈತರು ಬಿತ್ತನೆ ಬೀಜಕ್ಕಾಗಿ ಬಳ್ಳಾರಿಗೆ ಮುಗಿ ಬಿದ್ದಿದ್ದಾರೆ.

ನಗರದ ಕೃಷ್ಣಮಾಚಾರಿ (ಕೆ.ಸಿ) ರಸ್ತೆಯಲ್ಲಿರುವ ಬಿತ್ತನೆ ಬೀಜದ ಅಂಗಡಿಗಳ ಎದುರು ಒಂದು ವಾರದಿಂದ ನಿತ್ಯ ನಸುಕಿನಲ್ಲಿ 4 ಗಂಟೆಯಿಂದಲೇ ರೈತರು ಸಾಲುಗಟ್ಟಿ ನಿಲ್ಲುತ್ತಾರೆ.

ಆಂಧ್ರ ಪ್ರದೇಶದಲ್ಲಿ ಬಿತ್ತನೆ ಬೀಜದ ದರ ಕರ್ನಾಟಕಕ್ಕಿಂತಲೂ ಹೆಚ್ಚಿದೆ. ಜತೆಗೆ, ಅಲ್ಲಿನ ಬಿತ್ತನೆ ಬೀಜ ಗುಣಮಟ್ಟ ಹೊಂದಿಲ್ಲ ಎಂಬ ಕಾರಣಕ್ಕೆ ರೈತರು ರಾತ್ರಿಯೇ ಬಳ್ಳಾರಿಗೆ ಬಂದು, ಬೆಳಗ್ಗೆ ಬೀಜ ಖರೀದಿಸಿ ಒಯ್ಯುತ್ತಾರೆ.

'ಸದ್ಯ ತೊಗರಿ ಬೀಜಕ್ಕೆ ಅಲ್ಲದೇ ಜೋಳ ಮತ್ತು ಸಜ್ಜೆಗೂ ಬೇಡಿಕೆ ಇದೆ. ಶೇಂಗಾ ಬೆಳೆಯುವವರು ಕಡಿಮೆ ಆಗಿದ್ದಾರೆ. ಎಲ್ಲರೂ ತೊಗರಿಗೇ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಮಳೆ ಕೈಕೊಡುವ ಭೀತಿಯಿಂದ ಶೇಂಗಾ ಬೆಳೆ ಕಡೆಗೆ ಯಾರೂ ಗಮನ ನೀಡುತ್ತಿಲ್ಲ' ಎಂದು ಬಿತ್ತನೆ ಬೀಜದ ಅಂಗಡಿಗಳ ಮಾಲೀಕರು ತಿಳಿಸಿದರು.

'ಬಳ್ಳಾರಿಯಿಂದ ಬಿತ್ತನೆ ಬೀಜ ಖರೀದಿಸಿ, ಒಯ್ಯುವ ಮಂದಿ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಅದನ್ನು ದುಪ್ಪಟ್ಟು ದರಕ್ಕೆ ಮಾರುತ್ತಾರೆ. ಆದೇನೇ ಇದ್ದರೂ, ಹೆಚ್ಚಿನ ರೈತರು ಬಳ್ಳಾರಿಗೇ ಬಂದು ಬೀಜ ಖರೀದಿಸುತ್ತಾರೆ' ಎಂದು ನಗರದ ಕೆ.ಸಿ ರಸ್ತೆಯಲ್ಲಿರುವ ಕಾರ್ತಿಕ್ ಆಗ್ರೋ ಸೀಡ್ಸ್‌ನ ಸಿಬ್ಬಂದಿ ಹೇಳಿದರು.

'ಖಾಸಗಿ ಕಂಪನಿಗಳ ಬೀಜ ಮಾರಾಟದಲ್ಲೂ ನಮ್ಮ ಜಿಲ್ಲೆಯವರಿಗೆ ಆದ್ಯತೆ ನೀಡಬೇಕು. ಸರ್ಕಾರವು ಹೊರ ರಾಜ್ಯದವರಿಗೆ ನೀಡುವುದಿಲ್ಲ. ಆದರೆ ಹೊರ ರಾಜ್ಯದವರು ಖರೀದಿಸಬಾರದು ಎಂಬುದೇನೂ ಇಲ್ಲ. ಇಲ್ಲಿ ಗುಣಮಟ್ಟದ ಬೀಜ ಸಿಗುವುದರಿಂದ ಅಲ್ಲಿನ ರೈತರು ಬರುತ್ತಾರೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಸೋಮಸುಂದರ್ ತಿಳಿಸಿದರು.

ಬಳ್ಳಾರಿಯ ಕೆ.ಸಿ ರಸ್ತೆಯ ಬೀಜದ ಅಂಗಡಿಗಳ ಎದುರು ಆಂಧ್ರ ಪ್ರದೇಶದ ರೈತರು ಸಾಲುಗಟ್ಟಿ ನಿಂತಿದ್ದರು

> ಬಳ್ಳಾರಿಯಲ್ಲಿನ ಬಿತ್ತನೆ ಬೀಜಗಳಿಗೆ ಆಂಧ್ರ ಪ್ರದೇಶದಲ್ಲಿ ಉತ್ತಮ ಬೇಡಿಕೆ ಇದೆ. ಫಸಲು ಖಚಿತ ಎಂಬ ಭಾವನೆ ಇದೆ. ಬಹುತೇಕ ರೈತರು ಬಳ್ಳಾರಿಗೆ ಬಂದು ಖರೀದಿಸುತ್ತಾರೆ
>
> **ಭದ್ರಿ ನಾರಾಯಣ,** ಬೀಜದ ಅಂಗಡಿ ಮಾಲೀಕ, ಬಳ್ಳಾರಿ

> ಆಂಧ್ರಕ್ಕಿಂತ ಕಡಿಮೆ ದರ, ಗುಣಮಟ್ಟದ ಬೀಜ ಇಲ್ಲಿ ಸಿಗುತ್ತದೆ. ಹೀಗಾಗಿ ಅನಂತಪುರ ಜಿಲ್ಲೆಯಿಂದ ಬಂದು, ಬೆಳಗ್ಗೆ ನಾಲ್ಕರಿಂದ ಅಂಗಡಿ ಎದುರು ನಿಂತಿದ್ದೇವೆ
>
> **ರಂಗಾ ರೆಡ್ಡಿ,** ಅನಂತಪುರ ಜಿಲ್ಲೆಯ ರೈತ

ಬಿತ್ತನೆ ಬೀಜದ ದರ (ಕೆ.ಜಿಗೆ)

ಬೀಜ	ದರ(₹)
ತೊಗರಿ	140
ಹತ್ತಿ	750-900
ಜೋಳ	1650-2200
ಸಜ್ಜೆ	500-780

ರೆಪೊ ದರ ಇನ್ನಷ್ಟು ಇಳಿಕೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ ಸಭೆಯ ತೀರ್ಮಾನ ಶುಕ್ರವಾರ ಪ್ರಕಟವಾಗಲಿದ್ದು, ರೆಪೊ ದರದಲ್ಲಿ ಇಳಿಕೆ ಆಗುವ ನಿರೀಕ್ಷೆ ಇದೆ. ಇದು ಆದಲ್ಲಿ ಸಾಲದ ಮರುಪಾವತಿ ಕಂತುಗಳಲ್ಲಿ ತುಸು ಇಳಿಕೆ ಆಗುವ ಸಾಧ್ಯತೆ ಇದೆ.

ರೆಪೊ ದರದಲ್ಲಿ ಶೇಕಡ 0.25ರಷ್ಟು ಇಳಿಕೆ ಆಗಬಹುದು ಎಂಬುದು ತಜ್ಞರ ನಿರೀಕ್ಷೆ. ಇಳಿಕೆಯು ಶೇ 0.50ರಷ್ಟು ಕೂಡ ಆಗಬಹುದು ಎಂಬ ನಿರೀಕ್ಷೆಯೂ ಇದೆ. ಹಣಕಾಸು ನೀತಿ ಸಮಿತಿಯ ಸಭೆಯು ಬುಧವಾರ ಆರಂಭವಾಗುತ್ತದೆ. ರೆಪೊ ದರವನ್ನು ಈ ವರ್ಷ 2 ಬಾರಿ ಇಳಿಕೆ ಮಾಡಲಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಪುತ್ತೂರು	
ಕೋಕ	20000-31500
ಹೊಸತು	26000-49500
ಶಿವಮೊಗ್ಗ	
ಬೆಟ್ಟೆ	51009-58399
ಗೊರಬಲು	17009-31599
ರಾಶಿ	46099-58599
ಸರಕು	56159-99710
ಸಿದ್ದಾಪುರ	
ಕೆಂಪುಗೋಟು	21669-23200
ರಾಶಿ	42099-46699
ತಟ್ಟಿಬೆಟ್ಟೆ	28900-36119
ಬಿಳಿಗೋಟು	24899-32509
ಚಾಲಿ	34199-42199
ಕೋಕ	18109-27109
ಶಿರಸಿ	
ಬೆಟ್ಟೆ	28799-41209
ಬಿಳಿಗೋಟು	20999-32379
ಚಾಲಿ	35829-42599
ಕೆಂಪುಗೋಟು	15699-24021
ರಾಶಿ	43099-47609
ಯಲ್ಲಾಪುರ	
ಅಪಿ	67169-73700
ಬಿಳಿಗೋಟು	14899-34500
ಚಾಲಿ	35000-43689
ಕೋಕ	8909-17650
ಕೆಂಪುಗೋಟು	16601-26799
ರಾಶಿ	38900-57369
ತಟ್ಟಿಬೆಟ್ಟೆ	28969-38460

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪರಶಿವ ಸ್ವಾಮಿ, [illegible]

● **ಪ್ರಶ್ನೆ:** ನಾನು ಹಿರಿಯ ನಾಗರಿಕ. ಕೇಂದ್ರ ಸರ್ಕಾರದಿಂದ ಪಿಂಚಣಿ ಬರುತ್ತಿದೆ. ಈ ಮೊತ್ತ ವಾರ್ಷಿಕ ಸುಮಾರು ₹8 ಲಕ್ಷ. ಇದರ ಜೊತೆಗೆ ಬಡ್ಡಿ ಆದಾಯವೂ ಬರುತ್ತಿದೆ. ನನ್ನ ವಯಸ್ಸು 76 ವರ್ಷ. ನಾನು ಪ್ರತಿ ವರ್ಷ ಆದಾಯ ತೆರಿಗೆ ವಿವರ ಸಲ್ಲಿಸುತ್ತಿದ್ದೇನೆ. ನನಗೆ ಷೇರುಗಳಿಂದ ಡಿವಿಡೆಂಡ್ ಕೂಡ ಬರುತ್ತದೆ. ಮತ್ತು ಅದು ನೇರವಾಗಿ ನನ್ನ ಬ್ಯಾಂಕ್ ಖಾತೆಗೆ ಜಮೆಯಾಗುತ್ತದೆ. ಈ ಮೊತ್ತ ಸುಮಾರು ₹50 ಸಾವಿರದಿಂದ ₹60 ಸಾವಿರದಷ್ಟಿದೆ. ವರ್ಷದಲ್ಲಿ ಸುಮಾರು 5ರಿಂದ 10 ಬಾರಿ ನಾನು ಷೇರು ಮಾರಾಟ ಮಾಡುತ್ತೇನೆ. ಆನ್‌ಲೈನ್ ವ್ಯವಹಾರಗಳಲ್ಲಿ ನಾನು [illegible] ಕಾರಣ, ಈ ವ್ಯವಹಾರವನ್ನು ಬ್ರೋಕರ್ ಮೂಲಕ ಮಾಡುತ್ತಿದ್ದೇನೆ. 75 ವರ್ಷ ವಯಸ್ಸು ದಾಟಿದ ನಂತರ ಆದಾಯ ತೆರಿಗೆ ವಿವರ ಸಲ್ಲಿಸುವ ಅಗತ್ಯವಿಲ್ಲವೆಂದು ಇತ್ತೀಚೆಗೆ ನನ್ನ ಸ್ನೇಹಿತರು ತಿಳಿಸಿದ್ದಾರೆ. ಈಗ ಬ್ಯಾಂಕಿನವರು ಪಿಂಚಣಿಗೆ ಸಂಬಂಧಿಸಿ ಅನ್ವಯವಾಗುವ ತೆರಿಗೆ ಕಡಿತ ಮಾಡುತ್ತಿದ್ದಾರೆ. ಅಷ್ಟು ಸಾಕು ಎಂಬುದು ನನ್ನ ಸ್ನೇಹಿತರ ಅಭಿಪ್ರಾಯ. [illegible] ಈ ಬಗ್ಗೆ ನನಗೆ ಸ್ಪಷ್ಟ ಮಾಹಿತಿ ನೀಡಿ. ನಾನು ಈ ವರ್ಷ ವಿವರ ಸಲ್ಲಿಸುವ ಅಗತ್ಯವಿಲ್ಲವೇ? ನಾನು ವಿವರ ಸಲ್ಲಿಸದಿದ್ದರೆ ಮುಂದೆ ಯಾವುದೇ ನೋಟಿಸ್ ಬರುವ ಸಾಧ್ಯತೆ ಇದೆಯೇ? [illegible] ಬಗೆಯನ್ನು ನಾನು ಅನುಸರಿಸಬಹುದೇ?

ಉತ್ತರ: ಆದಾಯ ತೆರಿಗೆ ವಿವರ ಸಲ್ಲಿಸುವ ನಿಯಮಗಳಲ್ಲಿ, 75 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ವಿವರ ಸಲ್ಲಿಕೆಯ ಬಗ್ಗೆ ಕೆಲವು ರಿಯಾಯಿತಿಗಳಿವೆ. ಆದರೆ ಈ ರಿಯಾಯಿತಿಗೆ ಕೆಲವು ಇತಿ-ಮಿತಿಗಳೂ ಇವೆ. ಆದಾಯ ಮೂಲಕ್ಕೆ ಅನುಸರಿಸಿ ಈ ವಿನಾಯಿತಿ ಸಿಗುತ್ತದೆ. ಹೀಗಾಗಿ, ನಿಮ್ಮ ವಯಸ್ಸು ಮಾತ್ರವೇ ವಿನಾಯಿತಿ ಪಡೆಯಲು ಇರುವ ಮಾನದಂಡವಲ್ಲ.

ಸೆಕ್ಷನ್ 194P ಪ್ರಕಾರ, ವಯಸ್ಸು 75 ವರ್ಷ ದಾಟಿದ ಮೇಲೆ ಪಿಂಚಣಿ ಆದಾಯ, ಕೇವಲ ಬಡ್ಡಿ ಆದಾಯ ಗಳಿಸುತ್ತಿದ್ದರೆ ಹಾಗೂ ಅದಕ್ಕೆ ಸಂಬಂಧಿಸಿ ಅಗತ್ಯವಿರುವ ಸಂಪೂರ್ಣ ತೆರಿಗೆಯನ್ನು ಬ್ಯಾಂಕ್‌ನಿಂದ ಕಡಿತ ಮಾಡಿ ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ತೆರಿಗೆ ಇಲಾಖೆಗೆ ಸಲ್ಲಿಸಿದ್ದರೆ, ನೀವು ಈ ವಿನಾಯಿತಿಯನ್ನು ಖಂಡಿತಾ ಪಡೆಯಬಹುದು.

ಆದರೆ, ನೀವು ಪಿಂಚಣಿ ಹಾಗೂ ಬಡ್ಡಿ ಆದಾಯವಲ್ಲದೆ, ಡಿವಿಡೆಂಡ್ ಆದಾಯವನ್ನೂ ಪಡೆಯುತ್ತಿದ್ದೀರಿ. ಇದಲ್ಲದೆ, ಷೇರುಗಳ ಮಾರಾಟದಿಂದ ಬರುವ ಲಾಭ-ನಷ್ಟಕ್ಕೆ ಸಂಬಂಧಿಸಿದ ಮಾಹಿತಿಯನ್ನೂ ನೀವು ಸಲ್ಲಿಸಬೇಕಾಗುತ್ತದೆ. ಇದಲ್ಲದೆ, ಯಾವುದೇ ವ್ಯಾಪಾರ-ವ್ಯವಹಾರ-ವೃತ್ತಿಗೆ ಸಂಬಂಧಿಸಿದ ಆದಾಯ ಉಳ್ಳವರು ಈ ವಿನಾಯಿತಿ ಪಡೆಯಲು ಅರ್ಹರಲ್ಲ. ಹೀಗಾಗಿ ನೀವು ಆದಾಯ ತೆರಿಗೆ ವಿವರ ಸಲ್ಲಿಸಬೇಕಾಗುತ್ತದೆ. ನಿಮ್ಮ ಸ್ನೇಹಿತರ ಆದಾಯ ಮೂಲ ಪಿಂಚಣಿ ಹಾಗೂ ಬಡ್ಡಿ ಮಾತ್ರ ಆಗಿರಬಹುದು. ಹೀಗಾಗಿ ನೋಟಿಸ್ ಬರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಜಿತಿನ್ ಕುಮಾರ್, ಹೊಸಕೋಟೆ

● **ಪ್ರಶ್ನೆ:** ನನ್ನ ತಂದೆಯವರು ಕೆಲವು ತಿಂಗಳುಗಳ ಹಿಂದೆ ನಿಧನರಾದರು. ಅವರ ಹೆಸರಲ್ಲಿ ಕೆಲವು ಆದಾಯಗಳು ಬರುತ್ತಿದ್ದವು. ಇದರಲ್ಲಿ ಕೌಟುಂಬಿಕ ಪಿಂಚಣಿ, ಬಡ್ಡಿ ಆದಾಯ ಮತ್ತು ಬಾಡಿಗೆ ಆದಾಯ ಸೇರಿವೆ. ನಾನು ಕಂಪನಿಯಲ್ಲಿ ಉದ್ಯೋಗಿಯಾಗಿದ್ದೇನೆ ಹಾಗೂ ಕಾನೂನು ಪ್ರಕಾರ ಈ ಆಸ್ತಿಗಳು ಶೀಘ್ರದಲ್ಲೇ ನನ್ನ ಹೆಸರಿಗೆ ವರ್ಗವಾಗಲಿವೆ.

ನನ್ನ ಪ್ರಶ್ನೆ ಏನೆಂದರೆ, ನನ್ನ ತಂದೆ ನಿಧನರಾದ ಕಾರಣ, ಅವರ ಹೆಸರಲ್ಲಿ ಆದಾಯ ತೆರಿಗೆ ವಿವರ ಸಲ್ಲಿಸಬೇಕೆ? ಹೌದಾದರೆ ಅದು ಹೇಗೆ ಸಲ್ಲಿಸಬೇಕು? ಅಥವಾ ನನ್ನ ಹೆಸರಲ್ಲೇ ಇಡೀ ವರ್ಷದ ಆದಾಯಕ್ಕೆ ಸಂಬಂಧಿಸಿದಂತೆ ವಿವರ ಸಲ್ಲಿಸಬೇಕೇ? ಯಾವುದು ಸರಳ ಮತ್ತು ಕಾನೂನುಬದ್ಧ?

ಉತ್ತರ: ನೀವು ಕೇಳಿದ ವಿಚಾರದಲ್ಲಿ ಯಾವುದು ಸರಳ ಎನ್ನುವ ವಿಚಾರಕ್ಕಿಂತ ಯಾವುದು ಕಾನೂನುಬದ್ಧ ಎನ್ನುವ ವಿಚಾರ ಹೆಚ್ಚು ಪ್ರಸ್ತುತ. ಆದಾಯ ತೆರಿಗೆ ಕಾನೂನಿನ ಪ್ರಕಾರ, ಯಾವುದೇ ವ್ಯಕ್ತಿ ನಿಧನರಾದರೆ, ಅವರು ಮೃತಪಟ್ಟ ದಿನದವರೆಗಿನ ಆದಾಯಕ್ಕೆ ಅವರ ಹೆಸರಿನಲ್ಲಿ ವಿವರ ಸಲ್ಲಿಸಲು ಅವರ ಕಾನೂನುಬದ್ಧ ವಾರಸುದಾರ ಜವಾಬ್ದಾರನಾಗಿರುತ್ತಾನೆ.

ಅಂದರೆ, ನೀವು ನಿಮ್ಮ ತಂದೆಯವರ ನಿಧನದ ದಿನದವರೆಗೆ ಪಡೆದ ಬಡ್ಡಿ, ಬಾಡಿಗೆ ಇತ್ಯಾದಿ ಆದಾಯವನ್ನು ಕೂಡಿಸಿ, ಅವರ ಪರವಾಗಿ ಆದಾಯ ತೆರಿಗೆ ವಿವರ ಸಲ್ಲಿಸಬೇಕು. ಈ ವಿವರ ಸಲ್ಲಿಸಲು ಮೊದಲು ನೀವು ಆದಾಯ ತೆರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ವಾರಸುದಾರ ಎನ್ನುವುದನ್ನು ದಾಖಲಿಸಬೇಕು. ಅದಕ್ಕೆ ಅಗತ್ಯವಿರುವ ದಾಖಲೆಗಳನ್ನು (ಮರಣ ಪ್ರಮಾಣಪತ್ರ, ವಾರಸುದಾರ ಪ್ರಮಾಣಪತ್ರ, ಪ್ಯಾನ್‌ಕಾರ್ಡ್ ನಕಲು) ಇತ್ಯಾದಿ ಸಲ್ಲಿಸಿದ ನಂತರ, ಅವರು ಪಡೆದ ಆದಾಯದ ಮೇಲೆ ನೀವು ವಿವರ ಸಲ್ಲಿಸಬಹುದು.

ಅವರ ನಿಧನದ ನಂತರ ಗಳಿಸಿದ ಎಲ್ಲಾ ಆದಾಯವು ನಿಮ್ಮ ಆದಾಯವಾಗಿರುತ್ತದೆ. [illegible] ಇದಕ್ಕೆ ಅನುಭವಿ ಸಲಹೆಗಾರರ ಮಾರ್ಗದರ್ಶನ ಪಡೆಯುವುದು ಸೂಕ್ತ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಟಾಟಾದಿಂದ ಹ್ಯಾರಿಯರ್ ಇ.ವಿ ಬಿಡುಗಡೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್, ವಿದ್ಯುತ್ ಚಾಲಿತ 'ಹ್ಯಾರಿಯರ್ ಇ.ವಿ' ಕಾರನ್ನು ಮಂಗಳವಾರ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಎಸ್‌ಯುವಿ ವಾಹನದ ಆರಂಭಿಕ ಎಕ್ಸ್ ಷೋರೂಂ ಬೆಲೆ ₹21.49 ಲಕ್ಷ. ಜುಲೈ 2ರಿಂದ ಕಾರುಗಳ ಬುಕಿಂಗ್ ಶುರುವಾಗಲಿದೆ. ಒಮ್ಮೆ ಚಾರ್ಜ್ ಮಾಡಿದರೆ 500 ಕಿ.ಮೀ. ಪ್ರಯಾಣಿಸಬಹುದಾಗಿದ್ದು, ತ್ವರಿತವಾಗಿ ಚಾರ್ಜ್ ಆಗಲಿದೆ.

ಈ ಕಾರಿನಲ್ಲಿ 75 ಕೆಡಬ್ಲ್ಯುಎಚ್ ಸೇರಿ ಎರಡು ಬ್ಯಾಟರಿ ಆಯ್ಕೆಗಳಿವೆ. ಈ ಬ್ಯಾಟರಿಗಳಿಗೆ ಜೀವಿತಾವಧಿ ಗ್ಯಾರಂಟಿ ಇದೆ. ಸ್ವಯಂಚಾಲಿತ ಪಾರ್ಕಿಂಗ್ ವ್ಯವಸ್ಥೆ ಸೇರಿ 55ಕ್ಕೂ ಹೆಚ್ಚು ವೈಶಿಷ್ಟ್ಯಗಳಿವೆ ಎಂದು ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ ಲಿಮಿಟೆಡ್ ಮತ್ತು ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ತಿಳಿಸಿದ್ದಾರೆ.

ಟಾಟಾ ಮೋಟರ್ಸ್ ತನ್ನ ಹೊಸ ಹ್ಯಾರಿಯರ್ ಇ.ವಿ ಕಾರನ್ನು ಮಾರುಕಟ್ಟೆಗೆ ಮಂಗಳವಾರ ಬಿಡುಗಡೆ ಮಾಡಿದೆ. ಈ ವೇಳೆ ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ ಲಿಮಿಟೆಡ್ ಮತ್ತು ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಇದ್ದರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

UNEMPLOYED TO Exporters Possible (1) Aircargo Personal Baggage Repacked. Heritage Airport Road Polali 9844856912, 9844046312

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Teachers/ Professors

TEACHER REQUIRED for Maths classes 6 to 10 SSLC contact Kenmore School Basavanagudi or Whatsapp 9901501185 email kenmoreschool@gmail.com

ಪ್ರವಾಸ

Travel

27.6.2025ರಿಂದ 10ದಿನಗಳು ನವಗ್ರಹಗಳು ಚಿದಂಬರಂ ಕುಂಭಕೋಣಂ ಶ್ರೀರಂಗಂ ಪಳನಿ ಮಧುರೈ ರಾಮೇಶ್ವರಂ ಕನ್ಯಾಕುಮಾರಿ ತಿರುವನಂತಪುರ ಕಾಲಡಿ ಗುರುವಾಯೂರು ಮಲ್ಟಿಎಕ್ಸೆಲ್ ಬಸ್ಸಿನಲ್ಲಿ ಪ್ರವಾಸ. 11.9.2025 ಚಾರ್ ಧಾಮಪ್ರವಾಸ. ಸಂಪರ್ಕ್ಯ ಸಂಪರ್ಕಿಸಿ ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70. 9342287551, 9482239855

26.6.2025 ಶ್ರೀಶೈಲ ಹೈದರಾಬಾದ್ 30.6.2025 ತಮಿಳುನಾಡು 12.7.2025 ಗುಜರಾತ್ ಎರಡು ಜ್ಯೋತಿರ್ಲಿಂಗ 12.7.2025 ಮಧ್ಯಪ್ರದೇಶ, ಗುಜರಾತ್ ನಾಲ್ಕು ಜ್ಯೋತಿರ್ಲಿಂಗ: 15.7.2025 ಕಾಶಿ ದೆಹಲಿ ಅಯೋಧ್ಯೆ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

@50/-* PER WORDS

www.dhclassifieds.com

ಬುಕ್ ಮಾಡಿ

ಹೆಸರು ಬದಲಾವಣೆ

ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 7795158424

+91 9731810277 | +91 9900428036

*Conditions apply

ಕೆಎಸ್‌ಡಿಎಲ್: ಮೇನಲ್ಲಿ ₹186 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮವು (ಕೆಎಸ್‌ಡಿಎಲ್) ಮೇ ತಿಂಗಳಿನಲ್ಲಿ ₹186 ಕೋಟಿ ಮೊತ್ತದ ಉತ್ಪನ್ನಗಳನ್ನು ಮಾರಾಟ ಮಾಡಿದೆ. ಕಂಪನಿಯ 108 ವರ್ಷಗಳ ಇತಿಹಾಸದಲ್ಲಿ, ತಿಂಗಳೊಂದರಲ್ಲಿ ಇಷ್ಟು ದೊಡ್ಡ ಮೊತ್ತದ ಮಾರಾಟ ನಡೆದಿರುವುದು ಇದೇ ಮೊದಲು' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಹೇಳಿದ್ದಾರೆ.

'2024ರ ಸೆಪ್ಟೆಂಬರ್‌ನಲ್ಲಿ ಕೆಎಸ್‌ಡಿಎಲ್ ₹178 ಕೋಟಿ ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡಿತ್ತು. ಈವರೆಗೆ ಅದೇ ಗರಿಷ್ಠ ಮಟ್ಟದ ಮಾರಾಟದ ದಾಖಲೆಯಾಗಿತ್ತು. ಕೆಎಸ್‌ಡಿಎಲ್ ಸಾಮಾನ್ಯವಾಗಿ ಪ್ರತಿ ತಿಂಗಳು ಸರಾಸರಿ ₹135 ಕೋಟಿಯಿಂದ ₹140 ಕೋಟಿಯಷ್ಟು ವಹಿವಾಟು ನಡೆಸುತ್ತದೆ. ಮೇ ತಿಂಗಳಿನಲ್ಲಿ ಈ ಸರಾಸರಿಗಿಂತಲೂ ₹41 ಕೋಟಿಗಳಷ್ಟು ಹೆಚ್ಚು ವಹಿವಾಟು ನಡೆಸಿದೆ' ಎಂದು ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

'ಮೇ ತಿಂಗಳಿನಲ್ಲಿ ಕಂಪನಿಗೆ ₹151.50 ಕೋಟಿ ವಹಿವಾಟಿನ ಗುರಿ ನೀಡಲಾಗಿತ್ತು. ಕಂಪನಿಯು ಅದಕ್ಕಿಂತಲೂ ₹35 ಕೋಟಿಯಷ್ಟು ಹೆಚ್ಚುವರಿ ವಹಿವಾಟು ನಡೆಸಿದೆ. ಇದರಲ್ಲಿ ರಫ್ತಿನ ಮೊತ್ತ ₹1.81 ಕೋಟಿ ಇದೆ. ರಫ್ತು ವಹಿವಾಟನ್ನು ವಾರ್ಷಿಕವಾಗಿ ₹150 ಕೋಟಿಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ' ಎಂದಿದ್ದಾರೆ.

'ಮೇ ತಿಂಗಳಿನಲ್ಲಿ ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲೇ ₹85 ಕೋಟಿಯಷ್ಟು ವಹಿವಾಟು ನಡೆದಿದೆ. ಕರ್ನಾಟಕ ಸೇರಿ ಉಳಿದೆಡೆ ₹100 ಕೋಟಿ ಮೌಲ್ಯದ ಉತ್ಪನ್ನಗಳು ಮಾರಾಟವಾಗಿವೆ. ಸಾಬೂನು, ಶವರ್ ಜೆಲ್, ಅಗರಬತ್ತಿಗಳಿಗೆ ವ್ಯಾಪಕ ಬೇಡಿಕೆ ಬರುತ್ತಿದೆ. ಸಂಸ್ಥೆಯಲ್ಲಿ ಗುಣಮಟ್ಟದ ಉತ್ಪಾದನೆ, ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ವಿಸ್ತರಣೆಗೆ ಕೈಗೊಂಡಿರುವ ಪ್ರಯತ್ನಗಳು ಫಲ ಕೊಡುತ್ತಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಕೆಎಸ್‌ಡಿಎಲ್ ಅಧ್ಯಕ್ಷ ಅಪ್ಪಾಜಿ ನಾಡಗೌಡ, 'ಎರಡು ವರ್ಷದಲ್ಲಿ ಕಂಪನಿಗೆಂದು ಯಾವುದೇ ಹೊಸ ಉಪಕರಣ ಅಥವಾ ಯಂತ್ರಗಳನ್ನು ಖರೀದಿಸಿಲ್ಲ. ಬದಲಿಗೆ ಕಾರ್ಯಕ್ಷಮತೆಯನ್ನು ಹೆಚ್ಚಿಸಲಾಗಿದೆ. ಪರಿಣಾಮವಾಗಿ ಉತ್ಪಾದಕತೆ ಹೆಚ್ಚಾಗಿದೆ. ಶೀಘ್ರದಲ್ಲೇ ಸುಗಂಧದ್ರವ್ಯಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು' ಎಂದು ಹೇಳಿದ್ದಾರೆ.

ಪಾಕ್‌ಗೆ ಎಡಿಬಿ ಸಾಲ 80 ಕೋಟಿ ಡಾಲರ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಆರ್ಥಿಕಸುಸ್ಥಿರತೆ,ಸಾರ್ವಜನಿಕಹಣಕಾಸು ನಿರ್ವಹಣಾ ವ್ಯವಸ್ಥೆಯ ಸುಧಾರಣೆಗಾಗಿ 80 ಕೋಟಿ ಅಮೆರಿಕನ್ ಡಾಲರ್ ಮೊತ್ತದ ನೆರವು ಒದಗಿಸುವ ಯೋಜನೆಗೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಒಪ್ಪಿಗೆ ನೀಡಿದೆ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ.

ಈ ವಿಷಯವನ್ನು ಖಚಿತಪಡಿಸಿರುವ ಪಾಕಿಸ್ತಾನದ ವಿತ್ತ ಸಚಿವರ ಸಲಹೆಗಾರ ಖುರ್ರಂ ಶೆಹಜಾದ್, 'ಸಂಪನ್ಮೂಲ ಕ್ರೋಢೀಕರಣ ಸುಧಾರಣಾ ಯೋಜನೆಯಡಿ 80 ಕೋಟಿ ಡಾಲರ್ ನೀಡಲು ಎಡಿಬಿ ಸಮ್ಮತಿಸಿದೆ. ಈ ಯೋಜನೆಯು 30 ಕೋಟಿ ಡಾಲರ್ ಮೊತ್ತದ ನೀತಿ ಆಧಾರಿತ ಸಾಲ ಮತ್ತು 50 ಕೋಟಿ ಡಾಲರ್ ಮೊತ್ತದ ಕಾರ್ಯಕ್ರಮ ಆಧಾರಿತ ಖಾತರಿಯನ್ನು ಒಳಗೊಂಡಿದೆ' ಎಂದು ತಿಳಿಸಿದ್ದಾರೆ.

'ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಯ ಸುಧಾರಣೆಗೆ ಸಂಬಂಧಿಸಿದ ಎರಡನೇ ಉಪ ಯೋಜನೆಯಡಿ ಪಾಕಿಸ್ತಾನಕ್ಕೆ 80 ಕೋಟಿ ಅಮೆರಿಕನ್ ಡಾಲರ್ ನೆರವು ಒದಗಿಸಲಾಗುತ್ತಿದೆ. ಇದರಲ್ಲಿ 50 ಕೋಟಿ ಡಾಲರ್ ಮೊತ್ತದ ನೀತಿ ಆಧಾರಿತ ಖಾತರಿಯೂ ಸೇರಿದೆ. ಇದು ತಾನು ಮೊತ್ತಮೊದಲಿಗೆ ಒದಗಿಸುತ್ತಿರುವ ಇಂತಹ ಖಾತರಿ. ಇದರಿಂದ ಪಾಕಿಸ್ತಾನ ಸರ್ಕಾರವು ವಾಣಿಜ್ಯ ಬ್ಯಾಂಕ್‌ಗಳಿಂದ 1 ಶತಕೋಟಿ ಡಾಲರ್ ಮೊತ್ತದ ಸಂಪನ್ಮೂಲವನ್ನು ಸಂಗ್ರಹಿಸಲು ಸಾಧ್ಯವಾಗಲಿದೆ' ಎಂದು ಎಡಿಬಿ ಪ್ರಕಟಣೆಯಲ್ಲಿ ಹೇಳಿದೆ.

ಜೆಯುಡಿ ರ‍್ಯಾಲಿಯಲ್ಲಿ ಪಾಕ್ ಸ್ಪೀಕರ್ ಭಾಗಿ

ಲಾಹೋರ್ (ಪಿಟಿಐ): ಮುಂಬೈ ಭಯೋತ್ಪಾದಕ ದಾಳಿಯ ಮುಖ್ಯ ಸಂಚುಕೋರ ಹಫೀಜ್ ಸಯೀದ್ ನೇತೃತ್ವದ ನಿಷೇಧಿತ ಸಂಘಟನೆ ಜಮಾತ್-ಉದ್-ದಾವಾ (ಜೆಯುಡಿ) ಆಯೋಜಿಸಿದ್ದ ರ‍್ಯಾಲಿಯಲ್ಲಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಶಾಸನ ಸಭೆಯ ಸ್ಪೀಕರ್ ಮಲಿಕ್ ಅಹಮದ್ ಖಾನ್ ಅವರು ಪಾಲ್ಗೊಂಡಿದ್ದಾರೆ.

ಪಾಕಿಸ್ತಾನ್ ಮುಸ್ಲಿಮ್ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷದ ಮುಖಂಡರಾಗಿರುವ ಖಾನ್ ಅವರು ಮೇ 28ರಂದು ಕಸೂರ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಜೆಯುಡಿ ನಾಯಕರ ಜತೆ ವೇದಿಕೆ ಹಂಚಿಕೊಂಡು ಭಾರತದ ವಿರುದ್ಧ ದ್ವೇಷ ಭಾಷಣ ಮಾಡಿದ್ದಾರೆ.

ಕಾರ್ಯಕ್ರಮದಲ್ಲಿ ಅವರು ಜೆಯುಡಿ ನಾಯಕ ಸೈಫುಲ್ಲಾ ಕಸೂರಿ, ಹಫೀಜ್ ಸಯೀದ್‌ನ ಪುತ್ರ ಹಫೀಜ್ ತಲ್ಹಾ ಮತ್ತು ಇತರರೊಂದಿಗೆ ವೇದಿಕೆ ಹಂಚಿಕೊಂಡಿದ್ದಾರೆ. ತೀವ್ರಗಾಮಿ ಇಸ್ಲಾಮಿಸ್ಟ್ ಪಾರ್ಟಿ ತೆಹ್ರೀಕ್-ಎ-ಲಬ್ಬೈಕ್ ಪಾಕಿಸ್ತಾನ್ (ಟಿಎಲ್‌ಪಿ) ಮುಖ್ಯಸ್ಥ ಸಾದ್ ಹುಸೇನ್ ರಿಜ್ವಿ ಕೂಡ ಉಪಸ್ಥಿತರಿದ್ದರು.

ಜೆಯುಡಿ ರ‍್ಯಾಲಿಯಲ್ಲಿ ಪಾಲ್ಗೊಂಡ ಬಗ್ಗೆ ಪತ್ರಕರ್ತರು ಸೋಮವಾರ ಖಾನ್ ಅವರನ್ನು ಕೇಳಿದಾಗ, 'ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಅವರು (ಸೈಫುಲ್ಲಾ) ಶಂಕಿತರಾಗಿರುವುದು ಹೇಗೆ?' ಎಂದು ಮರು ಪ್ರಶ್ನೆ ಹಾಕಿದ್ದಾರೆ.

'ಪಹಲ್ಗಾಮ್ ದಾಳಿಯಲ್ಲಿ ತನ್ನ ಕೈವಾಡದ ಬಗ್ಗೆ ಪುರಾವೆಗಳನ್ನು ನೀಡುವಂತೆ ಪಾಕಿಸ್ತಾನವು ಭಾರತವನ್ನು ಕೇಳಿದೆ. ಆದರೆ ಭಾರತ ಆ ಕೆಲಸ ಮಾಡಿಲ್ಲ. ಈ ವಿಷಯದ ಬಗ್ಗೆ ತಟಸ್ಥ ಸಂಸ್ಥೆಯಿಂದ ತನಿಖೆ ನಡೆಸುವಂತೆಯೂ ನಾವು ಕೇಳಿಕೊಂಡಿದ್ದೇವೆ. ಅದನ್ನು ಸಹ ಭಾರತ ತಿರಸ್ಕರಿಸಿದೆ. ಪಾಕಿಸ್ತಾನದ ಮೇಲೆ ದಾಳಿ ಮಾಡುವುದಕ್ಕೆ ಭಾರತ ಆದ್ಯತೆ ನೀಡಿದೆ. ಅವರ ದಾಳಿಗೆ ಪಾಕಿಸ್ತಾನವು ಕೆಲವೇ ಗಂಟೆಗಳಲ್ಲಿ ತಕ್ಕ ಪ್ರತ್ಯುತ್ತರ ನೀಡಿತು' ಎಂದು ಹೇಳಿದ್ದಾರೆ.

ರ‍್ಯಾಲಿಯಲ್ಲಿ ತಮ್ಮ ಉಪಸ್ಥಿತಿಯನ್ನು ಸಮರ್ಥಿಸಿಕೊಂಡ ಸ್ಪೀಕರ್, 'ಈ ಕಾರ್ಯಕ್ರಮ ನಾನು ಪ್ರತಿನಿಧಿಸುವ ಕ್ಷೇತ್ರದಲ್ಲಿ ನಡೆದಿದ್ದು, ಆ ವೇದಿಕೆಯಿಂದಲೇ ಶಾಂತಿಯ ಸಂದೇಶವನ್ನು ಸಾರಿದ್ದೇನೆ' ಎಂದಿದ್ದಾರೆ.

ಸೈನಿಕರ ಮೃತದೇಹಗಳ ವಾಪಸಾತಿಗೆ ಒಪ್ಪಿಗೆ

ಇಸ್ತಾಂಬುಲ್ (ಎಪಿ/ಎಎಫ್‌ಪಿ): ರಷ್ಯಾ ಮತ್ತು ಉಕ್ರೇನ್‌ನ ಪ್ರತಿನಿಧಿಗಳು ಮುಖಾಮುಖಿಯಾಗಿ ಸೋಮವಾರ ಎರಡನೇ ಸುತ್ತಿನ ಸಭೆ ನಡೆಸಿದ್ದರು. ಈ ಮಾತುಕತೆಯಿಂದ ಯುದ್ಧವನ್ನು ಅಂತ್ಯಗೊಳಿಸುವ ದಿಕ್ಕಿನತ್ತ ಯಾವುದೇ ಪ್ರಗತಿಯಾಗಿಲ್ಲ. ಆದರೆ, ಸೈನಿಕರ ವಿಚಾರಗಳಲ್ಲಿ ಎರಡೂ ದೇಶಗಳು ಕೆಲವು ಒಪ್ಪಂದಕ್ಕೆ ಬಂದಿವೆ.

ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧದಲ್ಲಿ ಹತ್ಯೆಯಾಗಿರುವ ಎರಡೂ ದೇಶಗಳ ಸುಮಾರು 6 ಸಾವಿರ ಸೈನಿಕರ ಮೃತದೇಹಗಳನ್ನು ಆಯಾ ದೇಶಗಳಿಗೆ ರವಾನಿಸುವ ಒಪ್ಪಂದಕ್ಕೆ ಬರಲಾಗಿದೆ. ತೀವ್ರವಾಗಿ ಗಾಯಗೊಂಡಿರುವ ಸೈನಿಕರನ್ನು ಆಯಾ ದೇಶಗಳಿಗೆ ವಾಪಸು ಕಳುಹಿಸುವ ಬಗ್ಗೆ ಸಮಿತಿಯೊಂದನ್ನು ರಚಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಜೊತೆಗೆ, ಆಯಾ ದೇಶಗಳು ವಶದಲ್ಲಿ ಇಟ್ಟುಕೊಂಡಿರುವ ಸೈನಿಕರನ್ನು ವಾಪಸು ಕಳುಹಿಸುವ ಬಗ್ಗೆಯೂ ಎರಡೂ ದೇಶಗಳು ಒಪ್ಪಂದಕ್ಕೆ ಬಂದಿವೆ.

'ಒಪ್ಪಂದಕ್ಕೆ ಬರುವುದು ಬಹಳ ಸಂಕೀರ್ಣವಾದ ವಿಚಾರ. ಯಾಕೆಂದರೆ, ಎರಡೂ ದೇಶಗಳ ನಡುವ ಅಷ್ಟೊಂದು ಭಿನ್ನಾಭಿಪ್ರಾಯಗಳಿವೆ. ಆದ್ದರಿಂದ, ತತ್‌ಕ್ಷಣದಲ್ಲಿಯೇ ಎಲ್ಲವಕ್ಕೂ ಪರಿಹಾರ ಸಿಕ್ಕಿಬಿಡುತ್ತದೆ ಎಂದು ಅಂದುಕೊಳ್ಳುವುದು ತಪ್ಪು' ಎಂದು ರಷ್ಯಾದ ವಕ್ತಾರ ಡಿಮಿತ್ರಿ ಪೆಸ್ಕೊ ಮಂಗಳವಾರ ಪ್ರತಿಕ್ರಿಯಿಸಿದರು.

'ಯುದ್ಧ ಅಂತ್ಯಗೊಳಿಸಲು ರಷ್ಯಾವು ಕೆಲವು ಷರತ್ತುಗಳನ್ನು ಮುಂದಿಟ್ಟಿದೆ. ಈ ಷರತ್ತುಗಳನ್ನು ಅಧ್ಯಯನ ಮಾಡಿ, ಪ್ರತಿಕ್ರಿಯಿಸಲು ನಮಗೆ ಒಂದು ವಾರ ಕಾಲಾವಕಾಶಬೇಕು. ಆದ್ದರಿಂದ ಜೂನ್ 20ರಿಂದ 30ರ ಒಳಗೆ ಮುಂದಿನ ಸಭೆ ನಡೆಸುವಂತೆ ಹೇಳಿದ್ದೇವೆ' ಎಂದು ಉಕ್ರೇನ್‌ನ ರಕ್ಷಣಾ ಸಚಿವ ರಸ್ಟಮ್ ಉಮರಾವ್ ತಿಳಿಸಿದ್ದಾರೆ.

ಕ್ಷಮೆ: ಕಮಲ್‌ಗೇಕೆ ಹಿಂಜರಿಕೆ?

ಒಂದನೇ ಪುಟದಿಂದ...

'ಇವತ್ತಿನ ಪ್ರಸಂಗದಲ್ಲಿ ಕಮಲ್ ಹೇಳಿಕೆಯಿಂದ ಅಶಾಂತಿ, ಕ್ಷೋಭೆ ಉಂಟಾಗಿದೆ. ಇದಕ್ಕಾಗಿ ಕರ್ನಾಟಕದ ಜನರು ಕ್ಷಮೆ ಕೋರಲು ಕೇಳಿದ್ದಾರೆ ಅಷ್ಟೇ. ರಾದ್ಧಾಂತ ಎಬ್ಬಿಸಿದವರೇ ನೀವು. ಈಗ ಪೊಲೀಸ್ ರಕ್ಷಣೆ ಬೇಕು ಎಂದರೆ ಹೇಗೆ' ಎಂದು ನ್ಯಾಯಪೀಠ ಕೇಳಿತು.

'ಕೆಲವೊಮ್ಮೆ ಬಾಯಿ ತಪ್ಪಿ ಮಾತನಾಡುವ ಸಾಧ್ಯತೆ ಇರುತ್ತದೆ. ಒಮ್ಮೆ ಆಡಿದ ಮಾತನ್ನು ಹಿಂಪಡೆಯಲಾಗದು. ಬದಲಿಗೆ ಕ್ಷಮೆ ಕೋರಬಹುದು. ಕಮಲ್ ಕೂಡಾ ಕ್ಷಮೆ ಕೇಳಿದ್ದರೆ ಇಷ್ಟೆಲ್ಲಾ ರಗಳೆ ಬೆಳೆಯುತ್ತಲೇ ಇರಲಿಲ್ಲ' ಎಂದು ಹೇಳಿತು.

ಬೆಳಗಿನ ಕಲಾಪದಲ್ಲಿ ಸಮಯಾವಕಾಶ ನೀಡಿ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಆದರೆ, ಮಧ್ಯಾಹ್ನ ವಿಚಾರಣೆಯಲ್ಲಿ ಸಂಸ್ಥೆಯ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ಅವರು ಕಮಲ್ ಹಾಸನ್, ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಗೆ ಬರೆದ ಪತ್ರವನ್ನು ತೆರೆದ ನ್ಯಾಯಾಲಯದಲ್ಲಿ ಓದಿದರು.

ಆದರೆ, ಈ ಪತ್ರದಲ್ಲಿ 'ಕನ್ನಡಿಗರ ಕ್ಷಮೆ ಕೋರುತ್ತಿದ್ದೇನೆ' ಎಂಬ ಪದ ಇಲ್ಲದಿರುವುದನ್ನು ಉಲ್ಲೇಖಿಸಿದ ನ್ಯಾಯಪೀಠ, 'ಈ ಕೇಸನ್ನು ಮೆರಿಟ್ ಆಧಾರದಲ್ಲಿ ತೀರ್ಮಾನ ಮಾಡುತ್ತೇನೆ' ಎಂದು ಹೇಳಿತು. ಇದಕ್ಕೆ ಪ್ರತಿಕ್ರಿಯಿಸಿದ ಧ್ಯಾನ್ ಚಿನ್ನಪ್ಪ, 'ಸಿನಿಮಾ ಬಿಡುಗಡೆಗೂ ಮುನ್ನವೇ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ಜೊತೆ ಸಮಾಲೋಚನೆ ನಡೆಸಿ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಸದ್ಯಕ್ಕೆ, ಕರ್ನಾಟಕದಲ್ಲಿ ಸಿನಿಮಾ ಬಿಡುಗಡೆ ಮಾಡಲು ಮುಂದಾಗುವುದಿಲ್ಲ' ಎಂದು ಮೌಖಿಕವಾಗಿ ತಿಳಿಸಿದರು.

ಅಂತೆಯೇ, ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿ.ಜಿ.ಭಾನುಪ್ರಕಾಶ್, 'ಅರ್ಜಿದಾರರು ವಿಚಾರಣೆ ಮುಂದೂಡಲು ಕೋರುತ್ತಿರುವ ಕಾರಣ ಸರ್ಕಾರ ತನ್ನ ತೀರ್ಮಾನವನ್ನು ಕಾಯ್ದಿರಿಸಿದೆ' ಎಂದರು. ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ಪರ ಹೈಕೋರ್ಟ್ ವಕೀಲ ಎಚ್.ಎಸ್.ಧನರಾಜ್ ವಾದ ಮಂಡಿಸಿದರು.

ನ್ಯಾಯಪೀಠ ಯಾವುದೇ ನಿರ್ದಿಷ್ಟ ಆದೇಶ ಹೊರಡಿಸದೆ, ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ಡಿಜಿ–ಐಜಿಪಿ, ಬೆಂಗಳೂರು ನಗರ ಪೊಲೀಸ್ ಆಯುಕ್ತ, ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಎಸ್) ಮುಖ್ಯ ಕಾರ್ಯ ನಿರ್ವಾಹಕ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಸಂಕ್ಷಿಪ್ತ ಸುದ್ದಿ

ಮುಂಬೈನಲ್ಲಿ ಸ್ಥಳ ಬಾಡಿಗೆ ಪಡೆದ ಟೆಸ್ಲಾ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ ತಯಾರಿಕಾ ಕಂಪನಿ ಟೆಸ್ಲಾ ಮುಂಬೈನ ಲೋಧಾ ಲಾಜಿಸ್ಟಿಕ್ಸ್ ಪಾರ್ಕ್‌ನಲ್ಲಿ 24,565 ಚದರ ಅಡಿ ಸ್ಥಳವನ್ನು ಐದು ವರ್ಷದ ಅವಧಿಗೆ ಗುತ್ತಿಗೆ ಪಡೆದುಕೊಂಡಿದೆ.

ಈ ಸ್ಥಳಕ್ಕೆ ಮಾಸಿಕ ಬಾಡಿಗೆಯು ₹37.53 ಲಕ್ಷವಿದೆ ಎಂದು ರಿಯಲ್ ಎಸ್ಟೇಟ್ ದತ್ತಾಂಶ ವಿಶ್ಲೇಷಕ ಕಂಪನಿ ಸಿಆರ್‌ಇ ಮ್ಯಾಟ್ರಿಕ್ಸ್ ಮಂಗಳವಾರ ತಿಳಿಸಿದೆ.

ಟೆಸ್ಲಾ ಇಂಡಿಯಾ ಮೋಟರ್ ಆ್ಯಂಡ್ ಎನರ್ಜಿ ಪ್ರೈವೆಟ್ ಲಿಮಿಟೆಡ್, ಮುಂಬೈನ ಕುರ್ಲಾ ವೆಸ್ಟ್‌ನಲ್ಲಿ ಐದು ವರ್ಷದ ಅವಧಿಗೆ ಸ್ಥಳವನ್ನು ಮ್ಯಾಕ್ರೋಟೆಕ್ ಡೆವಲಪರ್ಸ್ ಲಿಮಿಟೆಡ್‌ನಿಂದ ಪಡೆದುಕೊಂಡಿದೆ. ಪ್ರತಿ ಚದರ ಅಡಿಗೆ ₹153ರಂತೆ ಬಾಡಿಗೆ ಪಾವತಿಸಲಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಹೊರಹರಿವು ಮತ್ತು ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆಯಿಂದ ದೇಶದ ಷೇರು ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಹೂಡಿಕೆದಾರರು ಇಂಧನ, ಹಣಕಾಸು ಮತ್ತು ಐ.ಟಿ ವಲಯದ ಷೇರುಗಳ ಮಾರಾಟಕ್ಕೆ ಮುಂದಾದರು. ಹೀಗಾಗಿ ಸೂಚ್ಯಂಕಗಳು ಇಳಿಕೆ ಕಂಡವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 636 ಅಂಶ ಇಳಿಕೆಯಾಗಿ, 80,737 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ನಡುವೆ 798 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 174 ಅಂಶ ಇಳಿಕೆಯಾಗಿ, 24,542 ಅಂಶಗಳಿಗೆ ಕೊನೆಗೊಂಡಿತು.

ಅದಾನಿ ಪೋರ್ಟ್ಸ್, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಪವರ್ ಗ್ರಿಡ್, ಎಟರ್ನಲ್, ಇಂಡಸ್‌ಇಂಡ್ ಬ್ಯಾಂಕ್, ಮಾರುತಿ ಸುಜುಕಿ, ಟಿಸಿಎಸ್ ಮತ್ತು ಅಲ್ಟ್ರಾಟೆಕ್ ಸಿಮೆಂಟ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.

ಟೂರ್ನಿಯಲ್ಲಿ ಗರಿಷ್ಠ ರನ್ ಗಳಿಸಿದವರು

ಪಂದ್ಯ 15 ರನ್ 759 ಶ್ರೇಷ್ಠ 108* — ಸಾಯಿ ಸುದರ್ಶನ್ (ಜಿಟಿ)

ಪಂದ್ಯ 16 ರನ್ 717 ಶ್ರೇಷ್ಠ 73* — ಸೂರ್ಯಕುಮಾರ್ ಯಾದವ್ (ಎಂಐ)

ಪಂದ್ಯ 14 ರನ್ 657 ಶ್ರೇಷ್ಠ 73* — ವಿರಾಟ್ ಕೊಹ್ಲಿ (ಆರ್‌ಸಿಬಿ)

ಪಂದ್ಯ 15 ರನ್ 650 ಶ್ರೇಷ್ಠ 93* — ಶುಭಮನ್ ಗಿಲ್ (ಜಿಟಿ)

ಪಂದ್ಯ 13 ರನ್ 627 ಶ್ರೇಷ್ಠ 117 — ಮಿಚೆಲ್ ಮಾರ್ಷ್ (ಎಲ್‌ಎಸ್‌ಜಿ)

ಪಂದ್ಯ 16 ರನ್ 604 ಶ್ರೇಷ್ಠ 97* — ಶ್ರೇಯಸ್ ಅಯ್ಯರ್ (ಪಿಬಿಕೆಎಸ್)

ಗರಿಷ್ಠ ವಿಕೆಟ್ ಪಡೆದವರು

ಪಂದ್ಯ 15 ವಿಕೆಟ್ 25 ಶ್ರೇಷ್ಠ 41ಕ್ಕೆ4 — ಪ್ರಸಿದ್ಧ ಕೃಷ್ಣ (ಜಿಟಿ)

ಪಂದ್ಯ 14 ವಿಕೆಟ್ 24 ಶ್ರೇಷ್ಠ 18ಕ್ಕೆ4 — ನೂರ್ ಅಹಮ್ಮದ್ (ಸಿಎಸ್‌ಕೆ)

ಪಂದ್ಯ 12 ವಿಕೆಟ್ 22 ಶ್ರೇಷ್ಠ 16 ಕ್ಕೆ3 — ಜೋಶ್ ಹ್ಯಾಜಲ್‌ವುಡ್ (ಆರ್‌ಸಿಬಿ)

ಪಂದ್ಯ 16 ವಿಕೆಟ್ 22 ಶ್ರೇಷ್ಠ 26ಕ್ಕೆ4 — ಟ್ರೆಂಟ್ ಬೌಲ್ಟ್ (ಎಂಐ)

ಪಂದ್ಯ 17 ವಿಕೆಟ್ 21 ಶ್ರೇಷ್ಠ 21 ಕ್ಕೆ3 — ಅರ್ಷದೀಪ್ ಸಿಂಗ್ (ಪಿಬಿಕೆಎಸ್)

ಪಂದ್ಯ 15 ವಿಕೆಟ್ 19 ಶ್ರೇಷ್ಠ 30ಕ್ಕೆ3 — ಸಾಯಿ ಕಿಶೋರ್ (ಜಿಟಿ)

ಟೂರ್ನಿಯಲ್ಲಿ ದಾಖಲಾದ ಶತಕಗಳು



ಈತನಕ ಪ್ರಶಸ್ತಿ ಗೆದ್ದ ತಂಡಗಳು

2008 ರಾಜಸ್ಥಾನ
2009 ಡೆಕ್ಕನ್
2010 ಚೆನ್ನೈ
2011 ಚೆನ್ನೈ
2012 ಕೋಲ್ಕತ್ತ
2013 ಮುಂಬೈ
2014 ಕೋಲ್ಕತ್ತ
2015 ಮುಂಬೈ
2016 ಹೈದರಾಬಾದ್
2017 ಮುಂಬೈ
2018 ಚೆನ್ನೈ
2019 ಮುಂಬೈ
2020 ಮುಂಬೈ
2021 ಚೆನ್ನೈ
2022 ಗುಜರಾತ್
2023 ಚೆನ್ನೈ
2024 ಕೋಲ್ಕತ್ತ
2025 ಆರ್‌ಸಿಬಿ

13
ರಾಜಸ್ಥಾನ ರಾಯಲ್ಸ್ ತಂಡದ ಶಿಮ್ರಾನ್ ಹೆಟ್ಮೆಯರ್ ಪಡೆದ ಕ್ಯಾಚ್‌ಗಳು. ಟೂರ್ನಿಯಲ್ಲಿ ಫೀಲ್ಡರ್ ಒಬ್ಬರು ಪಡೆದ ಗರಿಷ್ಠ ಕ್ಯಾಚ್ ಇದಾಗಿದೆ

35ಕ್ಕೆ5
ಡೆಲ್ಲಿ ಕ್ಯಾಪಿಟಲ್ಸ್‌ನ ಮಿಚೆಲ್ ಸ್ಟಾರ್ಕ್ ಪಂದ್ಯವೊಂದರಲ್ಲಿ ಗಳಿಸಿದ ವಿಕೆಟ್. ಇದು ಟೂರ್ನಿಯ ಶ್ರೇಷ್ಠ ಬೌಲಿಂಗ್

₹ 20 ಕೋಟಿ
ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪಡೆದ ಬಹುಮಾನ ಮೊತ್ತ.

₹ 12.50 ಕೋಟಿ
ರನ್ನರ್ಸ್ ಅಪ್ ಪಂಜಾಬ್ ಕಿಂಗ್ಸ್ ಪಡೆದ ಬಹುಮಾನ

ರಜತ್‌ಗೆ ಒಲಿದ ಪ್ರಶಸ್ತಿ

ಆರ್‌ಸಿಬಿ ತಂಡಕ್ಕೆ ದಿಗ್ಗಜ ಆಟಗಾರರು ನಾಯಕತ್ವ ವಹಿಸಿದ ಪರಂಪರೆಯೇ ಇದೆ. 2008 ರಿಂದ ಇಲ್ಲಿಯವರೆಗೂ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಕೆವಿನ್ ಪೀಟರ್ಸನ್, ಡೇನಿಯಲ್ ವೆಟೋರಿ, ವಿರಾಟ್ ಕೊಹ್ಲಿ ಅವರಂತಹ ಖ್ಯಾತನಾಮರು ತಂಡವನ್ನು ಮುನ್ನಡೆಸಿದ್ದರು. ಅವರೆಲ್ಲರ ನಾಯಕತ್ವ ಮತ್ತು ಆಟದ ಬಲದಿಂದ ಆರ್‌ಸಿಬಿಯ ಬ್ರ್ಯಾಂಡ್ ಮುಗಿಲುಮುಟ್ಟಿತು. ಆದರೆ ಪ್ರಶಸ್ತಿ ಕನಸು ಮಾತ್ರ ಕೈಗೂಡಿರಲಿಲ್ಲ. ಆದರೆ ಇದೇ ವರ್ಷ ನಾಯಕರಾಗಿ ನೇಮಕವಾದ ರಜತ್ ಪಾಟೀದಾರ್ ಅವರಿಗೆ ಅದೃಷ್ಟ ಒಲಿಯಿತು.

ಟೂರ್ನಿಯಲ್ಲಿ ದಾಖಲಾದ ತಂಡವೊಂದರ ಗರಿಷ್ಠ ರನ್

ರನ್	ತಂಡ	ಎದುರಾಳಿ	ಸ್ಥಳ
6ಕ್ಕೆ 286	ಸನ್‌ರೈಸರ್ಸ್ ಹೈದರಾಬಾದ್	ರಾಜಸ್ಥಾನ ರಾಯಲ್ಸ್	ಹೈದರಾಬಾದ್
3ಕ್ಕೆ 278	ಸನ್‌ರೈಸರ್ಸ್ ಹೈದರಾಬಾದ್	ಕೋಲ್ಕತ್ತ ನೈಟ್ ರೈಡರ್ಸ್	ದೆಹಲಿ
2ಕ್ಕೆ 247	ಸನ್‌ರೈಸರ್ಸ್ ಹೈದರಾಬಾದ್	ಪಂಜಾಬ್ ಕಿಂಗ್ಸ್	ಹೈದರಾಬಾದ್
6ಕ್ಕೆ 245	ಪಂಜಾಬ್ ಕಿಂಗ್ಸ್	ಸನ್‌ರೈಸರ್ಸ್	ಹೈದರಾಬಾದ್
5ಕ್ಕೆ 243	ಪಂಜಾಬ್ ಕಿಂಗ್ಸ್	ಗುಜರಾತ್ ಟೈಟನ್ಸ್	ಅಹಮದಾಬದ್

ಮೈದಾನದಲ್ಲಿ ಆನಂದಬಾಷ್ಪ ಸುರಿಸಿದ ವಿರಾಟ್ ಕೊಹ್ಲಿ

ವಿರಾಟ್ ಕೊಹ್ಲಿ ಪತ್ನಿ, ನಟಿ ಅನುಷ್ಕಾ ಶರ್ಮಾ ಮತ್ತು ಇತರರ ಸಂಭ್ರಮ

ಆರ್‌ಸಿಬಿ ಆಟಗಾರರನ್ನು ಅಭಿನಂದಿಸಿದ ಕ್ರಿಕೆಟ್ ದಿಗ್ಗಜ ಕ್ರಿಸ್ ಗೇಲ್

ಪಾಟೀದಾರ್ ಬಳಗಕ್ಕೆ ಐತಿಹಾಸಿಕ ಗೆಲುವು • 18 ವರ್ಷಗಳ ನಂತರ ಈಡೇರಿದ ಲಕ್ಷಾಂತರ ಅಭಿಮಾನಿಗಳ ಕನಸು

ಐಪಿಎಲ್‌ಗೆ ಹೊಸ 'ಕಿಂಗ್' ಆರ್‌ಸಿಬಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್/ ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಂಗಳವಾರ ರಾತ್ರಿ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಐಪಿಎಲ್ ಕಿರೀಟ ಧರಿಸುತ್ತಿದ್ದಂತೆಯೇ ದೇಶದೆಲ್ಲೆಡೆ ಅಭಿಮಾನಿಗಳ ಸಂಭ್ರಮ ಉಕ್ಕಿ ಹರಿಯಿತು. ಹದಿನೆಂಟು ವರ್ಷಗಳಿಂದ ಈ ಕ್ಷಣಕ್ಕಾಗಿ ಕಾದಿದ್ದ ಲಕ್ಷಾಂತರ ಜನರು ಬೀದಿಗಿಳಿದು ಸಂಭ್ರಮಿಸಿದರು. ಕುಣಿದರು, ಸಿಹಿ ಹಂಚಿದರು. ಬೆಳಗಿನ ಜಾವದವರೆಗೂ 'ಆರ್‌ಸಿಬಿ..ಆರ್‌ಸಿಬಿ..' ಎಂಬ ಕೂಗುಗಳು ಪ್ರತಿಧ್ವನಿಸಿದವು.

ಐಪಿಎಲ್ ಶುರುವಾದಾಗಿನಿಂದಲೂ ಮೂರು ಸಲ ಫೈನಲ್ ತಲುಪಿದ್ದ ಆರ್‌ಸಿಬಿಗೆ ಪ್ರಶಸ್ತಿ ಒಲಿದಿರಲಿಲ್ಲ. ಆದರೆ ಈ ಸಲ ಕೈತಪ್ಪಲಿಲ್ಲ. ಫೈನಲ್ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವನ್ನು 6 ರನ್‌ಗಳಿಂದ ಸೋಲಿಸಿದ ಆರ್‌ಸಿಬಿ ಚಾಂಪಿಯನ್ ಪಟ್ಟಕ್ಕೇರಿತು. ಈ ಹಿಂದೆ ಆರ್‌ಸಿಬಿಯಲ್ಲಿ ಆಡಿದ್ದ ದಿಗ್ಗಜರಾದ ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಮತ್ತು ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಅವರೂ ಕ್ರೀಡಾಂಗಣದಲ್ಲಿ ಹಾಜರಿದ್ದರು. ತಮ್ಮ ಪ್ರಿಯ ಗೆಳೆಯ ವಿರಾಟ್ ಕೊಹ್ಲಿ ಅವರನ್ನು ಅಪ್ಪಿಕೊಂಡು ಅಭಿನಂದಿಸಿದರು. ಭಾವುಕರಾದ ಕೊಹ್ಲಿಯ ಕಂಗಳು ತೇವಗೊಂಡವು.

ಪಂಜಾಬ್, ಎರಡು ದಿನಗಳ ಹಿಂದಷ್ಟೇ ಎರಡನೇ ಕ್ವಾಲಿಫೈಯರ್‌ನಲ್ಲಿ ಬಲಿಷ್ಠ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಆ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಅಬ್ಬರಿಸಿದ ರೀತಿಯನ್ನು ನೋಡಿದವರಿಗೆ ಆರ್‌ಸಿಬಿಯ ಗೆಲುವು ಸುಲಭವಲ್ಲ ಎಂಬ ಭಾವ ಮೂಡಿತ್ತು. ಮಂಗಳವಾರ ರಾತ್ರಿ ಟಾಸ್ ಗೆದ್ದ ಪಂಜಾಬ್ ಫೀಲ್ಡಿಂಗ್ ತೆಗೆದುಕೊಂಡಾಗಲೂ ಇದೇ ಸಂದೇಹ ಅಭಿಮಾನಿಗಳ ಮನದಲ್ಲಿ ಮನೆ ಮಾಡಿತ್ತು. ಅದಕ್ಕೆ ತಕ್ಕಂತೆ ಪಂಜಾಬ್ ತಂಡದ ಕೈಲ್ ಜೆಮಿಸನ್ (48ಕ್ಕೆ3) ಹಾಗೂ ಎಡಗೈ ವೇಗಿ ಅರ್ಷದೀಪ್ ಸಿಂಗ್ (40ಕ್ಕೆ3) ಅವರು ಆರ್‌ಸಿಬಿಗೆ ಕಡಿವಾಣ ಹಾಕುವ ಪ್ರಯತ್ನ ಮಾಡಿದರು. ಇದರ ನಡುವೆಯೂ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 ರನ್‌ಗಳ ಮೊತ್ತ ದಾಖಲಿಸಿತು. ಪಂಜಾಬ್ ತಂಡದಲ್ಲಿರುವ ಪ್ರತಿಭಾವಂತ ಮತ್ತು ಇನ್‌ಫಾರ್ಮ್ ಬ್ಯಾಟರ್‌ಗಳಿಗೆ ಈ ಮೊತ್ತ ದೊಡ್ಡ ಸವಾಲಾಗಿರಲಿಲ್ಲ. ಆದರೆ ಆರ್‌ಸಿಬಿಯ ಸ್ಪಿನ್ನರ್ ಕೃಣಾಲ್ ಪಾಂಡ್ಯ (4–0–17–2) ಮತ್ತು ವೇಗಿ ಭುವನೇಶ್ವರ್ ಕುಮಾರ್ (4–0–38–2) ಕಿಂಗ್ಸ್‌ಗೆ ತಡೆಯೊಡ್ಡಿದರು.

ಪ್ರಭಸಿಮ್ರನ್ ಸಿಂಗ್ (26 ರನ್) ಮತ್ತು ಜೋಶ್ ಇಂಗ್ಲಿಸ್ (39 ರನ್) ಅವರ ವಿಕೆಟ್ ಗಳಿಸಿದ ಕೃಣಾಲ್ ಗೆಲುವಿನ ರೂವಾರಿಯಾದರು. ಶ್ರೇಯಸ್ ಅಯ್ಯರ್ (1 ರನ್) ಅವರಿಗೆ ರೊಮೆರಿಯೊ ಶೆಫರ್ಡ್ ಪೆವಿಲಿಯನ್ ದಾರಿ ತೋರಿಸಿದ್ದು ಮಹತ್ವದ ತಿರುವಾಯಿತು.

ಆದರೆ ಒಂದು ಕಡೆ ವಿಕೆಟ್ ಬೀಳುತ್ತಿದ್ದರೂ ದಿಟ್ಟ ಆಟವಾಡಿದ ಶಶಾಂಕ್ ಸಿಂಗ್ (ಅಜೇಯ 61; 30 ಎಸೆತ) ಕೊನೆಯ ಹಂತದಲ್ಲಿ ಅಬ್ಬರಿಸಿದರು. ಅದರಲ್ಲೂ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ 29 ರನ್‌ಗಳು ಬೇಕಿದ್ದಾಗಲೂ ಅವರು ಕ್ರೀಸ್‌ನಲ್ಲಿದ್ದು ಭರವಸೆ ಮೂಡಿಸಿದ್ದರು. ಜೋಶ್ ಹ್ಯಾಜಲ್‌ವುಡ್ ಹಾಕಿದ ಆ ಓವರ್‌ನಲ್ಲಿ ಶಶಾಂಕ್ 3 ಸಿಕ್ಸರ್ ಮತ್ತು ಒಂದು ಬೌಂಡರಿ ಹೊಡೆದರು. ಆದರೆ ಅವರ ಪ್ರಯತ್ನಕ್ಕೆ ಗೆಲುವು ಒಲಿಯಲಿಲ್ಲ. ಆದರೆ ಆರ್‌ಸಿಬಿ ಬಳಗದಲ್ಲಿ ಜಯದ ಸಂಭ್ರಮ ಗರಿಗೆದರಿತು.

ಈ ಬಾರಿಯ ಟೂರ್ನಿಯಲ್ಲಿ ಆರ್‌ಸಿಬಿಯು ಅತ್ಯಂತ ಶಿಸ್ತಿನ ಆಟವಾಡಿತು. ಲೀಗ್ ಹಂತದ 14 ಪಂದ್ಯಗಳಲ್ಲಿ 9ರಲ್ಲಿ ಜಯಿಸಿದ್ದ ತಂಡವು 4ರಲ್ಲಿ ಸೋತಿತ್ತು. ಒಂದು ಪಂದ್ಯ ಮಳೆಯಿಂದ ರದ್ದಾಗಿತ್ತು. ಅಂಕ ಪಟ್ಟಿಯಲ್ಲಿ 2ನೇ ಸ್ಥಾನ ಪಡೆದು ಕ್ವಾಲಿಫೈಯರ್ ಪ್ರವೇಶಿಸಿತ್ತು. ಮೊದಲ ಕ್ವಾಲಿಫೈಯರ್‌ನಲ್ಲಿ ಪಂಜಾಬ್ ಕಿಂಗ್ಸ್ ಎದುರು ಗೆದ್ದು ಫೈನಲ್‌ಗೆ ಲಗ್ಗೆ ಇಟ್ಟಿತ್ತು.

ಪಂದ್ಯದ ನಂತರ ಮಾತನಾಡಿದ ರಜತ್ ಪಾಟೀದಾರ್ 'ಈ ಸಲ ಕಪ್ ನಮ್ದು' ಎಂದು ಹೇಳಿದ ಮಾತು ಕ್ರೀಡಾಂಗಣದಲ್ಲಿ ಪ್ರತಿಧ್ವನಿಸಿತು.

ಕೃಣಾಲ್ ಪಾಂಡ್ಯ 4-0-17-2

'ಅಭಿಮಾನಿಗಳ ಗೆಲುವು'

ವಿರಾಟ್ ಕೊಹ್ಲಿ ಅವರನ್ನು ಅಭಿನಂದಿಸಿದ ಎಬಿ ಡಿವಿಲಿಯರ್ಸ್ ಪಿಟಿಐ ಚಿತ್ರಗಳು

'ಇದು ತಂಡಕ್ಕೆ ದಕ್ಕಿದ ಗೆಲುವು ಮಾತ್ರವಲ್ಲ, ಆರ್‌ಸಿಬಿ ಅಭಿಮಾನಿಗಳ ಗೆಲುವು ಕೂಡ. ಇದು 18 ದೀರ್ಘ ವರ್ಷಗಳ ಕಾಯುವಿಕೆ. ಈ ಅವಧಿಯಲ್ಲಿ ನನ್ನ ಯೌವನ, ಮೇರು ಮಟ್ಟದ ಆಟ, ಅನುಭವ ಧಾರೆ ಎರೆದಿದ್ದೇನೆ. ಪ್ರತಿ ವರ್ಷ ಗೆಲುವಿಗೆ ನನ್ನಿಂದ ಏನೆಲ್ಲಾ ಸಾಧ್ಯವೊ ಎಲ್ಲವನ್ನೂ ಕೊಟ್ಟಿದ್ದೇನೆ. ಕೊನೆಗೂ ಗೆದ್ದಿರುವುದು ನಂಬಲ ಸಾಧ್ಯವಾದ ಅನುಭವ. ಇಂಥ ಸುದಿನವನ್ನು ನಿರೀಕ್ಷಿಸಿರಲಿಲ್ಲ. ಪಂದ್ಯದ ಕೊನೆಯ ಎಸೆತ ಬೌಲಿಂಗ್ ವೇಳೆಯೂ ಭಾವನೆಗಳನ್ನು ತಡೆದುಕೊಂಡೆ'.

'ಈ ಫ್ರಾಂಚೈಸಿಗೆ ಎಬಿ ಡಿವಿಲಿಯರ್ಸ್ ಅವರು ನೀಡಿರುವ ಕಾಣಿಕೆ ಅಮೋಘವಾದುದು. ಅವರಿಗೆ ಹೇಳಿದ್ದೆ. 'ಇದು ನಮ್ಮ ಗೆಲುವು ಮಾತ್ರವಲ್ಲ. ನಿಮ್ಮದೂ ಸಹ. ನಮ್ಮ ಜೊತೆ ನೀವೂ ಸಂಭ್ರಮ ಅಚರಿಸಬೇಕೆಂದು ಹೇಳಿದ್ದೆ. ಅವರು ನಾಲ್ಕು ವರ್ಷ ಹಿಂದೆಯೇ ನಿವೃತ್ತರಾದರೂ ನಮ್ಮ ತಂಡದ ಪರ ಅತಿ ಹೆಚ್ಚು 'ಪಂದ್ಯದ ಆಟಗಾರ' ಗೌರವ ಪಡೆದಿದ್ದಾರೆ'.

ವಿರಾಟ್ ಕೊಹ್ಲಿ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 9ಕ್ಕೆ 190 (20 ಓವರ್‌ಗಳಲ್ಲಿ)

ಸಾಲ್ಟ್ ಸಿ ಅಯ್ಯರ್ ಬಿ ಜೆಮಿಸನ್ 16 (9ಎ, 4x2, 6x1)
ಕೊಹ್ಲಿ ಸಿ ಮತ್ತು ಬಿ ಒಮರ್‌ಜೈ 43 (35ಎ, 4x3)
ಮಯಂಕ್ ಸಿ ಅರ್ಷದೀಪ್ ಬಿ ಚಾಹಲ್ 24 (18ಎ, 4x2, 6x1)
ಪಾಟೀದಾರ್ ಎಲ್‌ಬಿಡಬ್ಲ್ಯು ಬಿ ಜೆಮಿಸನ್ 26 (16ಎ, 4x1, 6x2)
ಲಿವಿಂಗ್‌ಸ್ಟೋನ್ ಎಲ್‌ಬಿಡಬ್ಲ್ಯು ಬಿ ಜೆಮಿಸನ್ 25 (15ಎ, 6x2)
ಜಿತೇಶ್ ಬಿ ವೈಶಾಖ 24 (10ಎ, 4x2, 6x2)
ಶೆಫರ್ಡ್ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 17 (9ಎ, 4x1, 6x1)
ಕೃಣಾಲ್ ಸಿ ಅಯ್ಯರ್ ಬಿ ಅರ್ಷದೀಪ್ 4 (5ಎ)
ಭುವನೇಶ್ವರ್ ಸಿ ಆರ್ಯ ಬಿ ಅರ್ಷದೀಪ್ 1 (2ಎ)
ಯಶ್ ದಯಾಳ್ ಔಟಾಗದೇ 1 (1ಎ)

ಇತರೆ: 9 (ವೈಡ್ 9)

ವಿಕೆಟ್ ಪತನ: 1-18 (ಫಿಲ್ ಸಾಲ್ಟ್, 1.4), 2-56 (ಮಯಂಕ್ ಅಗರವಾಲ್, 6.2), 3-96 (ರಜತ್ ಪಾಟೀದಾರ್, 10.5), 4-131 (ವಿರಾಟ್ ಕೊಹ್ಲಿ, 14.5), 5-167 (ಲಿಯಾಮ್ ಲಿವಿಂಗ್‌ಸ್ಟೋನ್, 16.5), 6-171 (ಜಿತೇಶ್ ಶರ್ಮಾ, 17.4), 7-188 (ರೊಮಾರಿಯೊ ಶೆಫರ್ಡ್, 19.2), 8-189 (ಕೃಣಾಲ್ ಪಾಂಡ್ಯ, 19.4), 9-190 (ಭುವನೇಶ್ವರ್ ಕುಮಾರ್, 19.6)

ಬೌಲಿಂಗ್: ಅರ್ಷದೀಪ್ ಸಿಂಗ್ 4–0–40–3, ಕೈಲ್ ಜೆಮಿಸನ್ 4–0–48–3, ಅಜ್ಮತ್‌ವುಲ್ಲಾ ಒಮರ್‌ಜೈ 4–0–35–1, ವೈಶಾಖ ವಿಜಯಕುಮಾರ್ 4–0–30–1, ಯಜುವೇಂದ್ರ ಚಾಹಲ್ 4–0–37–1

ಪಂಜಾಬ್ ಕಿಂಗ್ಸ್ 7ಕ್ಕೆ 184 (20 ಓವರ್‌ಗಳಲ್ಲಿ)

ಪ್ರಿಯಾಂಶ್ ಸಿ ಸಾಲ್ಟ್ ಬಿ ಹ್ಯಾಜಲ್‌ವುಡ್ 24 (19ಎ, 4x4)
ಪ್ರಭಸಿಮ್ರನ್ ಸಿಂಗ್ ಸಿ ಭುವನೇಶ್ವರ್ ಬಿ ಕೃಣಾಲ್ 26 (22ಎ, 6x2)
ಇಂಗ್ಲಿಸ್ ಸಿ ಲಿವಿಂಗ್‌ಸ್ಟೋನ್ ಬಿ ಕೃಣಾಲ್ 39 (23ಎ, 4x1, 6x4)
ಶ್ರೇಯಸ್ ಸಿ ಸುಯಶ್ ಬಿ ಶೆಫರ್ಡ್ 1 (2ಎ)
ವಧೇರಾ ಸಿ ಕೃಣಾಲ್ ಬಿ ಭುವನೇಶ್ವರ್ 15 (18ಎ, 6x1)
ಶಶಾಂಕ್ ಸಿಂಗ್ ಔಟಾಗದೇ 61 (30ಎ, 4x3, 6x6)
ಮಾರ್ಕಸ್ ಸಿ ಯಶ್ ಬಿ ಭುವನೇಶ್ವರ್ 6 (2ಎ, 6x1)
ಒಮರ್‌ಜೈ ಸಿ ಭಾಂಡಗೆ ಬಿ ದಯಾಳ್ 1 (2ಎ)
ಕೈಲ್ ಜೆಮಿಸನ್ ಔಟಾಗದೇ 0 (2ಎ)

ಇತರೆ: 11 (ಲೆಗ್‌ಬೈ 8, ವೈಡ್ 3)

ವಿಕೆಟ್ ಪತನ: 1-43 (ಪ್ರಿಯಾಂಶ್ ಆರ್ಯ, 4.6), 2-72 (ಪ್ರಭಸಿಮ್ರನ್ ಸಿಂಗ್, 8.3), 3-79 (ಶ್ರೇಯಸ್ ಅಯ್ಯರ್, 9.4), 4-98 (ಜೋಶ್ ಇಂಗ್ಲಿಸ್, 12.1), 5-136 (ನೆಹಲ್ ವಧೇರಾ, 16.2), 6-142 (ಮಾರ್ಕಸ್ ಸ್ಟೊಯಿನಿಸ್, 16.4), 7-145 (ಅಜ್ಮತ್‌ವುಲ್ಲಾ ಒಮರ್‌ಜೈ, 17.2)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–38–2, ಯಶ್ ದಯಾಳ್ 3–0–18–1, ಹ್ಯಾಜಲ್‌ವುಡ್ 4–0–54–1, ಕೃಣಾಲ್ ಪಾಂಡ್ಯ 4–0–17–2, ಸುಯಶ್ ಶರ್ಮಾ 2–0–19–0, ರೊಮಾರಿಯೊ ಶೆಫರ್ಡ್ 3–0–30–1

ಪಂದ್ಯದ ಆಟಗಾರ: ಕೃಣಾಲ್ ಪಾಂಡ್ಯ

ಫಲಿತಾಂಶ: ಆರ್‌ಸಿಬಿಗೆ 6 ರನ್ ಜಯ, ಚಾಂಪಿಯನ್

ಆರ್‌ಸಿಬಿ ಗೆಲುವು ಸಾಧಿಸುತ್ತಿದ್ದಂತೆ ಸಂಭ್ರಮಿಸಿದ ಇಂಗ್ಲೆಂಡ್‌ನ ಮಾಜಿ ಪ್ರಧಾನಿ ರಿಷಿ ಸುನಕ್

ಆರ್‌ಸಿಬಿ ಅಭಿಮಾನಿ ರಿಷಿ ಸುನಕ್

ಅಹಮದಾಬಾದ್ (ಪಿಟಿಐ): 'ನಾನು ಬೆಂಗಳೂರಿನ ಕುಟುಂಬದ ಹುಡುಗಿಯನ್ನು ಮದುವೆಯಾಗಿದ್ದೇನೆ. ಆದ್ದರಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ನನ್ನ ಬೆಂಬಲ' ಎಂದು ಇಂಗ್ಲೆಂಡ್‌ನ ಮಾಜಿ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

ಮಂಗಳವಾರ ಇಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯವನ್ನು ವೀಕ್ಷಿಸಿದ ಅವರು, '16 ವರ್ಷಗಳ ಹಿಂದೆ ಅಕ್ಷತಾಗೆ (ಇನ್ಫೊಸಿಸ್ ಸಂಸ್ಥಾಪಕ ಎನ್. ಆರ್. ನಾರಾಯಣಮೂರ್ತಿ ಮತ್ತು ಸುಧಾಮೂರ್ತಿ ಅವರ ಮಗಳು) ಕನ್ನಡದಲ್ಲಿಯೇ ಮದುವೆ ಪ್ರಸ್ತಾವ ಮಾಡಿದ್ದೆ. ಆಗಿನಿಂದ ಇಲ್ಲಿಯವರೆಗೂ ನನ್ನ ಕನ್ನಡ ಉತ್ತಮವಾಗುತ್ತಿದೆ. ಕೆಲವು ವರ್ಷಗಳ ಹಿಂದೆ ನಾವು ಜೊತೆಯಾಗಿ ಪಂದ್ಯ ನೋಡಲು ಹೋಗಿದ್ದೆವು' ಎಂದು ನೆನಪಿಸಿಕೊಂಡರು.

'ನಾನು ವಿರಾಟ್ ಕೊಹ್ಲಿಯ ದೊಡ್ಡ ಅಭಿಮಾನಿ. ಅವರು ನಿಜಕ್ಕೂ ಮಹಾನ್ ಆಟಗಾರ. ಅವರು ಹಸ್ತಾಕ್ಷರ ಮಾಡಿರುವ ಬ್ಯಾಟ್ ನನ್ನ ಬಳಿ ಇದೆ. ಅದು ನನ್ನ ದೊಡ್ಡ ಆಸ್ತಿ' ಎಂದರು.

'ಒಂದು ಶತಮಾನದ ನಂತರ ಒಲಿಂಪಿಕ್ ಕೂಟದಲ್ಲಿ ಕ್ರಿಕೆಟ್ ಮರು ಸೇರ್ಪಡೆಯಾಗಲು ಭಾರತವೇ ಕಾರಣ. 21ನೇ ಶತಮಾನದಲ್ಲಿ ಭಾರತವು ವಿಶ್ವದ ಪ್ರಭಾವಿ ದೇಶವಾಗಿ ಬೆಳೆಯುತ್ತಿದೆ. ಅದೇ ಕಾರಣಕ್ಕೆ ಕ್ರಿಕೆಟ್ ನೂರು ವರ್ಷಗಳ ನಂತರ ಒಲಿಂಪಿಕ್ಸ್‌ಗೆ ಮರಳಿದೆ' ಎಂದರು.

2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕೂಟದಲ್ಲಿ ಕ್ರಿಕೆಟ್ ಸೇರ್ಪಡೆಯಾಗಿದೆ. 1900ರ ಒಲಿಂಪಿಕ್ಸ್ ನಂತರ ಮರುಸೇರ್ಪಡೆಯಾಗಿದೆ.

ಉದ್ಯೋಗ ವಾಣಿ

BMS EDUCATIONAL TRUST, BENGALURU
BMS SCHOOL OF ARCHITECTURE
(Approved By COA, AFFILIATED TO VTU, BELAGAVI)

Late Shri B.M.Sreenivasaiah Founder — Late Shri B.S.Narayan Donor Trustee

Application in prescribed form are invited from the eligible candidates for the following Management positions :
Faculty Positions for B. Arch and M. Arch (Urban Design)

Position	Desirable
Professor	- Ph.D in Architecture with research - Must have publications in journals of repute
Assistant Professor	- Pursuing Ph.D in Architecture with Research - Publications in journals of repute

Note: Qualifications:
- Must surpass minimum qualification criteria set by the Council of Architecture
- Graduate and Post-Graduate qualifications from Institute of repute.

Updated resume with copies of credentials, passport size photograph & Printed application form along with DD in Favour of The Director, BMSSA payable at Bangalore for Rs.500/- should be sent in a sealed cover Within fifteen days to below mentioned address.

Salary will be based on qualification and experience.

To apply for all the above positions login https://www.bmssa.ac.in/careers

THE DIRECTOR, BMS SCHOOL OF ARCHITECTURE
BMSIT CAMPUS, DODDABALLAPURA MAIN ROAD, YELAHANKA, BENGALURU–560 064.

TARGET SECURITY SERVICES PVT. LTD
We're Hiring:
★ General Manager (GM)
★ Assistant General Manager (AGM)
★ Training Managers
★ Operations Manager
★ MBA Graduates for Business Development
★ Digital Marketing Head

Experience is Must

Best Salaries in the Industry!
Apply Now! Send your resume to:
+91 80881 85581 ★ targethiringnow@gmail.com
Elevate your career with us!

UDUPI COCHIN SHIPYARD LIMITED
Malpe, Karnataka
A Government of India Enterprise
Ministry of Ports, Shipping and Waterways, Government of India.

Ref. No. UCSL/IMS/HR/VN/F/11- DMs/2025/42 Dated 02 June 2025

RECRUITMENT
EXECUTIVES ON PERMANENT BASIS

Sl. No	Name of Posts	No. of Posts
01	Deputy Manager (Planning)	01 Post
02	Deputy Manager (Electrical)	01 Post
03	Deputy Manager (Machinery & Piping)	01 Post
04	Deputy Manager (Mechanical)	01 Post
05	Deputy Manager (Human Resource)	01 Post
06	Deputy Manager (Information Technology)	01 Post

For more details on age, qualification, remuneration, reservations, etc with regards to this advertisement visit www.cochinshipyard.in or www.udupicsl.com

Last date for Application: 23 June 2025.

Sd/-
MANAGER (HR & IR)

Azim Premji Foundation

Open Positions at Azim Premji School in Karnataka

Pre-University Lecturers

Chemistry, Mathematics, History, Economics, Sociology, Political Science, English and Kannada.

Eligibility:
- Postgraduation in relevant subject and education degree (B.Ed.)
- Minimum two years' teaching experience in a pre-university college
- Ability to teach in English with knowledge of Kannada

Location Azim Premji School, Yadgir

Nursery Teachers

Eligibility:
- Graduation and NTT/Montessori teacher training Program or any other equivalent nursery teacher training diploma course
- Minimum 2 years' teaching experience as a nursery teacher
- Ability to teach in English with knowledge of Kannada

Location Azim Premji School, Kalaburagi

To know more about the roles and apply, visit **https://bit.ly/SchoolTeacher-KA**
or scan the QR Code

ಫ್ರೆಂಚ್ ಓಪನ್ ಟೆನಿಸ್: ಸಿನ್ನರ್, ಬುಬ್ಲಿಕ್ ಮುನ್ನಡೆ

ಸೆಮಿಗೆ ಶ್ವಾಂಟೆಕ್, ಸಬಲೆಂಕಾ

ಪ್ಯಾರಿಸ್ (ಎಎಫ್‌ಪಿ): ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಮತ್ತು ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಮಂಗಳವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ದಾಖಲೆಯ ಸತತ ನಾಲ್ಕನೇ ಪ್ರಶಸ್ತಿ ಜಯದ ಛಲದಲ್ಲಿರುವ ಪೋಲೆಂಡ್‌ನ ಶ್ವಾಂಟೆಕ್ ಕ್ವಾರ್ಟರ್ ಫೈನಲ್‌ನಲ್ಲಿ 6-1, 7-5ರ ನೇರ ಸೆಟ್‌ಗಳಿಂದ 13ನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ ಅವರನ್ನು ಸೋಲಿಸಿದರು. 2020 ಮತ್ತು 2022ರಿಂದ 2024ರವರೆಗೆ ಚಾಂಪಿಯನ್ ಆಗಿರುವ ಪೋಲೆಂಡ್ ಆಟಗಾರ್ತಿ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಗೆಲುವಿನ ಓಟವನ್ನು 25ನೇ ಪಂದ್ಯಗಳಿಗೆ ವಿಸ್ತರಿಸಿದರು.

ಪೋಲೆಂಡ್‌ನ ಇಗಾ ಶ್ವಾಂಟೆಕ್ –ಎಎಫ್‌ಪಿ ಚಿತ್ರ

ಕಳೆದ ವರ್ಷದ ಕೊನೆಯಲ್ಲಿ ಒಂದು ತಿಂಗಳ ಡೋಪಿಂಗ್ ನಿಷೇಧಕ್ಕೆ ಗುರಿಯಾಗಿದ್ದ 24 ವರ್ಷ ವಯಸ್ಸಿನ ಶ್ವಾಂಟೆಕ್, 1968ರ ನಂತರ ಪ್ಯಾರಿಸ್‌ನಲ್ಲಿ ಸತತ ನಾಲ್ಕು ಪ್ರಶಸ್ತಿಗಳನ್ನು ಗೆದ್ದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಲು ಎದುರು ನೋಡುತ್ತಿದ್ದಾರೆ.

ಐದನೇ ಶ್ರೇಯಾಂಕದ ಶ್ವಾಂಟೆಕ್‌ಗೆ ಅಂತಿಮ ನಾಲ್ಕರ ಘಟ್ಟದಲ್ಲಿ ಬೆಲಾರಸ್‌ನ ತಾರೆ ಸಬಲೆಂಕಾ ಎದುರಾಳಿ ಯಾಗಿದ್ದಾರೆ. ಅವರು ಎಂಟರ ಘಟ್ಟದ ಹಣಾಹಣಿಯಲ್ಲಿ 7-6 (7/3), 6-3ರಿಂದ ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ (ಚೀನಾ) ಅವರನ್ನು ಸೋಲಿಸಿದರು.

ಸಿನ್ನರ್ ಮುನ್ನಡೆ: ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟ ಪ್ರವೇಶಿಸಿದರು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಇಟಲಿಯ ಆಟಗಾರ 6-1, 6-3, 6-4ರ ನೇರ ಸೆಟ್‌ಗಳಿಂದ 17ನೇ ಶ್ರೇಯಾಂಕದ ಆ್ಯಂಡ್ರೆ ರುಬ್ಲೆವ್ (ರಷ್ಯಾ) ಅವರನ್ನು ಮಣಿಸಿದರು.

ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಸಿನ್ನರ್ ಅವರಿಗೆ ಮುಂದಿನ ಸುತ್ತಿನಲ್ಲಿ ಕಜಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಎದುರಾಳಿ ಯಾಗಿದ್ದಾರೆ. ಶ್ರೇಯಾಂಕರಹಿತ ಆಟಗಾರ ಬುಬ್ಲಿಕ್ 5-7, 6-3, 6-2, 6-4ರಿಂದ ಐದನೇ ಶ್ರೇಯಾಂಕದ ಜ್ಯಾಕ್ ಡ್ರೇಪರ್ (ಬ್ರಿಟನ್) ಅವರಿಗೆ ಆಘಾತ ನೀಡಿ, ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಗುಕೇಶ್‌ಗೆ ಮಣಿದ ಇರಿಗೇಶಿ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಹಾಲಿ ವಿಶ್ವ ಚಾಂಪಿಯನ್, ಭಾರತದ ಡಿ.ಗುಕೇಶ್ ಅವರು ನಾರ್ವೆ ಚೆಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದರು. ಸೋಮವಾರ ಸ್ವದೇಶದ ಅರ್ಜುನ್ ಇರಿಗೇಶಿ ಅವರನ್ನು ಮಣಿಸಿ ಎರಡನೇ ಸ್ಥಾನಕ್ಕೆ ಏರಿದರು.

ಭಾನುವಾರ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಆಘಾತ ನೀಡಿದ್ದ 19 ವರ್ಷದ ವಯಸ್ಸಿನ ಗುಕೇಶ್ ಕ್ಲಾಸಿಕಲ್ ಏಳನೇ ಸುತ್ತಿನಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು ಜಯ ಸಾಧಿಸಿದರು. ಕ್ಲಾಸಿಕಲ್ ಸ್ಪರ್ಧೆಯಲ್ಲಿ ಇರಿಗೇಶಿ (7.5) ವಿರುದ್ಧ ಗುಕೇಶ್ ಅವರಿಗೆ ದೊರೆತ ಮೊದಲ ಗೆಲುವು ಇದಾಗಿದೆ. ಈ ಗೆಲುವಿನೊಂದಿಗೆ ಅವರು 11.5 ಅಂಕ ಸಂಪಾದಿಸಿ, ಕಾರ್ಲ್‌ಸನ್ (11) ಅವರನ್ನು ಹಿಂದಿಕ್ಕಿದರು.

ಡಿ.ಗುಕೇಶ್

ಫೆಬ್ರುವರಿಯಲ್ಲಿ ನಡೆದ ಟಾಟಾ ಸ್ಟೀಲ್ ಮಾಸ್ಟರ್ಸ್‌ನಲ್ಲಿ ಇರಿಗೇಶಿ ವಿರುದ್ಧ ಕೊನೆಯ ಸುತ್ತಿನಲ್ಲಿ ಸೋತು ಗುಕೇಶ್ ಅವರು ಪ್ರಶಸ್ತಿ ಮುಡಿಗೇರಿಸಿ ಕೊಳ್ಳುವ ಅವಕಾಶ ಕಳೆದುಕೊಂಡಿದ್ದರು. ಅಲ್ಲದೆ, ಇಲ್ಲೂ ಎರಡನೇ ಸುತ್ತಿನಲ್ಲಿ ಗುಕೇಶ್ ವಿರುದ್ಧ ಇರಿಗೇಶಿ ಜಯ ಸಾಧಿಸಿದ್ದರು. ಈ ಸೋಲಿಗೆ ಗುಕೇಶ್ ಮುಯ್ಯಿ ತೀರಿಸಿಕೊಂಡರು.

ಇನ್ನೂ ಮೂರು ಸುತ್ತುಗಳು ಬಾಕಿ ಇರುವಂತೆ ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಫ್ಯಾಬಿಯಾನೊ ಕರುವಾನಾ 12.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅವರು ಚೀನಾದ ವೀ ಯಿ (6.5) ಅವರನ್ನು ಸೋಲಿಸಿದರು.

ಆತಿಥೇಯ ನಾರ್ವೆಯ ಕಾರ್ಲ್‌ಸನ್ 'ಆರ್ಮ್‌ಗೆಡನ್'ನಲ್ಲಿ ವಿಶ್ವದ ಎರಡನೇ ರ‍್ಯಾಂಕ್‌ನ ಹಿಕಾರು ನಕಮುರಾ (8.5) ವಿರುದ್ಧ ಜಯ ಸಾಧಿಸಿದರು.

ಕ್ರಿಕೆಟ್: ಹೆನ್ರಿಚ್ ಕ್ಲಾಸನ್ ನಿವೃತ್ತಿ

ಕೇಪ್‌ಟೌನ್ (ಪಿಟಿಐ): ದಕ್ಷಿಣ ಆಫ್ರಿಕಾದ ಸ್ಫೋಟಕ ಶೈಲಿಯ ಬ್ಯಾಟರ್ ಹೆನ್ರಿಚ್ ಕ್ಲಾಸನ್ ಅವರು ಸೋಮವಾರ ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದರು.

ಹೋದ ವರ್ಷ ಜನವರಿಯಲ್ಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಇದೀಗ ಉಳಿದೆಲ್ಲ ಮಾದರಿಗೆ ನಿವೃತ್ತಿ ಘೋಷಿಸಿದ್ದಾರೆ.

33 ವರ್ಷ ವಯಸ್ಸಿನ ಕ್ಲಾಸನ್ ಅವರು 4 ಟೆಸ್ಟ್, 60 ಏಕದಿನ ಮತ್ತು 58 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಅವರು 2141 ರನ್ ಗಳಿಸಿದ್ದಾರೆ. ಟಿ20 ಮಾದರಿಯಲ್ಲಿ1000 ರನ್ ಕಲೆ ಹಾಕಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ಆಯೋಜನೆ

ಜುಲೈ 5ರಂದು ನೀರಜ್ ಚೋಪ್ರಾ ಕ್ಲಾಸಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ನೀರಜ್ ಚೋಪ್ರಾ ಕ್ಲಾಸಿಕ್ ಅಂತರ ರಾಷ್ಟ್ರೀಯ ಜಾವೆಲಿನ್ ಥ್ರೋ ಸ್ಪರ್ಧೆಯು ಜುಲೈ 5ರಂದು ಕಂಠೀರವ ಕ್ರೀಡಾಂಗಣದಲ್ಲಿ ಆಯೋಜನೆಯಾಗಿದೆ.

ಡಬಲ್ ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಆಶ್ರಯದಲ್ಲಿ ನಡೆಯಲಿರುವ ಈ ಸ್ಪರ್ಧೆಯನ್ನು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಮಾನ್ಯ ಮಾಡಿದೆ. ಈ ಸ್ಪರ್ಧೆಯು ಮೇ 24ರಂದು ಆಯೋಜನೆಯಾಗಿತ್ತು.

ಆದರೆ ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದ ಕಾರಣದಿಂದಾಗಿ ಮುಂದೂಡಲಾಗಿತ್ತು. ಇದೀಗ ಸ್ಪರ್ಧೆಯನ್ನು ನಡೆಸಲು ಸರ್ವಸನ್ನದ್ಧರಾಗಿರುವುದಾಗಿ ಆಯೋಜಕರು ಮಂಗಳವಾರ ತಿಳಿಸಿದ್ದಾರೆ.

ವಿಶ್ವದ 12 ಶ್ರೇಷ್ಠ ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ. ಅದರಲ್ಲಿ ಏಳು ಮಂದಿ ವಿದೇಶಿಗರು ಮತ್ತು ಚೋಪ್ರಾ ಸೇರಿದಂತೆ ಐವರು ಭಾರತದ ಅಥ್ಲೀಟ್‌ಗಳು ಇದ್ದಾರೆ. ಸಚಿನ್ ದೇವ್, ಕಿಶೋರ್ ಜೇನಾ, ರೋಹಿತ್ ಯಾದವ್ ಮತ್ತು ಸಾಹಿಲ್ ಸಿಲ್ವಾಲ್ ಅವರು ಉಳಿದ ನಾಲ್ವರಾಗಿದ್ದಾರೆ.

ಎರಡು ಬಾರಿಯ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್, ರಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ, ಜರ್ಮನಿಯ ಥಾಮಸ್ ರೋಹ್ಲರ್, ವಿಶ್ವ ಚಾಂಪಿಯನ್, ಕೆನ್ಯಾದ ಜೂಲಿಯಸ್ ಯೆಗೊ, ಅಮೆರಿಕದ ಕರ್ಟಿಸ್ ಥಾಂಪ್ಸನ್, ಜಪಾನಿನ ಗೆಂಕಿ ಡೀನ್, ಶ್ರೀಲಂಕಾದ ರುಮೇಶ್ ಪಥಿರಾಗೆ, ಬ್ರೆಜಿಲ್‌ನ ಲೂಯಿಸ್ ಮಾರಿಸಿಯೊ ಡಿಸಿಲ್ವಾ ಅವರು ಕಣದಲ್ಲಿರುವ ವಿದೇಶಿ ಅಥ್ಲೀಟ್‌ಗಳಾಗಿದ್ದಾರೆ.

'ಇಷ್ಟು ಕಡಿಮೆ ಅವಧಿಯಲ್ಲಿ ಈ ಸ್ಪರ್ಧೆಯ ಆಯೋಜನೆಯನ್ನು ಮಾಡುತ್ತಿರುವುದು ಸಂತಸದ ಸಂಗತಿಯಾಗಿದೆ. ಇದಕ್ಕಾಗಿ ಬಹಳಷ್ಟು ಜನರು ಶ್ರಮಪಟ್ಟಿದ್ದಾರೆ.

ನೀರಜ್ ಚೋಪ್ರಾ

ಎಎಫ್‌ಐ, ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಮತ್ತು ನಮ್ಮ ಪಾಲುದಾರರ ಸಹಕಾರದಿಂದ ಇದು ಸಾಧ್ಯವಾಗುತ್ತಿದೆ. ಈ ಕಾರ್ಯಕ್ರಮವನ್ನು ಬೃಹತ್ ಮತ್ತು ಅವಿಸ್ಮರಣೀಯವಾಗಿ ಆಯೋಜಿಸುವುದು ನಮ್ಮ ಗುರಿ. ಜುಲೈ 5ರಂದು ಸ್ಪರ್ಧೆ ನಡೆಯಲಿದೆ' ಎಂದು ಜೆಎಸ್‌ಡಬ್ಲ್ಯು ಕ್ರೀಡಾ ವಿಭಾಗದ ಮುಖ್ಯ ವಾಣಿಜ್ಯ ಅಧಿಕಾರಿ ಕರಣ್ ಯಾದವ್ ತಿಳಿಸಿದ್ದಾರೆ.

ಈ ಸ್ಪರ್ಧೆಗೆ ವಿಶ್ವ ಅಥ್ಲೆಟಿಕ್ಸ್ (ಡಬ್ಲ್ಯುಎ) ಯಿಂದ ಮಾನ್ಯತೆ ದೊರೆತಿದೆ. ಈ ಮೊದಲು ಸ್ಪರ್ಧೆಯನ್ನು ಪಂಚಕುಲಾದಲ್ಲಿ ಆಯೋಜಿಸಲಾಗಿತ್ತು. ಆದರೆ ಅಲ್ಲಿಯ ಕ್ರೀಡಾಂಗಣದಲ್ಲಿ ಟಿ.ವಿ ನೇರಪ್ರಸಾರಕ್ಕೆ ಅಗತ್ಯವಿದ್ದ ಬೆಳಕಿನ ವ್ಯವಸ್ಥೆ ಸೂಕ್ತವಾಗಿರದ ಕಾರಣ ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ.

ಟಿಕೆಟ್ ದರ: ಈ ಸ್ಪರ್ಧೆಯನ್ನು ವೀಕ್ಷಿಸಲು ಟಿಕೆಟ್‌ಗಳ ದರವನ್ನು ಪ್ರಕಟಿಸಲಾಗಿದೆ. ₹199 ರಿಂದ ₹9,999 ವರೆಗೆ ನಿಗದಿ ಮಾಡಲಾಗಿದೆ. ಐದು ಕಾರ್ಪೊರೇಟ್ ಬಾಕ್ಸ್‌ಗಳಿವೆ. ಪ್ರತಿಯೊಂದರಲ್ಲಿ 15 ಅತಿಥಿಗಳಿಗೆ ಅವಕಾಶವಿದೆ. ಈ ಬಾಕ್ಸ್‌ಗಳ ಪ್ರತಿ ಟಿಕೆಟ್‌ಗೆ ₹ 44,999 ನಿಗದಿಪಡಿಸಲಾಗಿದೆ.

ಬ್ಯಾಡ್ಮಿಂಟನ್: ಸಿಂಧು ಶುಭಾರಂಭ

ಜಕಾರ್ತ (ಪಿಟಿಐ): ಭಾರತದ ತಾರೆ ಪಿ.ವಿ. ಸಿಂಧು ಅವರು ಮಂಗಳವಾರ ಆರಂಭವಾದ ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತು ಪ್ರವೇಶಿಸಿದರು. ಆದರೆ, ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಒಲಿಂಪಿಕ್ ಡಬಲ್ ಪದಕ ವಿಜೇತೆ ಸಿಂಧು ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 22-20, 21-23, 21-15ರ ಮೂರು ಗೇಮ್‌ಗಳ ಹೋರಾಟದಲ್ಲಿ ಜಪಾನ್‌ನ ನೊಜೊಮಿ ಒಕುಹರಾ ಅವರನ್ನು ಸೋಲಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 17ನೇ ಸ್ಥಾನದಲ್ಲಿರುವ ಸಿಂಧು ಅವರಿಗೆ ಮುಂದಿನ ಸುತ್ತಿನಲ್ಲಿ ಕಠಿಣ ಸವಾಲು ಎದುರಾಗಿದೆ. ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಪೋರ್ನ್‌ಪವಿ ಚೋಚುವಾಂಗ್ (ಥಾಯ್ಲೆಂಡ್) ಅವರೊಂದಿಗೆ ಸೆಣಸಲಿದ್ದಾರೆ.

2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಸೇನ್ ಪುರುಷರ ಸಿಂಗಲ್ಸ್‌ನಲ್ಲಿ 11-21, 22-20, 15-21 ಅವರು ವಿಶ್ವದ ಎರಡನೇ ಕ್ರಮಾಂಕದ ಶಿ ಯು ಕಿ (ಚೀನಾ) ಅವರಿಗೆ ಸೋತರು. ಬೆನ್ನುನೋವಿನ ಕಾರಣಕ್ಕೆ ಮಲೇಷ್ಯಾ ಓಪನ್

ಭಾರತದ ಪಿ.ವಿ. ಸಿಂಧು

ಟೂರ್ನಿಯಿಂದ ಹೊರಗುಳಿದಿದ್ದ 23 ವರ್ಷದ ಸೇನ್ ಚೇತರಿಸಿಕೊಂಡು ಇಲ್ಲಿ ಉತ್ತಮ ಹೋರಾಟ ತೋರಿದರು.

ಭಾರತದ ಮತ್ತೊಬ್ಬ ಆಟಗಾರ ಎಚ್‌.ಎಸ್‌. ಪ್ರಣಯ್ 17-21, 18-21 ಅಂತರದಲ್ಲಿ ಇಂಡೊನೇಷ್ಯಾದ ಅಲ್ವಿ ಫರ್ಹಾನ್ ಅವರಿಗೆ ಮಣಿದರು.

ಸಾತ್ವಿಕ್–ಚಿರಾಗ್ ಮುನ್ನಡೆ: ಭಾರತದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಶುಭಾರಂಭ ಮಾಡಿತು. ಭಾರತದ ಆಟಗಾರರು 18-21, 21-18, 21-14ರಿಂದ ಇಂಡೊನೇಷ್ಯಾದ ಲಿಯೋ ರೋಲಿ ಕಾರ್ನಾಂಡೊ ಮತ್ತು ಬಾಗಸ್ ಮೌಲಾನಾ ಅವರನ್ನು ಸೋಲಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಯುಎಇಯ ಜೆಪಿ ಅಕಾಡೆಮಿಗೆ ಕಾಶ್ಮೀರದ ಅತೀಕಾ

ದುಬೈ (ಪಿಟಿಐ): ಕಾಶ್ಮೀರದ ಹತ್ತು ವರ್ಷ ವಯಸ್ಸಿನ ರೇಸಿಂಗ್ ಕ್ರೀಡಾಪಟು ಅತೀಕಾ ಮೀರ್, ಯುಎಇನ ಎ.ಕೆ. ಸಿ.ಇ.ಎಲ್ ಜಿ.ಪಿ ಅಕಾಡೆಮಿ ನಡೆಸಿಕೊಡುವ ವೃತ್ತಿಪರ ಮೋಟಾರ್ ಸ್ಪೋರ್ಟ್ ತರಬೇತಿಗೆ ಆಯ್ಕೆಯಾಗಿದ್ದಾಳೆ.

ಅತೀಕಾ ಮೀರ್

ಈ ಅಕಾಡೆಮಿಯು ಉತ್ತಮ ಮೋಟಾರ್‌ಸ್ಪೋರ್ಟ್ ತಂಡವನ್ನು ಹೊಂದಿದ್ದು, ಫಾರ್ಮುಲಾ 4, ಫಾರ್ಮುಲಾ 3 ಸೇರಿ ವಿಶ್ವಮಟ್ಟದ ಸ್ಪರ್ಧೆಯಲ್ಲಿ ಅವರು ಭಾಗವಹಿಸಿದ್ದಾರೆ.

'ರೇಸಿಂಗ್ ನನಗೆ ಸರ್ವಸ್ವ. ಎ.ಕೆ. ಸಿ.ಇ.ಎಲ್ ಜಿ.ಪಿ ಅಕಾಡೆಮಿಯ ತರಬೇತಿ ಶಿಬಿರಕ್ಕೆ ಆಯ್ಕೆಯಾಗಬೇಕೆಂಬ ಕನಸು ನನಸಾಗಿದೆ. ಭವಿಷ್ಯದಲ್ಲಿ ಫಾರ್ಮುಲಾ ಒನ್ ರೇಸ್‌ನಲ್ಲಿ ಭಾಗ ವಹಿಸುತ್ತೇನೆಂಬ ದೃಢವಿಶ್ವಾಸವಿದೆ. ಅದಕ್ಕಾಗಿ ಕಷ್ಟಪಡಲು ಸಿದ್ಧಳಿದ್ದೇನೆ' ಎಂದು ಅತೀಕಾ ಪ್ರತಿಕ್ರಿಯಿಸಿದ್ದಾಳೆ.

ಮೇಲ್ಮೈಯ ಕೆಳಗೆ ನೋಡಿದಾಗ ನೀವು ಗಮನಿಸುವಿರಿ ಭಾರತದ ಮೊಟ್ಟಮೊದಲ ಪ್ರೀ-ಪೇಂಟೆಡ್ ಸ್ಟೀಲ್, ಇದನ್ನು ಒಳಗಿನಿಂದಲೇ ತುಕ್ಕಿನೊಂದಿಗೆ ಹೋರಾಡುವಂತೆ ನಿರ್ಮಿಸಲಾಗಿದೆ. ಪ್ರಸ್ತುತವಿದೆ Optigal®, ಭಾರತದ ಅತ್ಯಾಧುನಿಕ ಸಬ್‌ಸ್ಟ್ರೇಟ್ ತಂತ್ರಜ್ಞಾನ. ಪೇಟೆಂಟ್ ಮಾಡಲಾದ ಈ ಮ್ಯಾಗ್ನೀಶಿಯಮ್ ಆಧಾರಿತ ಅಲಾಯ್, ತುಕ್ಕಿನ ವಿರುದ್ಧ ಅತ್ಯದ್ಭುತ ಸಂರಕ್ಷಣೆಯನ್ನು ಒದಗಿಸುತ್ತದೆ. ಅಲ್ಲದೇ ಅತ್ಯುತ್ತಮ ಸವೆತ ನಿರೋಧಕತೆ ಹಾಗೂ ಸುದೀರ್ಘ ಬಾಳಿಕೆಯನ್ನೂ ಒದಗಿಸುತ್ತದೆ. ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಅತ್ಯಂತ ಬಾಳಿಕೆ ನೀಡುವ ಪರಿಹಾರವಾಗಿರುವ Optigal® ನಿಮ್ಮ ಪ್ರೊಜೆಕ್ಟ್ ಗಳನ್ನು ಅತ್ಯಂತ ಸುಂದರವಾಗಿರಿಸಿ ವರ್ಷಾನುವರ್ಷ ಬಾಳುವಂತೆ ನೋಡಿಕೊಳ್ಳುತ್ತದೆ.

ಅತ್ಯುತ್ತಮ ಕಟ್-ಎಜ್ ಸಂರಕ್ಷಣೆ
ಸುಧಾರಿತ ಸವೆತ ನಿರೋಧಕತೆ
ಪರಿಸರ-ಸ್ನೇಹಿ ಮತ್ತು ದೀರ್ಘಬಾಳಿಕೆ
ಪ್ರೀಮಿಯಮ್ ವಾರಂಟಿ ಉತ್ಪನ್ನ